# ಕುರ್‌ಆನ್ ಎಲ್ಲರಿಗಾಗಿ

ಮುಹಮ್ಮದ್ ಫಾರೂಕ್ ಖಾನ್, ಎಂ.ಏ.

ಪರಮ ದಯಾಮಯ ಕರುಣಾಳುವೂ ಆದ ಅಲ್ಲಾಹನ ನಾಮದಿಂದ

# ಮುನ್ನುಡಿ

'ಕುರ್‌ಆನ್ ಎಲ್ಲರಿಗಾಗಿ' ಎಂಬುದು ಪವಿತ್ರ ಕುರ್‌ಆನಿನ ಕೆಲವು ಆಯ್ದ ಸೂಕ್ತಗಳ ಒಂದು ಸಂಕಲನವಾಗಿದೆ. ಹಾಗೆ ಆಯ್ಕೆ ಮಾಡುವಾಗ ಎರಡು ವಿಷಯಗಳನ್ನು ಪ್ರಮುಖವಾಗಿ ಗಮನದಲ್ಲಿಡಲಾಗಿದೆ. ಮೊದಲನೆಯದು, ಇಲ್ಲಿ ಸಂಗ್ರಹಿಸಿ ಕೊಡಲಾಗಿರುವ ಸೂಕ್ತಗಳು ಇಸ್ಲಾಮಿನ ಸರಿಯಾದ ಪರಿಚಯವನ್ನು ಓದುಗನಿಗೆ ನೀಡುವಂತಾಗಬೇಕು. ಎರಡನೆಯದು, ಪವಿತ್ರ ಕುರ್‌ಆನಿನ ಬೋಧನೆಗಳು ಅಕ್ರಮ ಮತ್ತು ಕಠೋರತೆಯನ್ನು ಪ್ರತಿಪಾದಿಸುತ್ತದೆಂಬ ಆರೋಪ ನಿರಾಧಾರವಾದುದೆಂಬುದು ಜನರಿಗೆ ಸ್ಪಷ್ಟವಾಗಿ ಮನವರಿಕೆಯಾಗಬೇಕು.

ಪವಿತ್ರ ಕುರ್‌ಆನ್ ಮನುಷ್ಯನನ್ನು ಚಿಂತನೆ ಮತ್ತು ಚಾರಿತ್ರ್ಯದ ಪರಮೋನ್ನತ ಸ್ಥಾನಕ್ಕೆ ಏರಿಸಬಯಸುತ್ತದೆ. ಅಂತಹ ಉನ್ನತಿಯನ್ನು ನಮಗೆ ಊಹಿಸಲಿಕ್ಕೂ ಸಾಧ್ಯವಿಲ್ಲ. ಕುರ್‌ಆನಿನ ಬೋಧನೆಗಳಲ್ಲಿ ಮನುಷ್ಯನ ಮನಮಸ್ತಿಷ್ಕಗಳ ಸಾಮರ್ಥ್ಯದ ಬಗ್ಗೆ ಇರುವ ವಿವರಣೆಗಳು ಆ ಗ್ರಂಥದ ವೈಶಿಷ್ಟ್ಯವಾಗಿದೆ.

ಕುರ್‌ಆನ್ ಒಂದು ಜ್ಯೋತಿ. ಅದು ಇರುವ ಕಡೆ ಅಂಧಕಾರ ಮತ್ತು ಪಥಭ್ರಷ್ಟತೆಯ ಸಾಧ್ಯತೆ ಲವಲೇಶವೂ ಇರುವುದಿಲ್ಲ. ಆದರೆ ಅದರಿಂದ ಪ್ರಯೋಜನ ಪಡೆಯುವ ಪ್ರಯತ್ನ ನಡೆಸಬೇಕಾದುದು ಅವಶ್ಯಕ. ಈ ಗ್ರಂಥವು ಇಸ್ಲಾಮ್ ಮತ್ತು ಪವಿತ್ರ ಕುರ್‌ಆನಿಗೆ ಸಂಬಂಧಿಸಿದಂತೆ ದೇಶ ಬಾಂಧವರಲ್ಲಿರುವ ಹೆಚ್ಚಿನ ತಪ್ಪುತಿಳುವಳಿಕೆಗಳನ್ನು ನೀಗಿಸಬಹುದೆಂದು ಭಾವಿಸುತ್ತೇನೆ. ಈ ಸಂಕಲನದಲ್ಲಿರುವ ಸೂಕ್ತಗಳನ್ನು ಅನುವಾದಿತ ಕುರ್‌ಆನ್ ಗ್ರಂಥದಿಂದ ಪಡೆಯಲಾಗಿದೆ.

ಅಲ್ಲಾಹನು ನಮ್ಮ ಈ ಪ್ರಯತ್ನವನ್ನು ಸ್ವೀಕರಿಸಲಿ. ಈ ಕೃತಿಯಿಂದ ಉದ್ದೇಶಿಸಲಾಗಿರುವ ಪ್ರಯೋಜನ ಜನರಿಗೆ ದೊರೆಯಲಿ ಎಂದು ಪ್ರಾರ್ಥಿಸುತ್ತೇನೆ.

ಡಾ. ಮುಹಮ್ಮದ್ ಫಾರೂಕ್ ಖಾನ್

# ಅನುಕ್ರಮಣಿಕೆ


- ಪ್ರಾರ್ಥನೆ 5
- ಆಹ್ವಾನ 5
- ಇಸ್ಲಾಮ್ 7
- ಈಮಾನ್ 8
- ಏಕದೇವತ್ವ 9
- ದೇವಸಂದೇಶವಾಹಕರು (ಪ್ರವಾದಿಗಳು) 18
- ಮುಹಮ್ಮದ್(ಸ) 19
- ಅಲ್ಲಾಹನ ಕಾನೂನು 21
- ಪರಲೋಕ 22
- ಒಳಿತು-ಕೆಡುಕು 25
- ಅಲ್ಲಾಹನ ಆಜ್ಞಾಪಾಲಕ 27
- ಸತ್ಯಧಿಕ್ಕಾರಿ 29
- ಕಪಟವಿಶ್ವಾಸಿಗಳು 30
- ಬಹುದೇವವಿಶ್ವಾಸಿಗಳು 32
- ಅಲ್ಲಾಹನತ್ತ ಧಾವಿಸಿರಿ 34
- ಅಲ್ಲಾಹನು ಸರ್ವಶಕ್ತನು ಮತ್ತು ಪರಮಾಧಿಕಾರವುಳ್ಳವನು 35
- ಧರ್ಮದ ಸ್ತಂಭಗಳು 39
- ಅಲ್ಲಾಹನ ಮಾರ್ಗದಲ್ಲಿ ಹೋರಾಟ 40
- ಪ್ರತೀಕಾರ 41
- ಯುದ್ಧ 40
- ಭಯ 42
- ವಿಜಯ 43
- ಮರಣ 43
- ಅಸಡ್ಡೆ 44
- ಮೋಸ 45
- ಅಲ್ಲಾಹನು ಎಲ್ಲರ ಸೃಷ್ಟಿಕರ್ತ ಮತ್ತು ಪರಮ ಸತ್ಯವಾಗಿದ್ದಾನೆ 46
- ಅಲ್ಲಾಹನು ಸಜ್ಜನರನ್ನು ಪ್ರೀತಿಸುತ್ತಾನೆ 47
- ಮೇರೆ ಮೀರದಿರಲಿ 49
- ಆಜ್ಞೆಗಳು 51
- ಇತಿಹಾಸ ಪಾಠ 57
- ಇತರ ವಿಷಯಗಳು 59
- ಆತ್ಮಶುದ್ಧಿ 60

# ಕುರ್‌ಆನ್ ಎಲ್ಲರಿಗಾಗಿ

## ಪ್ರಾರ್ಥನೆ

"ಪರಮ ದಯಾಳುವೂ ಕರುಣಾನಿಧಿಯೂ ಆದ ಅಲ್ಲಾಹನ ನಾಮದಿಂದ. ಅಲ್ಲಾಹನಿಗೇ ಸರ್ವಸ್ತುತಿ. ಅವನು ಸಕಲ ವಿಶ್ವದ ಪ್ರಭು. ಪರಮ ದಯಾಳು, ಕರುಣಾನಿಧಿ. ನಿರ್ಣಾಯಕ ದಿನದ ಅಧಿಪತಿ (ಆದ ಪ್ರಭುವೇ)! ನಾವು ನಿನಗೆ ಮಾತ್ರ ಇಬಾದತ್ ಮಾಡುತ್ತೇವೆ ಮತ್ತು ನಿನ್ನಿಂದ ಮಾತ್ರ ಸಹಾಯ ಬೇಡುತ್ತೇವೆ. ನಮಗೆ 'ಸನ್ಮಾರ್ಗ'ವನ್ನು ತೋರಿಸು. ನೀನು ಅನುಗ್ರಹಿಸಿದವರ ಮಾರ್ಗ. ನಿನ್ನ ಕ್ರೋಧಕ್ಕೆ ಪಾತ್ರರಾದವರ ಮಾರ್ಗವಲ್ಲ. (ನೀನು ತೋರಿದ) ದಾರಿಯನ್ನುತಪ್ಪಿ ನಡೆದವರ ಮಾರ್ಗವೂ ಅಲ್ಲ." (ಅಲ್ ಫಾತಿಹಾ: 1: 1–7)

## ಆಹ್ವಾನ

"ಇದು 'ದೈವಿಕ' ಗ್ರಂಥ; ಸಂದೇಹಾತೀತವಿದು. ಭಯಭಕ್ತಿಯುಳ್ಳವರಿಗೆ ಇದು ಮಾರ್ಗದರ್ಶಿ. ಪರೋಕ್ಷದ ಮೇಲೆ ವಿಶ್ವಾಸವಿರಿಸುವವರಿಗೆ, ನಮಾಝುನ್ನು ಸಂಸ್ಥಾಪಿಸುವವರಿಗೆ ನಾವು ನೀಡಿರುವ ಸಂಪತ್ಸೌಕರ್ಯಗಳಿಂದ ವ್ಯಯಿಸುವವರಿಗೆ, ನಿಮಗೆ ಅವತೀರ್ಣಗೊಳಿಸಿದ ಗ್ರಂಥದ (ಅರ್ಥಾತ್ ಕುರ್‌ಆನ್) ಮತ್ತು ನಿಮಗಿಂತ ಮೊದಲು ಅವತೀರ್ಣಗೊಳಿಸಿದ್ದ ಎಲ್ಲ ಗ್ರಂಥಗಳ ಮೇಲೆ ವಿಶ್ವಾಸವಿಡುವವರಿಗೆ ಮತ್ತು ಪರಲೋಕದ ಮೇಲೆ ದೃಢ ವಿಶ್ವಾಸವಿಡುವವರಿಗೆ (ಇದು ಮಾರ್ಗದರ್ಶಿ). ಅಂತಹವರು ತಮ್ಮ ಪ್ರಭುವಿನ ಸನ್ಮಾರ್ಗದಲ್ಲಿದ್ದಾರೆ ಮತ್ತು ಅವರೇ ಯಶಸ್ವಿಯಾಗುವವರು." (ಅಲ್ ಬಕರ: 2–5)

"ನೀವು ಅವರು ಇರಿಸಿಕೊಂಡಿರುವ ಆ ಭಿನ್ನಾಭಿಪ್ರಾಯಗಳ ವಸ್ತುಸ್ಥಿತಿಯನ್ನು ಅವರಿಗೆ ವಿವರಿಸಲಿಕ್ಕಾಗಿ ನಾವು ಈ ಗ್ರಂಥವನ್ನು ನಿಮಗೆ ಅವತೀರ್ಣಗೊಳಿಸಿರುತ್ತೇವೆ." (ಅನ್ನಹ್ಲ್: 64)

"ಹೇಳಿರಿ: ಈಗ ಸತ್ಯವು ಬಂದು ಬಿಟ್ಟಿತು. ಇನ್ನು ಮಿಥ್ಯದಿಂದ ಏನು ಮಾಡಲಿಕ್ಕೂ ಆಗದು." (ಸಬಾ: 49)

"ಅಲ್ಲಾಹನ ಕಡೆಗೆ ಆಹ್ವಾನಿಸಿದ, ಸತ್ಕರ್ಮವೆಸಗಿದ ಮತ್ತು 'ನಾನು ಮುಸ್ಲಿಮ್' ಎಂದು ಹೇಳುತ್ತಿದ್ದ ವ್ಯಕ್ತಿಯ ಮಾತಿಗಿಂತ ಶ್ರೇಷ್ಠವಾದ ಮಾತು ಇನ್ನಾರದಾಗಿರಲು ಸಾಧ್ಯ!" (ಫುಸ್ಸಿಲತ್: 33)

"ಓ ಪೈಗಂಬರರೇ, ಯುಕ್ತಿ ಹಾಗೂ ಸದುಪದೇಶದ ಮೂಲಕ ನಿಮ್ಮ ಪ್ರಭುವಿನ ಮಾರ್ಗಕ್ಕೆ ಜನರನ್ನು ಆಹ್ವಾನಿಸಿರಿ ಮತ್ತು ಜನರೊಂದಿಗೆ ಅತ್ಯುತ್ತಮ ರೀತಿಯಿಂದ ವಾದಿಸಿರಿ." (ಅನ್ನಹ್ಲ್: 125)

"ನಿಮ್ಮಲ್ಲಿ ಸತ್ಕರ್ಮದ ಕಡೆಗೆ ಆಹ್ವಾನಿಸುವ, ಒಳಿತನ್ನು ಆಜ್ಞಾಪಿಸುವ ಮತ್ತು ಕೆಡುಕುಗಳಿಂದ ತಡೆಯುವಂತಹ ಜನಕೂಟವೊಂದು ಇರಬೇಕಾದುದು ಅತ್ಯಗತ್ಯ." (ಆಲಿ ಇಮ್ರಾನ್: 104)

"ಧರ್ಮದ ವಿಷಯದಲ್ಲಿ ಯಾವುದೇ ಒತ್ತಾಯ–ಬಲಾತ್ಕಾರಗಳಿಲ್ಲ." (ಅಲ್ ಬಕರ: 256)

"ನಾವಂತು ಮಿಥ್ಯದ ಮೇಲೆ ಸತ್ಯದ ಹೊಡೆತ ಬೀಳಿಸುತ್ತೇವೆ. ಇದು ಮಿಥ್ಯದ ತಲೆಯನ್ನು ಒಡೆದು ಹಾಕುತ್ತದೆ ಮತ್ತು ಅದು ನೋಡುತ್ತಿದ್ದಂತೆಯೇ ಅಳಿದು ಹೋಗುತ್ತದೆ." (ಅಲ್ ಅಂಬಿಯಾ: 18)

"ಸಂದೇಶವಾಹಕರೇ, ಕೆಡುಕನ್ನು ಅತ್ಯುತ್ತಮ ವಿಧಾನದಿಂದ ನೀಗಿಸಿರಿ... ಮತ್ತು ಹೀಗೆ ಪ್ರಾರ್ಥಿಸಿರಿ: ನನ್ನ ಪ್ರಭೂ, ನಾನು ಶೈತಾನರ ದುಷ್ಪ್ರೇರಣೆಗಳಿಂದ ನಿನ್ನ ಅಭಯ ಯಾಚಿಸುತ್ತೇನೆ. ನನ್ನ ಪ್ರಭೂ, ಅವರು ನನ್ನ ಬಳಿ ಸುಳಿಯುವುದರಿಂದಲೂ ನಿನ್ನ ಅಭಯ ಯಾಚಿಸುತ್ತೇನೆ." (ಅಲ್ ಮೂಮಿನೂನ್: 96–98)

"ಅಲ್ಲಾಹನು ಸರ್ವೋನ್ನತನು. ಯಥಾರ್ಥ ಸಾರ್ವಭೌಮನು. ಅವನ ಹೊರತು ಇನ್ನಾವ ದೇವನೂ ಇಲ್ಲ. ಮಹಾ ವಿಶ್ವಸಿಂಹಾಸನದ ಒಡೆಯ." (ಅಲ್ ಮೂಮಿನೂನ್: 116)

"ಪೈಗಂಬರರೇ, ಹೇಳಿರಿ: ನನ್ನೊಡೆಯಾ, ಕ್ಷಮಿಸು ಮತ್ತು ಕರುಣೆ ತೋರು; ನೀನು ಸಕಲ ಕರುಣಾಳುಗಳಿಗಿಂತಲೂ ಉತ್ತಮ ಕರುಣಾಮಯಿಯಾಗಿರುತ್ತಿ." (ಅಲ್ ಮೂಮಿನೂನ್: 118)

"ನಮ್ಮ ಪ್ರಭು ಅಲ್ಲಾಹನು ಎಂದು ಹೇಳಿ ಆ ಬಳಿಕ ಅದರಲ್ಲೇ ಸ್ಥಿರವಾಗಿ ನಿಂತು ಬಿಟ್ಟವರ ಮೇಲೆ ಖಂಡಿತವಾಗಿಯೂ ದೇವಚರರು ಇಳಿಯುತ್ತಾರೆ ಮತ್ತು ಹೇಳುತ್ತಾರೆ: ಹೆದರಬೇಡಿರಿ, ಖೇದಿಸಬೇಡಿರಿ. ನಿಮಗೆ ವಾಗ್ದಾನ ಮಾಡಲಾಗಿರುವ ಸ್ವರ್ಗದ ಸುವಾರ್ತೆಯಿಂದ ಸಂತಸಗೊಳ್ಳಿರಿ. ನಾವು ಈ ಲೋಕದ ಜೀವನದಲ್ಲೂ ಪರಲೋಕದಲ್ಲೂ ನಿಮ್ಮ ಸಂಗಾತಿಗಳಾಗಿದ್ದೇವೆ. ಅಲ್ಲಿ ನೀವು ಬಯಸಿದ್ದೆಲ್ಲವೂ

ನಿಮಗೆ ಸಿಗುವುದು. ನೀವು ಆಶಿಸಿದ ಪ್ರತಿಯೊಂದು ವಸ್ತುವೂ ನಿಮ್ಮದಾಗುವುದು. ಮಹಾ ಕ್ಷಮಾಶೀಲನೂ ಕರುಣಾನಿಧಿಯೂ ಆಗಿರುವವನ ಕಡೆಯಿಂದ ನಿಮಗಿರುವ ಆತಿಥ್ಯವಿದು." (ಫುಸ್ಸಿಲತ್: 30–32)

"ಸಂದೇಶವಾಹಕರೇ, ಒಳಿತು ಮತ್ತು ಕೆಡುಕು ಸರಿಸಮಾನವಲ್ಲ. ನೀವು ಕೆಡುಕನ್ನು ಅತ್ಯುತ್ತಮ ಒಳಿತಿನ ಮೂಲಕ ದೂರೀಕರಿಸಿರಿ. ನಿಮ್ಮೊಂದಿಗೆ ಹಗೆತನ ಕಟ್ಟಿಕೊಂಡವನು ನಿಮ್ಮ ಆಪ್ತ ಮಿತ್ರನಾಗಿ ಬಿಡುವುದನ್ನು ನೀವು ಕಾಣುವಿರಿ. ಈ ಗುಣವಿಶೇಷವು ಸಹನಶೀಲರಿಗಲ್ಲದೆ ಇನ್ನಾರಿಗೂ ಲಭ್ಯವಾಗುವುದಿಲ್ಲ. ಈ ಸ್ಥಾನವು ಮಹಾ ಅದೃಷ್ಟಶಾಲಿಗಳ ಹೊರತು ಮತ್ತಾರಿಗೂ ಪ್ರಾಪ್ತವಾಗುವುದಿಲ್ಲ. ನಿಮಗೆ ಶೈತಾನನ ಕಡೆಯಿಂದೇನಾದರೂ ಪ್ರಚೋದನೆಯುಂಟಾದರೆ ನೀವು ಅಲ್ಲಾಹನ ಅಭಯವನ್ನು ಯಾಚಿಸಿರಿ. ನಿಶ್ಚಯವಾಗಿಯೂ ಅವನು ಸಕಲವನ್ನೂ ಆಲಿಸುತ್ತಾನೆ ಮತ್ತು ಸಕಲವನ್ನೂ ಅರಿತಿದ್ದಾನೆ." (ಫುಸ್ಸಿಲತ್: 34–36)

"ನಿಮ್ಮ ಪ್ರಭುವಿಗೆ ನಿಕಟವಾಗಿರುವ ದೇವಚರರು ಆಹೋರಾತ್ರಿ ಅವನನ್ನು ಸ್ತುತಿಸುತ್ತಿದ್ದಾರೆ ಮತ್ತು ಅವರು ಎಂದಿಗೂ ಬಳಲುವುದಿಲ್ಲ." (ಫುಸ್ಸಿಲತ್: 38)

## ಇಸ್ಲಾಮ್

"ಅಲ್ಲಾಹನ ಬಳಿ ಧರ್ಮವು ಇಸ್ಲಾಮ್ ಮಾತ್ರ." (ಆಲಿ ಇಮ್ರಾನ್: 19)

"ಇವರೇನು ಅಲ್ಲಾಹನ ಅನುಸರಣಾ ರೀತಿಯನ್ನು (ಧರ್ಮವನ್ನು) ತ್ಯಜಿಸಿ ಬೇರೆ ಯಾವುದಾದರೂ ರೀತಿಯನ್ನು ಅನುಸರಿಸಲು ಇಷ್ಟಪಡುತ್ತಾರೆಯೇ? ವಸ್ತುತಃ ಆಕಾಶಗಳ ಮತ್ತು ಭೂಮಿಯ ಸಕಲ ವಸ್ತುಗಳೂ ಬಯಸಿಯೋ ಬಯಸದೆಯೋ ಅಲ್ಲಾಹನ ಆಜ್ಞಾಪಾಲಕಗಳಾಗಿಯೇ (ಮುಸ್ಲಿಮ್‌ಗಳಾಗಿಯೇ) ಇವೆ ಮತ್ತು ಸರ್ವರಿಗೂ ಅವನ ಕಡೆಗೇ ಮರಳಲಿಕ್ಕಿದೆ. ಓ ಪೈಗಂಬರರೇ! ಹೇಳಿರಿ: ನಾವು ಅಲ್ಲಾಹನ ಮೇಲೆ ವಿಶ್ವಾಸವಿಟ್ಟಿದ್ದೇವೆ. ನಮ್ಮ ಮೇಲೆ ಅವತೀರ್ಣಗೊಳಿಸಲ್ಪಟ್ಟಿರುವ ಶಿಕ್ಷಣದ ಮೇಲೂ ವಿಶ್ವಾಸವಿಟ್ಟಿದ್ದೇವೆ. ಇಬ್‌ರಾಹೀಮ್, ಇಸ್ಮಾಈಲ್, ಇಸ್‌ಹಾಕ್, ಯಅ್‌ಕೂಬ್ ಮತ್ತು ಯಅ್‌ಕೂಬರ ಸಂತತಿಗಳ ಮೇಲೆ ಅವತೀರ್ಣಗೊಳಿಸಲ್ಪಟ್ಟ ಶಿಕ್ಷಣದ ಮೇಲೂ ವಿಶ್ವಾಸವಿಟ್ಟಿದ್ದೇವೆ. ಮೂಸಾ, ಈಸಾ ಮತ್ತು ಇತರ ಪ್ರವಾದಿಗಳಿಗೆ ಅವರ ಪ್ರಭುವಿನ ಕಡೆಯಿಂದ ನೀಡಲ್ಪಟ್ಟವುಗಳ ಮೇಲೂ ವಿಶ್ವಾಸವಿಟ್ಟಿದ್ದೇವೆ. ನಾವು ಅವರೊಳಗೆ ಭೇದವೆಣಿಸುವುದಿಲ್ಲ ಮತ್ತು ನಾವು ಅಲ್ಲಾಹನ ಆಜ್ಞಾಪಾಲಕ (ಮುಸ್ಲಿಮ್) ಆಗಿರುತ್ತೇವೆ. ಯಾರಾದರೂ ಈ ವಿಧೇಯತೆಯ(ಇಸ್ಲಾಮ್) ಹೊರತು ಯಾವುದಾದರೂ ಇತರ ಪದ್ಧತಿಯನ್ನು ಸ್ವೀಕರಿಸ ಲಿಚ್ಛಿಸಿದರೆ, ಅವನ ಆ ಪದ್ಧತಿಯನ್ನು ಎಷ್ಟು ಮಾತ್ರಕ್ಕೂ ಮಾನ್ಯ ಮಾಡಲಾಗದು ಮತ್ತು ಪರಲೋಕದಲ್ಲಿ ಅವನು ವಿಫಲನೂ ಹತಾಶನೂ ಆಗಿ ತೀರುವನು." (ಆಲಿ ಇಮ್ರಾನ್: 83–85)

"ಅವರಿಗೆ ನೀಡಲಾಗಿದ್ದ ಆದೇಶವು ಅವರು ತಮ್ಮ ಧರ್ಮವನ್ನು ನಿಷ್ಕಳಂಕವಾಗಿ ಅಲ್ಲಾಹನಿಗೆ ಮಾತ್ರ ಮೀಸಲಾಗಿಟ್ಟು ಏಕನಿಷ್ಠೆಯಿಂದ ಅಲ್ಲಾಹನ ದಾಸ್ಯ ಮಾಡಬೇಕು, ನಮಾಝನ್ನು ಸಂಸ್ಥಾಪಿಸಬೇಕು ಮತ್ತು ಝಕಾತನ್ನು ನೀಡಬೇಕು – ಎಂಬುದರ ಹೊರತು ಬೇರೇನೂ ಆಗಿರಲಿಲ್ಲ. ಇದುವೇ ಅತ್ಯಂತ ಸರಿಯಾದ ಧರ್ಮ. ಗ್ರಂಥದವರು ಮತ್ತು ಬಹು ದೇವಾರಾಧಕರ ಪೈಕಿ ಸತ್ಯನಿಷೇಧಿಗಳಾಗಿರುವವರು ಖಂಡಿತವಾಗಿಯೂ ನರಕಾಗ್ನಿಯಲ್ಲಿ ಬೀಳುವರು ಮತ್ತು ಸದಾಕಾಲ ಅದರಲ್ಲಿರುವರು. ಇವರು ಅತ್ಯಂತ ನಿಕೃಷ್ಟ ಸೃಷ್ಟಿಗಳು. ಸತ್ಯವಿಶ್ವಾಸ ಸ್ವೀಕರಿಸಿದವರೂ ಸತ್ಕರ್ಮ ಮಾಡಿದವರೂ ಅತ್ಯುತ್ತಮ ಸೃಷ್ಟಿಗಳು. ಅವರ ಪ್ರತಿಫಲ ಅವರ ಪ್ರಭುವಿನ ಬಳಿ ಶಾಶ್ವತ ನಿವಾಸದ ಸ್ವರ್ಗೋದ್ಯಾನಗಳಾಗಿವೆ. ಅವುಗಳ ತಳಭಾಗದಲ್ಲಿ ಕಾಲುವೆಗಳು ಹರಿಯುತ್ತಿರುವುವು. ಅವರು ಅವುಗಳಲ್ಲಿ ಸದಾಕಾಲ ವಾಸಿಸುವರು. ಅಲ್ಲಾಹನು ಅವರಿಂದ ಸಂಪ್ರೀತನಾದನು ಮತ್ತು ಅವರು ಅಲ್ಲಾಹನಿಂದ ಸಂಪ್ರೀತರಾದರು. ತನ್ನ ಪ್ರಭುವನ್ನು ಭಯಪಟ್ಟವನಿಗೆ ಇದೆಲ್ಲವೂ ಇದೆ." **(ಅಲ್ ಬಯ್ಯಿನ: 5–8)**

"ಆದುದರಿಂದ (ಸಂದೇಶವಾಹಕರೇ ಮತ್ತವರ ಅನುಯಾಯಿಗಳೇ)! ನೀವು ಏಕನಿಷ್ಠೆಯಿಂದ ನಿಮ್ಮ ಮುಖವನ್ನು ಧರ್ಮದ ಕಡೆಗೆ ಕೇಂದ್ರೀಕರಿಸಿರಿ. ಅಲ್ಲಾಹನು ಮಾನವನನ್ನು ಸೃಷ್ಟಿಸಿದ ಪ್ರಕೃತಿಯಲ್ಲೇ ಸ್ಥಿರವಾಗಿರಿ. ಅಲ್ಲಾಹನು ಮಾಡಿದ ರಚನೆಯನ್ನು ಬದಲಾಯಿಸಲಾಗದು. ಇದುವೇ ಸತ್ಯ ಮತ್ತು ಸರಿಯಾದ ಧರ್ಮವಾಗಿದೆ. ಆದರೆ ಹೆಚ್ಚಿನವರು ಅರಿಯುವುದಿಲ್ಲ." **(ಅರ್ರೂಮ್: 30)**

## ಈಮಾನ್

"ನಿಜವಾಗಿ ಮನುಷ್ಯನು ಮಹಾ ನಷ್ಟದಲ್ಲಿದ್ದಾನೆ. ಸತ್ಯವಿಶ್ವಾಸ ಸ್ವೀಕರಿಸಿದ, ಸತ್ಕರ್ಮ ಮಾಡುತ್ತಿದ್ದ ಮತ್ತು ಪರಸ್ಪರ ಸತ್ಯ ಹಾಗೂ ಸಹನೆಯನ್ನು ಉಪದೇಶಿಸುತ್ತಿದ್ದವರ ಹೊರತು." **(ಅಲ್ ಅಸ್ರ್: 2–3)**

"ಖಂಡಿತವಾಗಿಯೂ ಸತ್ಯವಿಶ್ವಾಸಿಗಳು ವಿಜಯಿಗಳಾದರು. ಅವರು ತಮ್ಮ ನಮಾಝಿನಲ್ಲಿ ಭಯಭಕ್ತಿ ತೋರುತ್ತಾರೆ. ನಿರರ್ಥಕ ಕಾರ್ಯಗಳಿಂದ ದೂರವಿರುತ್ತಾರೆ. ಝಕಾತಿನ ನಿಯಮವನ್ನು ಪಾಲಿಸುತ್ತಾರೆ. ತಮ್ಮ ಪತ್ನಿಯರು ಹಾಗೂ ತಮ್ಮ ಅಧೀನವಿರುವ ದಾಸಿಯರ ಹೊರತು ಇತರರಿಂದ ತಮ್ಮ ಗುಪ್ತಾಂಗಗಳನ್ನು ರಕ್ಷಿಸಿಕೊಳ್ಳುತ್ತಾರೆ." **(ಅಲ್ ಮೂಮಿನೂನ್: 1–6)**

"ನೀವು ನಿಮ್ಮ ಮುಖಗಳನ್ನು ಪೂರ್ವ ದಿಕ್ಕಿಗೆ ಅಥವಾ ಪಶ್ಚಿಮ ದಿಕ್ಕಿಗೆ ಮಾಡಿಕೊಳ್ಳುವುದು ಧರ್ಮಶೀಲತೆಯಲ್ಲ. ನಿಜವಾಗಿ ಒಬ್ಬನು ಅಲ್ಲಾಹನನ್ನೂ ನಿರ್ಣಾಯಕ ದಿನವನ್ನೂ ಮಲಾಯಿಕ(ದೇವಚರ)ರನ್ನೂ ಅಲ್ಲಾಹನು ಅವತೀರ್ಣಗೊಳಿಸಿದ ಗ್ರಂಥವನ್ನೂ ಅವನ ಸಂದೇಶವಾಹಕರನ್ನೂ ಹೃತ್ಪೂರ್ವಕ ಒಪ್ಪಿಕೊಳ್ಳುವುದು; ಅಲ್ಲಾಹನ

ಸಂಪ್ರೀತಿಗಾಗಿ ತನ್ನ ಮನಮೆಚ್ಚುಗೆಯ ಸಂಪತ್ತನ್ನು ಬಂಧುಗಳಿಗೆ, ಅನಾಥರಿಗೆ, ನಿರ್ಗತಿಕರಿಗೆ, ಪ್ರಯಾಣಿಕರಿಗೆ, ಸಹಾಯಾರ್ಥಿಗಳಿಗೆ, ದಾಸ್ಯ ವಿಮೋಚನೆಗಾಗಿ ವ್ಯಯಿಸುವುದು; ನಮಾಝನ್ನು ಸಂಸ್ಥಾಪಿಸುವುದು, ಝಕಾತನ್ನು (ಕಡ್ಡಾಯ ದಾನವನ್ನು) ನೀಡುವುದು; ವಾಗ್ದಾನ ಮಾಡಿದರೆ ಪೂರೈಸುವುದು; ಕಷ್ಟ ಕಾರ್ಪಣ್ಯಗಳಲ್ಲಿಯೂ ಸತ್ಯಾಸತ್ಯಗಳ ಸಮರವಾಗುತ್ತಿರುವಾಗಲೂ ಸಹನೆಯಿಂದಿರುವುದೂ ಧರ್ಮಶೀಲತೆಯಾಗಿರುತ್ತದೆ. ಇವರೇ ಸತ್ಯಸಂಧರು ಮತ್ತು ಇವರೇ ಧರ್ಮನಿಷ್ಠರು." (ಅಲ್ ಬಕರ: 177)

"ಪೈಗಂಬರರೇ, ವಿನಯಶೀಲರಿಗೆ ಶುಭವಾರ್ತೆ ನೀಡಿರಿ. ಅಲ್ಲಾಹನ ಪ್ರಸ್ತಾಪವನ್ನು ಕೇಳಿದೊಡನೆ ಅವರ ಹೃದಯಗಳು ಕಂಪಿಸತೊಡಗುತ್ತವೆ. ಅವರ ಮೇಲೆ ಯಾವ ಸಂಕಷ್ಟಗಳು ಬಂದರೂ ತಾಳ್ಮೆ ವಹಿಸುತ್ತಾರೆ, ನಮಾಝನ್ನು ಸಂಸ್ಥಾಪಿಸುತ್ತಾರೆ ಮತ್ತು ನಾವು ಅವರಿಗೆ ನೀಡಿದ ಜೀವನಾಧಾರದಿಂದ ವ್ಯಯಿಸುತ್ತಾರೆ."

(ಅಲ್ ಹಜ್ಜ್: 34–35)

## ಏಕದೇವತ್ವ

"ದೃಷ್ಟಿಗಳು ಅವನನ್ನು ಕಾಣಲಾರವು. ಆದರೆ ಅವನು ದೃಷ್ಟಿಗಳನ್ನು ಕಾಣುತ್ತಾನೆ. ಅವನು ಅತ್ಯಂತ ಸೂಕ್ಷ್ಮದರ್ಶಿಯೂ ಸೂಕ್ಷ್ಮಜ್ಞನೂ ಆಗಿರುತ್ತಾನೆ."

(ಅಲ್ ಅನ್‌ಆಮ್: 103)

"ಹೇಳಿರಿ, ಅವನು ಅಲ್ಲಾಹನು ಏಕೈಕನು. ಅಲ್ಲಾಹನು ಸಕಲರಿಂದಲೂ ನಿರಪೇಕ್ಷನು ಮತ್ತು ಸರ್ವರೂ ಅವನ ಅವಲಂಬಿತರು. ಅವನಿಗೆ ಯಾವುದೇ ಸಂತಾನವಿಲ್ಲ. ಅವನು ಯಾರ ಸಂತಾನವೂ ಅಲ್ಲ ಮತ್ತು ಅವನಿಗೆ ಸರಿಸಮಾನರು ಯಾರೂ ಇಲ್ಲ." (ಅಲ್ ಇಖ್‌ಲಾಸ್: 1–4)

"ಅಲ್ಲಾಹನು ಚಿರಂತನು, ಸ್ವಯಂ ಜೀವಂತನು. ಅಖಿಲ ಪ್ರಪಂಚದ ನಿಯಂತ್ರಕನಾದ ಆತನ ಹೊರತು ಆರಾಧ್ಯನಾರೂ ಇಲ್ಲ. ಅವನಿಗೆ ತೂಕಡಿಕೆಯಾಗಲೀ ನಿದ್ರೆಯಾಗಲೀ ಬಾಧಿಸುವುದಿಲ್ಲ. ಆಕಾಶಗಳಲ್ಲಿ ಮತ್ತು ಭೂಮಿಯಲ್ಲಿ ಇರುವುದೆಲ್ಲವೂ ಆತನದೇ. ಆತನ ಸನ್ನಿಧಿಯಲ್ಲಿ ಆತನ ಅಪ್ಪಣೆಯಿಲ್ಲದೆ ಶಿಫಾರಸು ಮಾಡತಕ್ಕವನಾರಿದ್ದಾನೆ? ದಾಸರ ಮುಂದಿರುವುದನ್ನೂ ಆತನು ಬಲ್ಲನು. ಅವರಿಂದ ಮರೆಯಾಗಿರುವುದನ್ನೂ ಆತನು ಬಲ್ಲನು. ಆತನು ಸ್ವತಃ ತಿಳಿಯಗೊಳಿಸುವ ಹೊರತು ಆತನ ಜ್ಞಾನ ಭಂಡಾರದಿಂದ ಯಾವ ವಿಷಯವನ್ನೂ ಅವರು ತಿಳಿಯಲಾರರು. ಅವನ ಅಧಿಕಾರವು ಆಕಾಶಗಳನ್ನೂ ಭೂಮಿಯನ್ನೂ ವ್ಯಾಪಿಸಿದೆ. ಅವುಗಳ ಸಂರಕ್ಷಣೆಯು ಆತನಿಗೆ ದಣಿಸುವಂತಹ ಕಾರ್ಯವಲ್ಲ. ಅವನು ಏಕೈಕ ಮಹೋನ್ನತನೂ ಸರ್ವಶ್ರೇಷ್ಠನೂ ಆಗಿರುತ್ತಾನೆ." (ಅಲ್ ಬಕರ: 255)

"ಭೂಮಿ–ಆಕಾಶಗಳಲ್ಲಿರುವ ಪ್ರತಿಯೊಂದು ವಸ್ತುವೂ ಅಲ್ಲಾಹನನ್ನು ಜಪಿಸಿದೆ ಮತ್ತು ಅವನು ಪ್ರಬಲನೂ ಯುಕ್ತಿಪೂರ್ಣನೂ ಆಗಿರುತ್ತಾನೆ. ಭೂಮಿ–ಆಕಾಶಗಳ ಸಾಮ್ರಾಜ್ಯದ ಒಡೆಯನು ಅವನೇ ಆಗಿರುತ್ತಾನೆ. ಅವನೇ ಜೀವನ್ನ ನೀಡುತ್ತಾನೆ ಮತ್ತು ಮರಣ ಕೊಡುತ್ತಾನೆ. ಅವನು ಸಕಲ ವಿಷಯಗಳ ಸಾಮರ್ಥ್ಯವುಳ್ಳವನು. ಆದಿಯೂ ಅವನೇ, ಅಂತ್ಯನೂ ಅವನೇ, ಅಭಿವ್ಯಕ್ತನೂ ಅವನೇ, ರಹಸ್ಯನೂ ಅವನೇ ಮತ್ತು ಅವನು 'ಸಕಲ ವಿಷಯಗಳ ಜ್ಞಾನವುಳ್ಳವನು.

ಭೂಮಿ–ಆಕಾಶ ಗಳನ್ನು ಆರು ದಿನಗಳಲ್ಲಿ ಸೃಷ್ಟಿಸಿದವನು ಅವನೇ. ಅನಂತರ ವಿಶ್ವಸಿಂಹಾಸನಾರೂಢ ನಾದನು. ಭೂಮಿಯೊಳಗೆ ಹೋಗುವ ಅದರಿಂದ ಹೊರಬರುವ ಮತ್ತು ಆಕಾಶದಿಂದ ಇಳಿಯುವ ಮತ್ತು ಅದಕ್ಕೆ ಏರಿ ಹೋಗುವ ಎಲ್ಲ ವಸ್ತುಗಳ ಜ್ಞಾನ ಅವನಿಗೆ ಇದೆ. ನೀವೆಲ್ಲಿದ್ದರೂ ಅವನು ನಿಮ್ಮ ಜೊತೆಗಿದ್ದಾನೆ. ನೀವು ಮಾಡುವುದೆಲ್ಲವನ್ನೂ ಅವನು ನೋಡುತ್ತಿದ್ದಾನೆ. ಭೂಮಿ–ಆಕಾಶಗಳ ಸಾಮ್ರಾಜ್ಯದ ಒಡೆಯನು ಅವನೇ ಮತ್ತು ಸಕಲ ವಿಷಯಗಳು ತೀರ್ಮಾನಕ್ಕಾಗಿ ಅವನ ಕಡೆಗೆ ಮರಳಿಸಲ್ಪಡುತ್ತವೆ. ರಾತ್ರೆಯನ್ನು ಹಗಲಿನೊಳಗೂ ಹಗಲನ್ನು ರಾತ್ರೆಯೊಳಗೂ ಅವನೇ ಪೋಣಿಸುತ್ತಾನೆ. ಹೃದಯಗಳೊಳಗೆ ಅವಿತುಕೊಂಡಿರುವ ರಹಸ್ಯಗಳನ್ನೂ ಅವನು ಬಲ್ಲನು." **(ಅಲ್ ಹದೀದ್: 1–6)**

"ಅವನೇ ಅಲ್ಲಾಹ್. ಅವನ ಹೊರತು ಬೇರಾವ ಆರಾಧ್ಯನೂ ಇಲ್ಲ. ಅಗೋಚರವಾದ ಮತ್ತು ಗೋಚರವಾಗಿರುವ ಎಲ್ಲವನ್ನೂ ಬಲ್ಲವನು. ಅವನೇ ಪರಮ ದಯಾಮಯನೂ ಕರುಣಾನಿಧಿಯೂ ಆಗಿರುತ್ತಾನೆ. ಅವನೇ ಅಲ್ಲಾಹ್, ಅವನ ಹೊರತು ಬೇರಾವ ಆರಾಧ್ಯನೂ ಇಲ್ಲ. ಅವನು ಸಾಮ್ರಾಟನು, ಪರಮ ಪಾವನನು, ಸಾದ್ಯಂತ ಮಂಗಲಮಯನು, ಶಾಂತಿದಾತನು, ಸಂರಕ್ಷಕನು, ಪ್ರಬಲನು, ತನ್ನ ಆಜ್ಞೆಯನ್ನು ಶಕ್ತಿಯಿಂದ ಅನುಷ್ಠಾನಿಸಿ ಬಿಡುವವನು. ಸದಾ ಸರ್ವೋನ್ನತ ನಾಗಿಯೇ ಇರುವವನು, ಜನರು ಮಾಡುತ್ತಿರುವ ಸಹಭಾಗಿತ್ವದಿಂದ ಅಲ್ಲಾಹನು ಪರಿಶುದ್ಧನು. ಸೃಷ್ಟಿಯ ಯೋಜನೆ ಮಾಡುವವನೂ ಅದನ್ನು ಜಾರಿಗೊಳಿಸುವವನೂ ಅದರಂತೆ ರೂಪ ಕೊಡುವವನೂ ಅಲ್ಲಾಹನೇ. ಅವನಿಗೆ ಅತ್ಯುತ್ತಮ ನಾಮಗಳಿವೆ. ಭೂಮಿ–ಆಕಾಶಗಳಲ್ಲಿರುವ ಪ್ರತಿಯೊಂದು ವಸ್ತುವೂ ಅವನನ್ನು ಜಪಿಸುತ್ತದೆ ಮತ್ತು ಅವನು ಪ್ರಬಲನೂ ಯುಕ್ತಿ ಪೂರ್ಣನೂ ಆಗಿರುತ್ತಾನೆ." **(ಅಲ್ ಹಶ್ರ್: 22–24)**

"ನಾವು ನಿಮ್ಮನ್ನು ಸೃಷ್ಟಿಸಿದೆವು. ಆದರೂ ನೀವು ದೃಢೀಕರಿಸುವುದಿಲ್ಲವೇಕೆ? ನೀವು ಸುರಿಸುವ ವೀರ್ಯದ ಕುರಿತು ನೀವೆಂದಾದರೂ ವಿವೇಚಿಸಿರುವಿರಾ? ಅದರಿಂದ ಶಿಶುವನ್ನು ಉಂಟು ಮಾಡುವವರು ನೀವೋ ಅಥವಾ ಅದನ್ನುಂಟು ಮಾಡುವವರು ನಾವೋ? ನಾವು ನಿಮ್ಮೊಳಗೆ ಮರಣವನ್ನು ಹಂಚಿರುತ್ತೇವೆ. ನಿಮ್ಮ

ರೂಪಗಳನ್ನು ಬದಲಾಯಿಸಿ ಬಿಡಲಿಕ್ಕೂ ನಿಮಗೆ ತಿಳಿದಿರದ ಯಾವುದಾದರೂ ರೂಪದಲ್ಲಿ ನಿಮ್ಮನ್ನು ಸೃಷ್ಟಿಸಲಿಕ್ಕೂ ನಾವು ಅಶಕ್ತರಲ್ಲ. ನಿಮ್ಮ ಪ್ರಥಮ ಜನನದ ಕುರಿತಂತೂ ನಿಮಗೆ ತಿಳಿದೇ ಇದೆ. ಮತ್ತೇಕೆ ಪಾಠ ಕಲಿಯುವುದಿಲ್ಲ?

ನೀವು ಬಿತ್ತುವ ಬೀಜದ ಕುರಿತು ನೀವೆಂದಾದರೂ ವಿವೇಚಿಸಿದಿರಾ? ಅವುಗಳಿಂದ ಬೆಳೆಯನ್ನು ಬೆಳೆಸುವವರು ನೀವೋ ಅಥವಾ ಅದನ್ನು ಬೆಳೆಸುವವರು ನಾವೋ? ನಾವಿಚ್ಛಿಸಿದರೆ ಆ ಹೊಲಗಳನ್ನು ಹೊಟ್ಟನ್ನಾಗಿ ಮಾಡಿಬಿಡಬಲ್ಲೆವು. ಆಗ ನೀವು 'ಎಲ್ಲವೂ ನಮ್ಮ ಮೇಲೆ ತಿರುಗಿ ಬಿತ್ತು. ನಿಜವಾಗಿ ನಮ್ಮ ಭಾಗ್ಯವೇ ಹಾಳು' ಎಂದು ತರತರದ ಮಾತುಗಳನ್ನಾಡುತ್ತಲೇ ಇರುವಿರಿ. ನೀವು ಕುಡಿಯುವ ನೀರಿನ ಬಗ್ಗೆ ಎಂದಾದರೂ ವಿವೇಚಿಸಿದ್ದುಂಟೇ? ಅದನ್ನು ಮೋಡಗಳಿಂದ ಸುರಿಸಿದವರು ನೀವೋ ಅಥವಾ ಅದನ್ನು ಸುರಿಸಿದವರು ನಾವೋ? ನಾವಿಚ್ಛಿಸಿದರೆ ಅದನ್ನು ಕಡು ಉಪ್ಪನ್ನಾಗಿ ಮಾಡಿಬಿಡಬಲ್ಲೆವು. ಹೀಗಿರುತ್ತ ನೀವೇಕೆ ಕೃತಜ್ಞರಾಗುವುದಿಲ್ಲ?

ನೀವು ಉರಿಸುತ್ತಿರುವ ಬೆಂಕಿಯ ಕುರಿತು ನೀವೆಂದಾದರೂ ವಿವೇಚನೆ ನಡೆಸಿದ್ದುಂಟೇ? ಅದರ ಮರವನ್ನು ಉಂಟು ಮಾಡಿದವರು ನೀವೋ ಅಥವಾ ಅದನ್ನು ಉಂಟು ಮಾಡಿದವರು ನಾವೋ? ನಾವು ಅದನ್ನು ಸ್ಮರಣ ಸಾಧನವಾಗಿಯೂ ಅಗತ್ಯವುಳ್ಳವರಿಗೆ ಜೀವನ ಸಾಧನವಾಗಿಯೂ ಮಾಡಿರುತ್ತೇವೆ. ಆದುದರಿಂದ ಸಂದೇಶವಾಹಕರೇ, ಅತ್ಯಂತ ಮಹಾನನಾದ ನಿಮ್ಮ ಪ್ರಭುವಿನ ನಾಮವನ್ನು ಕೊಂಡಾಡಿರಿ." **(ಅಲ್ ವಾಕಿಆ: 57–74)**

"ಅವನೇ ಇರುಳಿನ ಪರದೆಯನ್ನು ಹರಿದು ಪ್ರಭಾತವನ್ನು ತರುತ್ತಾನೆ. ಅವನೇ ಇರುಳನ್ನು ನೆಮ್ಮದಿಯ ಕಾಲವನ್ನಾಗಿ ಮಾಡಿರುತ್ತಾನೆ. ಅವನೇ ಸೂರ್ಯ–ಚಂದ್ರರ ಉದಯಾಸ್ತಗಳ ಗಣನೆಯನ್ನು ನಿಶ್ಚಯಿಸಿರುತ್ತಾನೆ ಇವೆಲ್ಲ ಆ ಮಹಾ ಪ್ರತಾಪಿಯೂ ಸರ್ವಜ್ಞನೂ ನಿಶ್ಚಯಿಸಿರುವ ಕ್ರಮಗಳು. ಅವನೇ ನಿಮಗೆ ನಕ್ಷತ್ರಗಳನ್ನು ಮರುಭೂಮಿಯ ಮತ್ತು ಸಾಗರಗಳ ಅಂಧಕಾರಗಳಲ್ಲಿ ದಾರಿ ತಿಳಿಯುವ ಸಾಧನವನ್ನಾಗಿ ಮಾಡಿದನು. ನೋಡಿರಿ, ನಾವು ಜ್ಞಾನವುಳ್ಳವರಿಗೆ ನಿದರ್ಶನಗಳನ್ನು ಸುಸ್ಪಷ್ಟವಾಗಿ ತಿಳಿಸಿಬಿಟ್ಟಿರುತ್ತೇವೆ. ಅವನೇ ನಿಮ್ಮನ್ನು ಒಂದೇ ವ್ಯಕ್ತಿಯಿಂದ ಸೃಷ್ಟಿಸಿದನು. ಪ್ರತಿಯೊಬ್ಬನಿಗೂ ಒಂದು ತಂಗುದಾಣವೂ ಇನ್ನೊಂದು ಅವನು ಒಪ್ಪಿಸಲ್ಪಡುವ ಜಾಗವೂ ಇದೆ. ಅರಿವುಳ್ಳವರಿಗೆ ಈ ನಿದರ್ಶನಗಳನ್ನು ನಾವು ಅಭಿವ್ಯಕ್ತಗೊಳಿಸಿರುತ್ತೇವೆ.

ಅವನೇ ಆಕಾಶದಿಂದ ನೀರನ್ನು ಸುರಿಸಿದನು. ಅನಂತರ ಅದರ ಮೂಲಕ ಎಲ್ಲ ವಿಧದ ವನಸ್ಪತಿಗಳನ್ನು ಉತ್ಪಾದಿಸಿದನು. ಆಮೇಲೆ ಅದರಿಂದ ಹಚ್ಚಹಸಿರಾದ ಹೊಲಗಳನ್ನೂ ವೃಕ್ಷಗಳನ್ನೂ ಉಂಟು ಮಾಡಿದನು. ಆ ಬಳಿಕ ಅವುಗಳಿಂದ ಹಲವು ಪದರುಗಳಿಂದ ಹೊದಿಯಲ್ಪಟ್ಟ ಧಾನ್ಯಗಳನ್ನು ಹೊರತಂದನು ಮತ್ತು

ಖರ್ಜೂರಗಳ ಮೊಗ್ಗುಗಳಿಂದ, ಭಾರದಿಂದಾಗಿ ಬಾಗುತ್ತಿರುವ ಫಲಗಳ ಗೊಂಚಲು ಗೊಂಚಲುಗಳನ್ನೇ ಉಂಟು ಮಾಡಿದನು. ದ್ರಾಕ್ಷೆ, ಝೈತೂನ್ (ಇಪ್ಪೆ) ದಾಳಿಂಬೆಗಳ ತೋಟಗಳನ್ನು ಬೆಳೆಸಿದನು. ಅವುಗಳ ಫಲಗಳು ಪರಸ್ಪರ ಹೋಲುತ್ತಲೂ ಇವೆ ಮತ್ತು ಪ್ರತಿಯೊಂದರ ವೈಶಿಷ್ಟ್ಯಗಳು ವಿಭಿನ್ನವಾಗಿಯೂ ಇವೆ. ಈ ವೃಕ್ಷಗಳು ಫಲ ಬಿಡುವಾಗ ಅವುಗಳಲ್ಲಿ ಫಲ ಬರುವ ಮತ್ತು ಪಕ್ವವಾಗುವ ವಿದ್ಯಮಾನವನ್ನು ಸೂಕ್ಷ್ಮವಾಗಿ ಅವಲೋಕಿಸಿರಿ. ವಿಶ್ವಾಸವಿಡುವವರಿಗೆ ಇವುಗಳಲ್ಲಿ ನಿದರ್ಶನಗಳಿವೆ. ಇಷ್ಟಾಗಿಯೂ ಜನರು ಜಿನ್ನ್‌ಗಳನ್ನು (ಯಕ್ಷರನ್ನು) ಅಲ್ಲಾಹನಿಗೆ ಸಹಭಾಗಿಗಳಾಗಿಸಿ ಬಿಟ್ಟರು. ವಸ್ತುತಃ ಅವನು ಅವರನ್ನು ಸೃಷ್ಟಿಸಿದವನು. ಆದರೆ ಅವರು ವಿಚಾರ ಮಾಡದೆ ಅವನಿಗೆ ಪುತ್ರ ಮತ್ತು ಪುತ್ರಿಯರನ್ನು ಕಲ್ಪಿಸಿಕೊಂಡರು. ವಸ್ತುತಃ ಅವನು ಇವರು ಹೇಳುತ್ತಿರುವ ವಿಷಯಗಳಿಂದ ಪರಿಶುದ್ಧನೂ ಅತ್ಯುನ್ನತನೂ ಆಗಿರುತ್ತಾನೆ."

**(ಅಲ್ ಅನ್‌ಆಮ್: 96–100)**

"ಆದುದರಿಂದ ನೀವು ಸಂಧ್ಯಾಕಾಲ ಬಂದಾಗಲೂ ಪ್ರಾತಃ ಕಾಲವಾದಾಗಲೂ ಅಲ್ಲಾಹನ ಗುಣಗಾನ ಮಾಡಿರಿ. ಭೂಮಿ–ಆಕಾಶಗಳಲ್ಲಿ ಸ್ತುತಿಸ್ತೋತ್ರಗಳು ಅವನಿಗೇ ಮೀಸಲು ಮತ್ತು ಮೂರನೆಯ ಜಾವದಲ್ಲೂ ನಿಮಗೆ 'ಝುಹ್ರ್' ಸಮಯ ಬಂದಾಗಲೂ (ಅವನ ಗುಣಗಾನ ಮಾಡಿರಿ). ಅವನು ಸಜೀವಿಯನ್ನು ನಿರ್ಜೀವಿಯಿಂದ ಹೊರ ತೆಗೆಯುತ್ತಾನೆ, ನಿರ್ಜೀವಿಯನ್ನು ಸಜೀವಿಯಿಂದ ಹೊರತೆಗೆಯುತ್ತಾನೆ ಮತ್ತು ಭೂಮಿಗೆ ಅದರ ಮರಣದ ಬಳಿಕ ಮತ್ತೆ ಜೀವದಾನ ಮಾಡುತ್ತಾನೆ. ಇದೇ ರೀತಿ ನೀವು (ಮರಣಾವಸ್ಥೆಯಿಂದ) ಹೊರತೆಗೆಯಲ್ಪಡುವಿರಿ.

ಅವನು ನಿಮ್ಮನ್ನು ಮಣ್ಣಿನಿಂದ ಸೃಷ್ಟಿಸಿದುದು, ತರುವಾಯ ಒಮ್ಮೆಲೇ ನೀವು ಮಾನವರಾಗಿ (ಭೂಮಿಯಲ್ಲಿ) ಹಬ್ಬುತ್ತಾ ಹೋಗುತ್ತಿರುವುದು ಅವನ ನಿದರ್ಶನ ಗಳಲ್ಲೊಂದಾಗಿದೆ. ಅವನು ನಿಮಗಾಗಿ ನಿಮ್ಮ ವರ್ಗದಿಂದಲೇ ಜೋಡಿಗಳನ್ನು ಸೃಷ್ಟಿಸಿ, ನೀವು ಅವರ ಬಳಿ ಪ್ರಶಾಂತಿಯನ್ನು ಪಡೆಯುವಂತೆ ಮಾಡಿದುದು ಮತ್ತು ನಿಮ್ಮ ನಡುವೆ ಪ್ರೇಮ ಮತ್ತು ಅನುಕಂಪವನ್ನುಂಟು ಮಾಡಿದುದೂ ಅವನ ನಿದರ್ಶನಗಳಲ್ಲೊಂದಾ ಗಿದೆ. ನಿಶ್ಚಯವಾಗಿಯೂ ವಿವೇಚಿಸುವವರಿಗೆ ಇದರಲ್ಲಿ ಅನೇಕ ನಿದರ್ಶನಗಳಿವೆ.

ಆಕಾಶಗಳ ಮತ್ತು ಭೂಮಿಯ ಸೃಷ್ಟಿಯೂ ನಿಮ್ಮ ಭಾಷೆಗಳ ಹಾಗೂ ವರ್ಣಗಳ ಭಿನ್ನತೆಯೂ ಅವನ ನಿದರ್ಶನಗಳಲ್ಲಿ ಒಂದಾಗಿದೆ. ನಿಶ್ಚಯವಾಗಿಯೂ ಜ್ಞಾನಿಗಳಿಗೆ ಇದರಲ್ಲಿ ಅನೇಕ ನಿದರ್ಶನಗಳಿವೆ.

ಇರುಳು–ಹಗಲುಗಳಲ್ಲಿ ನಿಮ್ಮ ನಿದ್ರೆಯೂ ನೀವು ಅವನ ಅನುಗ್ರಹವನ್ನು ಅರಸುವುದೂ ಅವನ ನಿದರ್ಶನಗಳಲ್ಲೊಂದಾಗಿದೆ. ನಿಶ್ಚಯವಾಗಿಯೂ ಲಕ್ಷ್ಯವಿಟ್ಟು

ಆಲಿಸುವವರಿಗೆ ಇದರಲ್ಲಿ ಅನೇಕ ನಿದರ್ಶನಗಳಿವೆ. ಅವನು ನಿಮಗೆ ಭಯದೊಂದಿಗೂ ನಿರೀಕ್ಷೆಯೊಂದಿಗೂ ಮಿಂಚಿನ ಹೊಳಪನ್ನು ತೋರಿಸುವುದು ಹಾಗೂ ಆಕಾಶದಿಂದ ನೀರನ್ನು ಸುರಿಸುವುದು ಅನಂತರ ಅದರ ಮೂಲಕ (ನೆಲಕ್ಕೆ ಅದರ ಮರಣದ ಬಳಿಕ) ಮತ್ತೆ ಜೀವ ನೀಡುವುದು ಅವನ ನಿದರ್ಶನಗಳಲ್ಲಿ ಸೇರಿವೆ. ನಿಶ್ಚಯವಾಗಿಯೂ ವಿವೇಕಿಗಳಿಗೆ ಇದರಲ್ಲಿ ಅನೇಕ ನಿದರ್ಶನಗಳಿವೆ.

ಆಕಾಶ ಮತ್ತು ಭೂಮಿ ಅವನ ಅಪ್ಪಣೆಯಿಂದ ಸ್ಥಾಪಿತವಾಗಿರುವುದು ಅವನ ನಿದರ್ಶನಗಳಲ್ಲೊಂದಾಗಿದೆ. ಮುಂದೆ ಅವನು ನಿಮ್ಮನ್ನು ಭೂಮಿಯಿಂದ ಕೂಗಿ ಕರೆದೊಡನೆ ಒಂದೇ ಕರೆಗೆ ನೀವು ಥಟ್ಟನೆ ಹೊರಟು ಬರುವಿರಿ. ಆಕಾಶಗಳಲ್ಲೂ ಭೂಮಿಯಲ್ಲೂ ಇರುವ ಎಲ್ಲರೂ ಅವನ ದಾಸರು. ಎಲ್ಲರೂ ಅವನ ಆಜ್ಞಾಧೀನರೇ ಆಗಿರುತ್ತಾರೆ. ಸೃಷ್ಟಿಯ ಆರಂಭ ಮಾಡುವವನೂ ಅವನೇ ಮತ್ತು ಅದರ ಪುನರಾವರ್ತನೆ ಮಾಡುವವನೂ ಅವನೇ. ಇದು ಅವನಿಗೆ ಅತ್ಯಂತ ಸುಲಭವಾದುದು. ಭೂಮಿ–ಆಕಾಶಗಳಲ್ಲಿ ಅವನ ಗುಣವು ಸರ್ವಶ್ರೇಷ್ಠವಾಗಿದ್ದು ಅವನು ಪ್ರಬಲನೂ ಯುಕ್ತಿಪೂರ್ಣನೂ ಆಗಿರುತ್ತಾನೆ." (ಅರ್ರೂಮ್: 17–27)

"ನಾವು ಮಾನವನನ್ನು ಮಣ್ಣಿನ ಸತ್ವದಿಂದ ಸೃಷ್ಟಿಸಿದೆವು. ತರುವಾಯ ಅದನ್ನು ಒಂದು ಸುರಕ್ಷಿತ ಸ್ಥಳದಲ್ಲಿ ತೊಟ್ಟಿಕ್ಕಿದ ಹನಿಯಾಗಿ ಮಾರ್ಪಡಿಸಿದೆವು. ಅನಂತರ ಆ ಹನಿಗೆ ಮಾಂಸಪಿಂಡದ ರೂಪ ಕೊಟ್ಟೆವು. ಬಳಿಕ ಮಾಂಸಪಿಂಡವನ್ನು ಮಾಂಸಖಂಡವನ್ನಾಗಿ ಮಾಡಿದೆವು. ಆಮೇಲೆ ಮಾಂಸಖಂಡವನ್ನು ಎಲುಬುಗಳಾಗಿ ಮಾಡಿದೆವು. ತರುವಾಯ ಎಲುಬುಗಳ ಮೇಲೆ ಮಾಂಸ ತೊಡಿಸಿದೆವು. ಆ ಬಳಿಕ ಅದನ್ನೊಂದು ಬೇರೆಯೇ ಸೃಷ್ಟಿಯನ್ನಾಗಿ ಮಾಡಿ ನಿಲ್ಲಿಸಿದೆವು. ಅಲ್ಲಾಹನು ಮಹಾ ಸಮೃದ್ಧನು; ಸಕಲ ಶಿಲ್ಪಿಗಳಿಗಿಂತ ಶ್ರೇಷ್ಠ ಶಿಲ್ಪಿ. ಅದಾದ ಬಳಿಕ ನಿಮಗೆ ಖಂಡಿತ ವಾಗಿಯೂ ಸಾಯಲಿಕ್ಕಿದೆ. ಮತ್ತೆ ಪುನರುತ್ಥಾನದ ದಿನ ಖಂಡಿತವಾಗಿಯೂ ನೀವು ಎಬ್ಬಿಸಲ್ಪಡುವಿರಿ. ನಾವು ನಿಮ್ಮ ಮೇಲ್ಭಾಗದಲ್ಲಿ ಏಳು ಮಾರ್ಗಗಳನ್ನು ರಚಿಸಿದೆವು. ಸೃಷ್ಟಿಸುವ ಕಾರ್ಯದ ಬಗ್ಗೆ ನಾವೇನೂ ಅಜ್ಞರಾಗಿರಲಿಲ್ಲ."

(ಅಲ್ ಮೂಮಿನೂನ್: 12–17)

"ಆಕಾಶಗಳಲ್ಲಿ ಅನೇಕ ಬುರುಜುಗಳನ್ನು ಮಾಡಿರುವುದು ನಾವೇ. ಅವುಗಳನ್ನು ನಾವು ನೋಡುವವರಿಗಾಗಿ (ನಕ್ಷತ್ರಗಳಿಂದ) ಅಲಂಕರಿಸಿರುತ್ತೇವೆ ಮತ್ತು ಪ್ರತಿಯೊಬ್ಬ ಧಿಕ್ಕರಿಸಲ್ಪಟ್ಟ ಶೈತಾನನಿಂದ ಅವುಗಳನ್ನು ಕಾಪಾಡಿರುತ್ತೇವೆ. ಯಾವ ಶೈತಾನನೂ ಒಂದಿಷ್ಟು ಕದ್ದು ಕೇಳುವ ಹೊರತು ಅವುಗಳಲ್ಲಿ ದಾರಿಗಾಣಲಾರ ಮತ್ತು ಅವನು ಕದ್ದಾಲಿಸಲು ಪ್ರಯತ್ನಿಸುವಾಗ ಒಂದು ಪ್ರಕಾಶಮಯ ಜ್ವಾಲೆಯು ಅವನನ್ನು ಬೆನ್ನಟ್ಟುತ್ತದೆ.

ನಾವು ಭೂಮಿಯನ್ನು ಹರಡಿದೆವು. ಅದರಲ್ಲಿ ಪರ್ವತಗಳನ್ನು ನಾಟಿದೆವು. ಅದರಲ್ಲಿ ಎಲ್ಲ ಜಾತಿಯ ಸಸ್ಯಗಳನ್ನು ಸರಿಯಾಗಿ ನಿಶ್ಚಿತ ಪ್ರಮಾಣದಲ್ಲಿ ಬೆಳೆಸಿದೆವು ಮತ್ತು ಅದರಲ್ಲಿ ನಿಮಗಾಗಿಯೂ ನೀವು ಅನ್ನದಾತರಲ್ಲದಂತಹ ಅನೇಕ ಸೃಷ್ಟಿಗಳಿಗೂ ಜೀವನ ಸಾಧನಗಳನ್ನು ಒದಗಿಸಿದೆವು. ಯಾವುದೇ ವಸ್ತುವಿನ ಭಂಡಾರ ನಮ್ಮ ಬಳಿ ಇಲ್ಲದಿಲ್ಲ ಮತ್ತು ಯಾವ ವಸ್ತುವನ್ನಾದರೂ ನಾವು ಒಂದು ನಿರ್ದಿಷ್ಟ ಪ್ರಮಾಣ ದಲ್ಲಿ ಮಾತ್ರ ಇಳಿಸುತ್ತೇವೆ. ಫಲಪ್ರದವಾದ ಮಾರುತಗಳನ್ನು ನಾವೇ ಕಳುಹಿಸು ತ್ತೇವೆ. ಅನಂತರ ಆಕಾಶದಿಂದ ನೀರನ್ನು ಸುರಿಸುತ್ತೇವೆ ಮತ್ತು ನಿಮ್ಮ ದಾಹವನ್ನು ತಣಿಸುತ್ತೇವೆ. ಈ ಸಂಪತ್ತಿನ ಸಂಗ್ರಾಹಕರು ನೀವಲ್ಲ. ಜೀವ ನೀಡುವವರೂ ಮರಣ ನೀಡುವವರೂ ನಾವೇ. ನಾವೇ ಎಲ್ಲರ ವಾರೀಸುದಾರರಾಗುವವರಿದ್ದೇವೆ. ನಿಮ್ಮ ಪೈಕಿ ಈ ಮುಂಚೆ ಗತಿಸಿ ಹೋದವರನ್ನೂ ನಾವು ಬಲ್ಲೆವು. ಆ ಬಳಿಕ ಬರುವವರೂ, ನಮ್ಮ ಕಣ್ಣ ಮುಂದಿದ್ದಾರೆ. ನಿಶ್ಚಯವಾಗಿಯೂ ನಿಮ್ಮ ಪ್ರಭು ಅವರೆಲ್ಲರನ್ನೂ ಒಟ್ಟು ಗೂಡಿಸುವನು. ಅವನು ಮಹಾ ಧೀಮಂತನೂ ಸರ್ವಜ್ಞನೂ ಆಗಿರುತ್ತಾನೆ. ನಾವು ಮಾನವನನ್ನು ಹಳಸಿದ ಮಣ್ಣಿನ ಒಣಗಾರೆಯಿಂದ ಸೃಷ್ಟಿಸಿದೆವು ಮತ್ತು ಅದಕ್ಕಿಂತ ಮುಂಚೆ 'ಜಿನ್ನ್'ಗಳನ್ನು (ಯಕ್ಷರನ್ನು) ಅಗ್ನಿಯ ಜ್ವಾಲೆಯಿಂದ ಸೃಷ್ಟಿಸಿದ್ದೆವು."

**(ಅಲ್ ಹಿಜ್ರ್: 16–27)**

"ಅಲ್ಲಾಹನು ಸೃಷ್ಟಿಸಿರುವ ವಸ್ತುಗಳ ನೆರಳು ಎಡಕ್ಕೂ ಬಲಕ್ಕೂ ಬೀಳುತ್ತ ಅಲ್ಲಾಹನ ಮುಂದೆ ಬಾಗುತ್ತಿರುವುದನ್ನು ಇವರು ನೋಡುವುದಿಲ್ಲವೇ? ಹೀಗೆ ಎಲ್ಲವೂ ತಮ್ಮ ದೀನ ಭಾವವನ್ನು ಪ್ರಕಟಿಸುತ್ತವೆ. ಆಕಾಶಗಳಲ್ಲಿಯೂ ಭೂಮಿ ಯಲ್ಲಿಯೂ ಎಷ್ಟು ಸಜೀವಿ ಸೃಷ್ಟಿಗಳಿವೆಯೋ ಎಷ್ಟು ದೇವಚರರಿರುವರೋ ಸಕಲವೂ ಅಲ್ಲಾಹನ ಮುಂದೆ ಸಾಷ್ಟಾಂಗವೆರಗುತ್ತವೆ. ಅವು ಎಷ್ಟಕ್ಕೂ ಅಹಂಭಾವ ತೋರುವುದಿಲ್ಲ. ತಮ್ಮ ಮೇಲಿರುವ ತಮ್ಮ ಪ್ರಭುವನ್ನು ಅವರು ಭಯಪಡುತ್ತಾರೆ ಮತ್ತು ಕೊಟ್ಟ ಅಪ್ಪಣೆ ಪ್ರಕಾರವೇ ಕಾರ್ಯವೆಸಗುತ್ತಾರೆ.

ಇಬ್ಬರು ಆರಾಧ್ಯರನ್ನು ಮಾಡಿಕೊಳ್ಳಬೇಡಿರಿ. ಆರಾಧ್ಯನಂತು ಒಬ್ಬನೇ. ಆದುದರಿಂದ ನನ್ನನ್ನು ಮಾತ್ರ ಭಯಪಡಿರಿ ಎಂದು ಅಲ್ಲಾಹನು ಆಜ್ಞಾಪಿಸುತ್ತಾನೆ. ಆಕಾಶಗಳಲ್ಲೂ ಭೂಮಿಯಲ್ಲೂ ಇರುವ ಸಕಲವೂ ಅವನದೇ. ಅವನ ಧರ್ಮವೇ (ಇಡೀ ವಿಶ್ವದಲ್ಲಿ) ಸಂಪೂರ್ಣವಾಗಿ ಜಾರಿಯಲ್ಲಿದೆ. ಹೀಗಿರುತ್ತಾ ನೀವು ಅಲ್ಲಾಹನನ್ನು ಬಿಟ್ಟು ಇನ್ನಾರನ್ನಾದರೂ ಭಯಪಡುವಿರಾ?" **(ಅನ್ನಹ್ಲ್: 48–52)**

"ಅಲ್ಲಾಹನು ಭೂಮಿ-ಆಕಾಶಗಳ ಪ್ರಕಾಶವಾಗಿರುವನು. (ವಿಶ್ವದಲ್ಲಿ) ಅವನ ಪ್ರಕಾಶದ ಉಪಮೆ ಹೀಗಿದೆ: ಒಂದು ಗೋಡೆಗೂಡಿನಲ್ಲಿ ಒಂದು ದೀಪವನ್ನಿಡಲಾಗಿದೆ. ದೀಪವು ಒಂದು ಗಾಜಿನ ಬುರುಡೆಯೊಳಗಿದೆ. ಬುರುಡೆಯು ಮುತ್ತಿನಂತೆ ಹೊಳೆ

ಯುವ ತಾರೆಯಂತಿದೆ. ಆ ದೀಪವನ್ನು ಪೌರ್ವಾತ್ಯವೂ ಪಾಶ್ಚಿಮಾತ್ಯವೂ ಅಲ್ಲದ ಇಪ್ಪೆಯ (Olive) ಒಂದು ಸಮೃದ್ಧ ಮರದ ಎಣ್ಣೆಯಿಂದ ಬೆಳಗಿಸಲಾಗುತ್ತದೆ. ಅದರ ಎಣ್ಣೆಗೆ ಬೆಂಕಿ ತಾಗದಿದ್ದರೂ ಅದು ತಾನಾಗಿಯೇ ಪ್ರಜ್ವಲಿಸುತ್ತದೆ. (ಹೀಗೆ) ಪ್ರಕಾಶದ ಮೇಲೆ ಪ್ರಕಾಶ(ವನ್ನು ವರ್ಧಿಸುವ ಎಲ್ಲಾ ಸಾಧನಗಳು ಒಟ್ಟು ಗೂಡಿರುತ್ತವೆ). ಅಲ್ಲಾಹನು ತಾನಿಚ್ಛಿಸಿದವರಿಗೆ ತನ್ನ ಪ್ರಕಾಶದೆಡೆಗೆ ಮಾರ್ಗದರ್ಶನ ನೀಡುತ್ತಾನೆ. ಅವನು ಜನರಿಗೆ ಉಪಮೆಗಳ ಮೂಲಕ ಮನವರಿಕೆ ಮಾಡಿಸುತ್ತಾನೆ. ಅಲ್ಲಾಹನು ಸಕಲ ವಸ್ತುಗಳನ್ನೂ ಬಲ್ಲವನಾಗಿರುತ್ತಾನೆ.

ಅವನ ಪ್ರಕಾಶದ ಕಡೆಗೆ ಮಾರ್ಗದರ್ಶನ ಪಡೆಯುವವರು ಅಲ್ಲಾಹನು, ಉನ್ನತಗೊಳಿಸಲು ಹಾಗೂ ಅವುಗಳಲ್ಲಿ ತನ್ನ ನಾಮಸ್ಮರಣೆ ಮಾಡಲು ಅನುಮತಿ ನೀಡಿರುವಂತಹ ಮನೆಗಳಲ್ಲಿ ಕಂಡು ಬರುತ್ತಾರೆ. ಅವುಗಳೊಳಗೆ ಬೆಳಗು-ಬೈಗುಗಳಲ್ಲಿ ಅವನ ಕೀರ್ತನೆ ಮಾಡುತ್ತಿರುವವರನ್ನು ವ್ಯಾಪಾರ ಮತ್ತು ಕ್ರಯ-ವಿಕ್ರಯಗಳು ಅಲ್ಲಾಹನ ಸ್ಮರಣೆಯಿಂದಲೂ ನಮಾಝಿನ ಸಂಸ್ಥಾಪನೆಯಿಂದಲೂ ಝಕಾತಿನ ಪಾವತಿಯಿಂದಲೂ ಅಲಕ್ಷ್ಯರಾಗಿ ಮಾಡುವುದಿಲ್ಲ. ಹೃದಯಗಳು ಪಲ್ಲಟಗೊಳ್ಳುವ ಮತ್ತು ದೃಷ್ಟಿಗಳು ಸ್ತಬ್ಧಗೊಳ್ಳುವಂತಹ ಆ ದಿನವನ್ನು ಅವರು ಭಯಪಡುತ್ತಿರುವರು. ಅಲ್ಲಾಹನು ಅವರಿಗೆ ಅವರ ಅತ್ಯುತ್ತಮ ಕರ್ಮದ ಫಲಗಳನ್ನು ಮತ್ತು ತನ್ನ ಅನುಗ್ರಹದಿಂದ ಇನ್ನಷ್ಟನ್ನು ದಯಪಾಲಿಸುವಂತಾಗಲಿಕ್ಕಾಗಿ (ಅವರು ಇದನ್ನೆಲ್ಲಾ ಮಾಡುತ್ತಾರೆ.) ಅಲ್ಲಾಹ್ ತಾನಿಚ್ಛಿಸಿದವರಿಗೆ ಅಪರಿಮಿತವಾಗಿ ನೀಡುತ್ತಾನೆ.

(ಇದಕ್ಕೆ ವ್ಯತಿರಿಕ್ತವಾಗಿ) ಸತ್ಯನಿಷೇಧವನ್ನು ಕೈಗೊಂಡವರ ಕರ್ಮಗಳ ಉದಾಹರಣೆ ಹೀಗಿದೆ: ನಿರ್ಜಲ ಮರುಭೂಮಿಯಲ್ಲಿರುವ ಮರೀಚಿಕೆ. ಅದನ್ನು ಬಾಯಾದವನು ನೀರೆಂದು ಭ್ರಮಿಸಿದ್ದನು. ಆದರೆ ಅಲ್ಲಿಗೆ ತಲುಪಿದಾಗ ಅಲ್ಲೇನನ್ನೂ ಕಾಣಲಿಲ್ಲ. ಬದಲಾಗಿ ಅಲ್ಲಿ ಅವನು ಅಲ್ಲಾಹನನ್ನು ಕಂಡನು. ಅವನು(ಅಲ್ಲಾಹನು) ಅವನ ಲೆಕ್ಕವನ್ನು ಸಂಪೂರ್ಣವಾಗಿ ತೀರಿಸಿಬಿಟ್ಟನು ಮತ್ತು ಅಲ್ಲಾಹನಿಗೆ ಲೆಕ್ಕ ತೀರಿಸುವುದರಲ್ಲಿ ವಿಳಂಬವಾಗುವುದಿಲ್ಲ ಅಥವಾ ಅವನ ಉದಾಹರಣೆ ಹೀಗಿದೆ: ಒಂದು ಆಳವಾದ ಸಾಗರದಲ್ಲಿ ಅಂಧಕಾರ, ಮೇಲೊಂದು ತೆರೆ ಆವರಿಸಿದೆ. ಅದರ ಮೇಲೆ ಇನ್ನೊಂದು ತೆರೆ ಮತ್ತು ಅದರ ಮೇಲೆ ಮೋಡ ಆವರಿಸಿಕೊಂಡಿದೆ. ಅಂಧಕಾರದ ಮೇಲೆ ಅಂಧಕಾರ ಕವಿದಿದೆ. ಮನುಷ್ಯನು ತನ್ನ ಕೈಯನ್ನು ಹೊರಚಾಚಿದರೆ ಅದೂ ಅವನಿಗೆ ಕಾಣದು. ಯಾರಿಗೆ ಅಲ್ಲಾಹನು ಪ್ರಕಾಶವನ್ನು ದಯಪಾಲಿಸಲಿಲ್ಲವೋ ಅವನಿಗೆ ಬೇರಾವ ಪ್ರಕಾಶವೂ ಇಲ್ಲ.

ಭೂಮಿ-ಆಕಾಶಗಳಲ್ಲಿ ಇರುವವುಗಳೆಲ್ಲವೂ ರೆಕ್ಕೆ ಬಿಚ್ಚಿ ಹಾರುತ್ತಿರುವ ಹಕ್ಕಿಗಳೂ ಅಲ್ಲಾಹನ ಕೀರ್ತನೆ ಮಾಡುತ್ತಿರುವುದನ್ನು ನೀವು ನೋಡುತ್ತಿಲ್ಲವೇ? ಪ್ರತಿಯೊಂದಕ್ಕೂ

ತನ್ನ ನಮಾಝಿನ ಮತ್ತು ಕೀರ್ತನೆಯ ಕ್ರಮ ಗೊತ್ತಿದೆ. ಇವೆಲ್ಲವೂ ಮಾಡುತ್ತಿರುವುದನ್ನು ಅಲ್ಲಾಹನು ಅರಿತಿರುತ್ತಾನೆ. ಭೂಮಿ–ಆಕಾಶಗಳ ಸಾರ್ವಭೌಮತೆಯೂ ಅಲ್ಲಾಹನಿಗೆ ಇದೆ ಮತ್ತು ಅವನ ಕಡೆಗೆ ಎಲ್ಲರಿಗೂ ಮರಳಲಿಕ್ಕಿದೆ.

ನೀವು ನೋಡುತ್ತಿಲ್ಲವೇ? ಅಲ್ಲಾಹನು ಮೋಡವನ್ನು ಮೆಲ್ಲಮೆಲ್ಲನೆ ಚಲಾಯಿಸುತ್ತಾನೆ. ಅನಂತರ ಅದರ ತುಂಡುಗಳನ್ನು ಪರಸ್ಪರ ಜೋಡಿಸುತ್ತಾನೆ. ತರುವಾಯ ಅದನ್ನು ಒಟ್ಟುಗೂಡಿಸಿ ಒಂದು ಘನೀಕೃತ ಮೋಡವನ್ನಾಗಿ ಮಾಡುತ್ತಾನೆ. ಆ ಬಳಿಕ ಅದರ ಹೊರಾವರಣದಿಂದ ಮಳೆಯ ಬಿಂದುಗಳು ಹನಿಹನಿಯಾಗಿ ಬೀಳುತ್ತಿರುವುದನ್ನು ನೀವು ನೋಡುತ್ತೀರಿ ಮತ್ತು ಅವನು ಆಕಾಶದಿಂದ ಅದರಲ್ಲಿ ಉನ್ನತವಾಗಿರುವ ಪರ್ವತಗಳಿಂದಾಗಿ ಆಲಿಕಲ್ಲುಗಳನ್ನು ಬೀಳಿಸಿ ಅದರಿಂದ ತಾನಿಚ್ಛಿಸುವವರಿಗೆ ಹಾನಿಯುಂಟು ಮಾಡುತ್ತಾನೆ ಮತ್ತು ತಾನಿಚ್ಛಿಸುವವರನ್ನು ಅವುಗಳಿಂದ ರಕ್ಷಿಸುತ್ತಾನೆ. ಅದರ ಮಿಂಚಿನ ಹೊಳಪು ಕಣ್ಣುಗಳನ್ನು ಕೋರೈಸಿ ಬಿಡುತ್ತದೆ. ರಾತ್ರಿ–ಹಗಲುಗಳ ಪರಿವರ್ತನೆಯನ್ನು ಅವನೇ ಮಾಡುತ್ತಿರುತ್ತಾನೆ. ನಿಶ್ಚಯವಾಗಿ ಇದರಲ್ಲಿ ಕಣ್ಣುಳ್ಳವರಿಗೆ ಒಂದು ಪಾಠವಿದೆ.

ಅಲ್ಲಾಹನು ಪ್ರತಿಯೊಂದು ಜೀವಿಯನ್ನು ಒಂದು ವಿಧದ ನೀರಿನಿಂದ ಸೃಷ್ಟಿಸಿದನು. ಆ ಪೈಕಿ ಕೆಲವು ಹೊಟ್ಟೆಯನ್ನಾಧರಿಸಿ ನಡೆದರೆ, ಇನ್ನು ಕೆಲವು ಎರಡು ಕಾಲುಗಳ ಮೇಲೆ ಮತ್ತೆ ಕೆಲವು ನಾಲ್ಕು ಕಾಲುಗಳ ಮೇಲೆ ನಡೆಯುತ್ತವೆ. ಅವನು ತಾನಿಚ್ಛಿಸಿದ್ದನ್ನು ಸೃಷ್ಟಿಸುತ್ತಾನೆ. ನಿಶ್ಚಯವಾಗಿಯೂ ಅಲ್ಲಾಹನು ಸಕಲ ವಸ್ತುಗಳ ಮೇಲೆ ಸಾಮರ್ಥ್ಯವುಳ್ಳವನು. ನಾವು ಸುವ್ಯಕ್ತ ವಾಸ್ತವಿಕತೆಯನ್ನು ತಿಳಿಸುವಂತಹ ಸೂಕ್ತಗಳನ್ನು ಅವತೀರ್ಣಗೊಳಿಸಿದ್ದೇವೆ. ಮುಂದೆ ನೇರಮಾರ್ಗದ ಕಡೆಗೆ ಅಲ್ಲಾಹನೇ ತಾನಿಚ್ಛಿಸಿದವರಿಗೆ ಮಾರ್ಗದರ್ಶನ ಮಾಡುತ್ತಾನೆ. ನಾವು ಅಲ್ಲಾಹ್ ಮತ್ತು ಸಂದೇಶವಾಹಕರ ಮೇಲೆ ವಿಶ್ವಾಸವಿರಿಸಿದೆವೆಂದೂ ನಾವು ಅನುಸರಣೆಯನ್ನು ಸ್ವೀಕರಿಸಿದ್ದೇವೆಂದೂ ಅವರು ಹೇಳುತ್ತಾರೆ. ಆದರೆ ಅನಂತರ ಅವರಲ್ಲೊಂದು ವಿಭಾಗವು (ಅನುಸರಣೆಯಿಂದ) ವಿಮುಖವಾಗಿ ಬಿಡುತ್ತದೆ." (ಅನ್ನೂರ್: 35–47)

"ರಹ್ಮಾನನು (ಪರಮ ದಯಾಮಯನು) ಈ ಕುರ್‌ಆನನ್ನು ಕಲಿಸಿರುವನು. ಅವನೇ ಮಾನವನನ್ನು ಸೃಷ್ಟಿಸಿದನು ಮತ್ತು ಅವನಿಗೆ ಮಾತಾಡಲು ಕಲಿಸಿದನು. ಸೂರ್ಯಚಂದ್ರರು ಒಂದು ಗಣನೆಗೆ ಅಧೀನರಾಗಿದ್ದಾರೆ ಮತ್ತು ಎಲ್ಲ ನಕ್ಷತ್ರಗಳೂ ವೃಕ್ಷಗಳೂ ಸಾಷ್ಟಾಂಗವೆರಗುತ್ತಿವೆ. ಆಕಾಶವನ್ನು ಅವನು ಉನ್ನತಗೊಳಿಸಿದನು ಮತ್ತು ತಕ್ಕಡಿ ಸ್ಥಾಪಿಸಿದನು. ಆದುದರಿಂದ ನೀವು ಸಮತೋಲನವನ್ನು ಕೆಡಿಸಬೇಡಿ. ನ್ಯಾಯದೊಂದಿಗೆ ಸರಿಯಾಗಿ ತೂಗಿರಿ ಮತ್ತು ತೂಕದಲ್ಲಿ ಕಡಿತ ಮಾಡಬೇಡಿರಿ.

ಅವನು ಭೂಮಿಯನ್ನು ಸಕಲ ಸೃಷ್ಟಿಗಳಿಗಾಗಿ ಉಂಟು ಮಾಡಿದನು. ಅದರಲ್ಲಿ

ತರತರದ ಅನೇಕ ರುಚಿಕರವಾದ ಫಲಗಳಿವೆ. ಖರ್ಜೂರದ ಮರಗಳಿವೆ, ಅವುಗಳ ಫಲಗಳು ಹೊದಿಕೆಗಳಲ್ಲಿ ಸುತ್ತಿಕೊಂಡಿವೆ. ತರತರದ ಧಾನ್ಯಗಳಿವೆ. ಅವುಗಳಲ್ಲಿ ಹೊಟ್ಟೂ ಇದೆ ಕಾಳೂ ಇದೆ. ಜಿನ್ನ್‌ಗಳೇ ಮತ್ತು ಮಾನವರೇ, ನೀವಿನ್ನು ನಿಮ್ಮ ಪ್ರಭುವಿನ ಯಾವ ಯಾವ ಅನುಗ್ರಹಗಳನ್ನು ಸುಳ್ಳಾಗಿಸುವಿರಿ?

ಅವನು ಮಾನವನನ್ನು ಓಡಿನಂತಹ ಹಳಸಿದ ಒಣಗಾರೆಯಿಂದ ಉಂಟು ಮಾಡಿದನು ಮತ್ತು ಜಿನ್ನ್‌ಗಳನ್ನು ಅಗ್ನಿಯ ಜ್ವಾಲೆಯಿಂದ ಸೃಷ್ಟಿಸಿದನು. ಜಿನ್ನ್‌ಗಳೇ ಮತ್ತು ಮಾನವರೇ, ನೀವಿನ್ನು ನಿಮ್ಮ ಪ್ರಭುವಿನ ಯಾವ ಯಾವ ಅದ್ಭುತ ಮಹಿಮೆಗಳನ್ನು ಸುಳ್ಳಾಗಿಸುವಿರಿ? ಎರಡು ಪೂರ್ವಗಳ ಮತ್ತು ಎರಡು ಪಶ್ಚಿಮಗಳ ಪಾಲಕ ಪ್ರಭು ಅವನೇ ಆಗಿರುತ್ತಾನೆ. ಜಿನ್ನ್‌ಗಳೇ ಮತ್ತು ಮಾನವರೇ, ನೀವಿನ್ನು ನಿಮ್ಮ ಪ್ರಭುವಿನ ಯಾವ ಯಾವ ಸಾಮರ್ಥ್ಯಗಳನ್ನು ಸುಳ್ಳಾಗಿಸುವಿರಿ?

ಅವನು ಎರಡು ಸಮುದ್ರಗಳನ್ನು ಪರಸ್ಪರ ಒಟ್ಟು ಸೇರಲು ಬಿಟ್ಟನು. ಆದರೂ ಅವುಗಳ ನಡುವೆ ಒಂದು ಪರದೆ ಅಡ್ಡವಾಗಿದ್ದು ಅದನ್ನು ಅವು ಮೀರುವುದಿಲ್ಲ. ಜಿನ್ನ್‌ಗಳೇ ಮತ್ತು ಮಾನವರೇ, ನೀವಿನ್ನು ನಿಮ್ಮ ಪ್ರಭುವಿನ ಮಹಿಮೆಯ ಯಾವ ಯಾವ ಪವಾಡಗಳನ್ನು ಸುಳ್ಳಾಗಿಸುವಿರಿ? ಈ ಸಮುದ್ರಗಳಿಂದ ಮುತ್ತು ಮತ್ತು ಹವಳಗಳು ಲಭಿಸುತ್ತವೆ. ಜಿನ್ನ್‌ಗಳೇ ಮತ್ತು ಮಾನವರೇ, ನೀವಿನ್ನು ನಿಮ್ಮ ಪ್ರಭುವಿನ ಯಾವ ಯಾವ ಚಮತ್ಕಾರಗಳನ್ನು ಸುಳ್ಳಾಗಿಸುವಿರಿ?

ಸಮುದ್ರದಲ್ಲಿ ಪರ್ವತದಂತೆ ಮೇಲೆದ್ದಿರುವ ಹಡಗುಗಳು ಅವನದೇ ಆಗಿವೆ. ಜಿನ್ನ್‌ಗಳೇ ಮತ್ತು ಮಾನವರೇ, ನೀವಿನ್ನು ನಿಮ್ಮ ಪ್ರಭುವಿನ ಯಾವ ಯಾವ ಉಪಕಾರಗಳನ್ನು ಸುಳ್ಳಾಗಿಸುವಿರಿ? ಈ ಭೂಮಿಯಲ್ಲಿರುವ ಪ್ರತಿಯೊಂದು ವಸ್ತುವೂ ನಾಶವಾಗಲಿದೆ ಮತ್ತು ನಿನ್ನ ಪ್ರಭುವಿನ ತೇಜೋಮಯ ಹಾಗೂ ಔದಾರ್ಯಪೂರ್ಣ ಅಸ್ತಿತ್ವ ಮಾತ್ರ ಉಳಿಯಲಿದೆ. ಜಿನ್ನ್‌ಗಳೇ ಮತ್ತು ಮಾನವರೇ, ನೀವಿನ್ನು ನಿಮ್ಮ ಪ್ರಭುವಿನ ಯಾವ ಯಾವ ಚಮತ್ಕಾರಗಳನ್ನು ಸುಳ್ಳಾಗಿಸುವಿರಿ? ಭೂಮಿ-ಆಕಾಶಗಳಲ್ಲಿ ಇರುವವರೆಲ್ಲರೂ ತಮ್ಮ ಬೇಡಿಕೆಗಳನ್ನು ಅವನಿಂದಲೇ ಬೇಡುತ್ತಾರೆ. ಪ್ರತಿದಿನವೂ ಅವನು ವಿನೂತನ ವೈಭವದಲ್ಲಿರುತ್ತಾನೆ. ಜಿನ್ನ್‌ಗಳೇ ಮತ್ತು ಮಾನವರೇ, ನೀವಿನ್ನು ನಿಮ್ಮ ಪ್ರಭುವಿನ ಯಾವ ಯಾವ ಸ್ತುತ್ಯ ಗುಣಗಳನ್ನು ಸುಳ್ಳಾಗಿಸುವಿರಿ?

ಓ ಭೂಭಾರಗಳೇ! ಸದ್ಯದಲ್ಲೇ ನಾವು ನಿಮ್ಮ ವಿಚಾರಣೆ ನಡೆಸಲಿಕ್ಕಾಗಿ ಬಿಡುವು ಮಾಡಿಕೊಳ್ಳಲಿದ್ದೇವೆ. ನಿಮ್ಮ ಪ್ರಭುವಿನ ಯಾವ ಯಾವ ಉಪಕಾರಗಳನ್ನು ನೀವು ಸುಳ್ಳಾಗಿಸುವಿರಿ (ಎಂದು ಆಗ ನಾವು ನೋಡಿಕೊಳ್ಳುವೆವು). ಜಿನ್ನ್ ಮತ್ತು ಮಾನವ ವರ್ಗದವರೇ, ನೀವು ಭೂಮಿ-ಆಕಾಶಗಳ ಸರಹದ್ದುಗಳಿಂದ ಹೊರಗೆ

ಓಡಿ ಹೋಗಬಲ್ಲಿರಾದರೆ ಓಡಿ ನೋಡಿರಿ, ನೀವು ಓಡಲಾರಿರಿ, ಅದಕ್ಕೆ ಪ್ರಚಂಡ ಶಕ್ತಿ ಬೇಕು. ನಿಮ್ಮ ಪ್ರಭುವಿನ ಯಾವ ಯಾವ ಸಾಮರ್ಥ್ಯಗಳನ್ನು ನೀವು ಸುಳ್ಳಾಗಿಸುವಿರಿ? (ಓಡಿ ಹೋಗಲು ಪ್ರಯತ್ನಿಸಿದರೆ) ನಿಮ್ಮ ಮೇಲೆ ಬೆಂಕಿಯ ಜ್ವಾಲೆಯನ್ನೂ ಹೊಗೆಯನ್ನೂ ಬಿಡಲಾಗುವುದು. ನೀವು ಅದನ್ನು ಎದುರಿಸಲಾರಿರಿ. ಜಿನ್ನ್‌ಗಳೇ ಮತ್ತು ಮಾನವರೇ, ನೀವು ನಿಮ್ಮ ಪ್ರಭುವಿನ ಯಾವ ಯಾವ ಮಹಿಮೆಗಳನ್ನು ನಿರಾಕರಿಸುವಿರಿ?

ಆಕಾಶವು ಬಿರಿದಾಗ ಮತ್ತು ಅದು ಕೆಂಪು ಚರ್ಮದಂತಾಗಿ ಮಾರ್ಪಟ್ಟಾಗ (ಅವಸ್ಥೆ ಏನಾದೀತು?) ಜಿನ್ನ್‌ಗಳೇ ಮತ್ತು ಮಾನವರೇ, (ಆಗ) ನಿಮ್ಮ ಪ್ರಭುವಿನ ಯಾವ ಯಾವ ಮಹಿಮೆಗಳನ್ನು ನೀವು ಸುಳ್ಳಾಗಿಸುವಿರಿ?" **(ಅರ್ರಹ್ಮಾನ್: 1–38)**

"ಅಲ್ಲಾಹನು ತನ್ನ ಹೊರತು ಇತರ ಆರಾಧ್ಯನಿಲ್ಲವೆಂದು ಸ್ವತಃ ಸಾಕ್ಷಿ ನುಡಿಯುತ್ತಾನೆ ಮತ್ತು ದೇವಚರರೂ ಎಲ್ಲ ಜ್ಞಾನವಂತರೂ ಆ ಪ್ರಬಲ ಯುಕ್ತಿಪೂರ್ಣನ ಹೊರತು ವಾಸ್ತವ ದಲ್ಲಿ ಅನ್ಯ ಆರಾಧ್ಯನಿಲ್ಲವೆಂದು ಸತ್ಯ ಮತ್ತು ನ್ಯಾಯದೊಂದಿಗೆ ಸಾಕ್ಷಿ ನುಡಿಯುತ್ತಾರೆ." **(ಆಲಿ ಇಮ್ರಾನ್: 18)**

## ದೇವ ಸಂದೇಶವಾಹಕರು (ಪ್ರವಾದಿಗಳು)

"ನಿಶ್ಚಯವಾಗಿಯೂ ಪ್ರವಾದಿಯು ಸತ್ಯವಿಶ್ವಾಸಿಗಳಿಗೆ ಅವರ ಸ್ವಂತ ಅಸ್ತಿತ್ವಕ್ಕಿಂತಲೂ ಪ್ರಧಾನರಾಗಿದ್ದಾರೆ." **(ಅಲ್ ಅಹ್‌ಝಾಬ್: 6)**

"ಎಚ್ಚರಿಕೆ ಕೊಡುವವರಾರೂ ಬಂದಿರದಂತಹ ಸಮುದಾಯವೊಂದೂ ಗತಿಸಿಲ್ಲ." **(ಫಾತಿರ್: 24)**

"ಸಂದೇಶವಾಹಕರೇ! ನಿಮಗಿಂತ ಮುಂಚೆ ಗತಿಸಿದ ಸಂದೇಶವಾಹಕರೊಡನೆ ಹೇಳದಿದ್ದಂತಹ ವಿಷಯವನ್ನೇನೂ ನಿಮಗೆ ಹೇಳಲಾಗುತ್ತಿಲ್ಲ." **(ಫುಸ್ಸಿಲತ್: 43)**

"ಅಲ್ಲಾಹ್ ಹಾಗೂ ಅವನ ಸಂದೇಶವಾಹಕರನ್ನು ನಿಷೇಧಿಸುವವರೂ ಅಲ್ಲಾಹ್ ಮತ್ತು ಅವನ ಸಂದೇಶವಾಹಕರ ನಡುವೆ ತಾರತಮ್ಯ ಮಾಡಬೇಕೆಂದು ಬಯಸು ವವರೂ ನಾವು ಕೆಲವರನ್ನು ಸ್ವೀಕರಿಸುವೆವು ಇನ್ನು ಕೆಲವರನ್ನು ನಿಷೇಧಿಸುವೆವುವೆನ್ನುತ್ತ ಸತ್ಯನಿಷೇಧ ಮತ್ತು ಸತ್ಯವಿಶ್ವಾಸದ ಮಧ್ಯೆ ಒಂದು ನಡುಮಾರ್ಗವನ್ನು ಸ್ವೀಕರಿಸುವ ಇಚ್ಛೆಯುಳ್ಳವರೂ ನೈಜ ಸತ್ಯನಿಷೇಧಿಗಳಾಗಿದ್ದಾರೆ. ಇಂತಹ ಸತ್ಯನಿಷೇಧಿಗಳಿಗೆ ನಾವು ಅಪಮಾನಕರ ಶಿಕ್ಷೆ ಸಿದ್ಧಪಡಿಸಿಟ್ಟಿರುತ್ತೇವೆ. ಇದಕ್ಕೆ ವ್ಯತಿರಿಕ್ತವಾಗಿ ಅಲ್ಲಾಹ್ ಮತ್ತು ಅವನ ಸಮಸ್ತ ಸಂದೇಶವಾಹಕರನ್ನು ನಂಬಿ, ಅವರ ನಡುವೆ ತಾರತಮ್ಯವಿರಿಸದಿರು ವವರಿಗೆ ನಾವು ಖಂಡಿತವಾಗಿಯೂ ಅವರ ಪ್ರತಿಫಲವನ್ನು ನೀಡುವೆವು. ಅಲ್ಲಾಹ್ ಮಹಾ ಕ್ಷಮಾಶೀಲನೂ ಕರುಣಾನಿಧಿಯೂ ಆಗಿರುತ್ತಾನೆ." **(ಅನ್ನಿಸಾ: 150–152)**

"ನಾವು ಇದಕ್ಕಿಂತ ಮುಂಚೆ ನಿಮ್ಮ ಮುಂದೆ ಪ್ರಸ್ತಾಪಿಸಿದ್ದ ಸಂದೇಶವಾಹಕರ ಮೇಲೂ ನಿಮ್ಮ ಮುಂದೆ ಪ್ರಸ್ತಾಪಿಸದೆ ಇದ್ದ ಸಂದೇಶವಾಹಕರ ಮೇಲೂ ವಹ್ಯ್ ಇಳಿಸಿದೆವು." (ಅನ್ನಿಸಾ: 164)

"ಓ ಸತ್ಯವಿಶ್ವಾಸಿಗಳೇ! ಅಲ್ಲಾಹನ ಆಜ್ಞಾಪಾಲನೆ ಮಾಡಿರಿ, ಸಂದೇಶವಾಹಕರ ಮತ್ತು ನಿಮ್ಮೊಳಗಿನ 'ಉಲುಲ್ ಅಮ್ರ್'ರ(ಆಜ್ಞಾಧಿಕಾರ ಹೊಂದಿದವರ) ಆಜ್ಞಾಪಾಲನೆ ಮಾಡಿರಿ." (ಅನ್ನಿಸಾ: 59)

"ಸಂದೇಶವಾಹಕನನ್ನು ಅನುಸರಿಸಿದವನು ವಾಸ್ತವದಲ್ಲಿ ಅಲ್ಲಾಹನನ್ನು ಅನುಸರಿಸಿದನು." (ಅನ್ನಿಸಾ: 80)

"ನಿಶ್ಚಯವಾಗಿಯೂ ಅಲ್ಲಾಹನ ಸಂದೇಶವಾಹಕರಲ್ಲಿ ನಿಮಗಾಗಿ ಒಂದು ಅತ್ಯುತ್ತಮ ಮಾದರಿ ಇತ್ತು. (ಇದು) ಅಲ್ಲಾಹ್ ಹಾಗೂ ಅಂತಿಮ ದಿನವನ್ನು ನಿರೀಕ್ಷಿಸುವವನಿಗೆ ಮತ್ತು ಅಲ್ಲಾಹನನ್ನು ಬಹಳವಾಗಿ ಸ್ಮರಿಸುವವನಿಗೆ." (ಅಲ್ ಅಹ್‌ಝಾಬ್: 21)

"ಆಗ ಧಿಕ್ಕರಿಸಿ ನಡೆದವರು ಹಾಗೂ ಸಂದೇಶವಾಹಕರ ಆಜ್ಞೋಲ್ಲಂಘನೆ ಮಾಡಿದವರು, 'ಅಕಟ! ಭೂಮಿ ಬಿರುಕು ಬಿಡುತ್ತಿದ್ದರೆ! ಮತ್ತು ನಾವು ಅದರೊಳಗೆ ಸೇರಿ ಹೋಗುತ್ತಿದ್ದರೆ!' ಎಂದು ಇಚ್ಛೆಪಡುವರು." (ಅನ್ನಿಸಾ: 42)

"ನಾವು ಪ್ರತಿಯೊಬ್ಬ ಸಂದೇಶವಾಹಕನನ್ನೂ ಅಲ್ಲಾಹನ ಆಜ್ಞೆ ಪ್ರಕಾರ ಅನುಸರಿಸಲ್ಪಡಲಿಕ್ಕಾಗಿಯೇ ಕಳುಹಿಸಿರುತ್ತೇವೆ." (ಅನ್ನಿಸಾ: 64)

"ಯಾರು ಅಲ್ಲಾಹ್ ಮತ್ತು ಅವನ ಸಂದೇಶವಾಹಕರ ಅನುಸರಣೆ ಮಾಡಿದನೋ ಅವನು ಮಹಾ ಯಶಸ್ಸನ್ನು ಪಡೆದನು." (ಅಲ್ ಅಹ್‌ಝಾಬ್: 71)

"ನಾವು ಪ್ರತಿಯೊಂದು ಸಮುದಾಯದಲ್ಲಿ ಓರ್ವ ಸಂದೇಶವಾಹಕನನ್ನು ಕಳುಹಿಸಿದೆವು ಮತ್ತು ಅಲ್ಲಾಹನ ಇಬಾದತ್ (ದಾಸ್ಯ-ಆರಾಧನೆ) ಮಾಡಿರಿ ಮತ್ತು 'ತಾಗೂತ್'ನ ಇಬಾದತ್‌ನಿಂದ ದೂರವಿರಿ ಎಂದು ಅವರ ಮುಖಾಂತರ ಎಚ್ಚರಿಕೆ ನೀಡಿದೆವು." (ಅನ್ನಹ್ಲ್: 36)

## ಮುಹಮ್ಮದ್(ಸ)

"ಅಲ್ಲಾಹನ ಸಂದೇಶಗಳನ್ನು ತಲುಪಿಸುವ, ಅವನನ್ನೇ ಭಯಪಡುವ ಮತ್ತು ಒಬ್ಬ ದೇವನ ಹೊರತು ಯಾರನ್ನೂ ಭಯಪಡದವರಿಗೆ... ವಾಸ್ತವದಲ್ಲಿ ಅವರು [ಮುಹಮ್ಮದ್(ಸ)] ಅಲ್ಲಾಹನ ಸಂದೇಶವಾಹಕರು ಮತ್ತು ಪ್ರವಾದಿಗಳಲ್ಲಿ ಕೊನೆಯವರಾಗಿರುತ್ತಾರೆ." (ಅಲ್ ಅಹ್‌ಝಾಬ್: 39 ಮತ್ತು 40)

"ಓ ಪೈಗಂಬರರೇ! ನಾವು ನೂಹ್ ಮತ್ತು ಅನಂತರದ ಪ್ರವಾದಿಗಳ ಕಡೆಗೆ ದಿವ್ಯವಾಣಿ ಕಳುಹಿಸಿದಂತೆಯೇ ನಿಮ್ಮ ಕಡಗೂ ದಿವ್ಯವಾಣಿ ಕಳುಹಿಸಿರುತ್ತೇವೆ. ನಾವು ಇಬ್‌ರಾಹೀಮ್, ಇಸ್ಮಾಈಲ್, ಇಸ್‌ಹಾಕ್, ಯಅ್‌ಕೂಬ್ ಮತ್ತು ಯಅ್‌ಕೂಬರ ಸಂತತಿ, ಈಸಾ, ಅಯ್ಯೂಬ್, ಯೂನುಸ್, ಹಾರೂನ್ ಮತ್ತು ಸುಲೈಮಾನರ ಕಡೆಗೂ ವಹ್ಯ್ ಕಳುಹಿಸಿದೆವು. ನಾವು ದಾವೂದರಿಗೆ ಝುಬೂರ್ ನೀಡಿದೆವು." (ಅನ್ನಿಸಾ: 163)

"ಪೈಗಂಬರರೇ, ನಾವು ನಿಮಗಿಂತ ಮುಂಚೆಯೂ ಮನುಷ್ಯರನ್ನೇ ಸಂದೇಶವಾಹಕರಾಗಿ ರವಾನಿಸಿದ್ದೆವು. ಅವರ ಮೇಲೆ ನಾವು ವಹ್ಯ್ ಮಾಡುತ್ತಿದ್ದೆವು. ನಿಮಗೆ ಗೊತ್ತಿಲ್ಲದಿದ್ದರೆ ಗ್ರಂಥದವರೊಡನೆ ಕೇಳಿರಿ. ನಾವು ಆ ಸಂದೇಶವಾಹಕರಿಗೆ ಆಹಾರವನ್ನು ಸೇವಿಸದಂತಹ ಶರೀರವನ್ನು ನೀಡಿರಲಿಲ್ಲ ಮತ್ತು ಅವರು ಸದಾಕಾಲ ಬದುಕುವವರೂ ಆಗಿರಲಿಲ್ಲ. ಕೊನೆಗೆ ನಾವು ಅವರೊಡನೆ ಮಾಡಿದ ನಮ್ಮ ವಾಗ್ದಾನವನ್ನು ಪೂರೈಸಿದೆವು ಮತ್ತು ಅವರನ್ನೂ ನಾವಿಚ್ಛಿಸಿದ ಇತರರನ್ನೂ ರಕ್ಷಿಸಿದೆವು ಮತ್ತು ಹದಮೀರಿದವರನ್ನು ನಾಶಗೊಳಿಸಿಬಿಟ್ಟೆವು." (ಅಲ್ ಅಂಬಿಯಾ: 7–9)

"ಪೈಗಂಬರರೇ, ನಾವು ನಿಮಗಿಂತ ಮುಂಚೆ ಯಾವ ಸಂದೇಶವಾಹಕ ಅಥವಾ ಪ್ರವಾದಿಯವರನ್ನು ಕಳುಹಿಸಿದ್ದೆವೋ ಅವರು ಇಚ್ಛಿಸಿದಾಗ ಅವರ ಸದಿಚ್ಛೆಯಲ್ಲಿ ಶೈತಾನನು ತಡೆಯನ್ನು ಉಂಟು ಮಾಡದೆ ಇರಲಿಲ್ಲ. ಹೀಗೆ ಶೈತಾನನು ಉಂಟು ಮಾಡುವ ಪ್ರತಿಯೊಂದು ತಡೆಯನ್ನು ಅಲ್ಲಾಹನು ಅಳಿಸಿಬಿಡುತ್ತಾನೆ ಮತ್ತು ತನ್ನ ವಚನಗಳನ್ನು ಸುದೃಢಗೊಳಿಸಿಬಿಡುತ್ತಾನೆ. ಅಲ್ಲಾಹನು ಸರ್ವಜ್ಞನೂ ಯುಕ್ತಿಪೂರ್ಣನೂ ಆಗಿರುತ್ತಾನೆ." (ಅಲ್ ಹಜ್ಜ್: 52)

"ನಾವು ನಿಮಗಿಂತ ಮುಂಚೆ ಕಳುಹಿಸಿದ ಪ್ರತಿಯೊಬ್ಬ ಸಂದೇಶವಾಹಕರಿಗೂ, 'ನನ್ನ ಹೊರತು ಅನ್ಯ ದೇವರಿಲ್ಲ. ಆದ್ದರಿಂದ ನೀವು ನನ್ನ ದಾಸ್ಯ-ಆರಾಧನೆಯನ್ನೇ ಮಾಡಿರಿ' ಎಂದು ವಹ್ಯ್ ಮಾಡಿದ್ದೆವು." (ಅಲ್ ಅಂಬಿಯಾ: 25)

"(ಪೈಗಂಬರರೇ) ಪ್ರಶಂಸೆಗಳೆಲ್ಲ ಅಲ್ಲಾಹನಿಗೆ ಮತ್ತು ಅವನು ಪುನೀತಗೊಳಿಸಿದ ಆತನ ದಾಸರ ಮೇಲೆ ಶಾಂತಿ ಇರಲೆಂದು ಹೇಳಿರಿ." (ಅನ್ನಮ್ಲ್: 59)

"ಓ ಮುಹಮ್ಮದ್‌ರೇ(ಸ)! ಹೇಳಿರಿ: ಓ ಮಾನವರೇ! ನಾನು ನಿಮ್ಮೆಲ್ಲರ ಭೂಮಿ-ಆಕಾಶಗಳ ಸಾರ್ವಭೌಮನಾಗಿರುವ ಅಲ್ಲಾಹನ ಸಂದೇಶವಾಹಕನಾಗಿರುತ್ತೇನೆ. ಅವನ ಹೊರತು ಆರಾಧ್ಯನಿಲ್ಲ. ಅವನೇ ಜೀವನ ನೀಡುವವನು. ಅವನೇ ಮರಣ ಕೊಡುವವನು." (ಅಲ್ ಅಅ್‌ರಾಫ್: 158)

"ಓ ಪೈಗಂಬರರೇ! ನೀವು ಜನರೊಡನೆ ಹೀಗೆ ಹೇಳಿ ಬಿಡಿರಿ: ನೀವು ನಿಜವಾಗಿಯೂ ಅಲ್ಲಾಹನನ್ನು ಪ್ರೀತಿಸುತ್ತೀರೆಂದಾದರೆ ನನ್ನ ಅನುಕರಣೆ ಮಾಡಿರಿ.

ಅಲ್ಲಾಹನು ನಿಮ್ಮನ್ನು ಪ್ರೀತಿಸುವನು ಮತ್ತು ನಿಮ್ಮ ಪಾಪಗಳನ್ನು ಕ್ಷಮಿಸುವನು. ಅವನು ಮಹಾ ಕ್ಷಮಾಶೀಲನೂ ಕರುಣಾಮಯಿಯೂ ಆಗಿರುತ್ತಾನೆ."

(ಆಲಿ ಇಮ್ರಾನ್: 31)

"ಪೈಗಂಬರರೇ, ನಾವು ನಿಮ್ಮನ್ನು ಸಕಲ ಲೋಕದವರಿಗೆ ಅನುಗ್ರಹವಾಗಿ ಮಾಡಿ ಕಳುಹಿಸಿರುತ್ತೇವೆ." (ಅಲ್ ಅಂಬಿಯಾ: 107)

"ನಾವು ನಿಮ್ಮೊಳಗಿಂದಲೇ ಓರ್ವ ಸಂದೇಶವಾಹಕನನ್ನು ಕಳುಹಿಸಿದೆವು. ಅವರು ನಿಮಗೆ ನಮ್ಮ ವಚನಗಳನ್ನು ಓದಿ ಹೇಳುತ್ತಾರೆ, ನಿಮ್ಮನ್ನು ಸಂಸ್ಕರಿಸುತ್ತಾರೆ, ನಿಮಗೆ ಗ್ರಂಥ ಮತ್ತು ಯುಕ್ತಿಯ ಶಿಕ್ಷಣವನ್ನು ನೀಡುತ್ತಾರೆ ಮತ್ತು ನೀವು ಇಷ್ಟರ ತನಕ ತಿಳಿಯದಿದ್ದ ಸಂಗತಿಗಳನ್ನು ಬೋಧಿಸುತ್ತಾರೆ." (ಅಲ್ ಬಕರ: 151)

## ಅಲ್ಲಾಹನ ಕಾನೂನು

"ಯಾವ ಹೊರೆ ಹೊರುವಾತನೂ ಇನ್ನೊಬ್ಬನ ಹೊರೆ ಹೊರಲಾರನು. ಮನುಷ್ಯನು ತಾನೇ ಪರಿಶ್ರಮಿಸಿದುದರ ಹೊರತು ಅವನಿಗೆ ಬೇರೇನೂ ಇಲ್ಲ ಮತ್ತು ಅವನ ಪರಿಶ್ರಮವನ್ನು ಸದ್ಯವೇ ನೋಡಲಾಗುವುದು. ಅನಂತರ ಅವನ ಸಂಪೂರ್ಣ ಪ್ರತಿಫಲವನ್ನು ಕೊಡ ಲಾಗುವುದು." (ಅನ್ನಜ್ಮ್: 38–41)

"ವಾಸ್ತವದಲ್ಲಿ ಒಂದು ಜನಾಂಗವು ಸ್ವತಃ ತಾನೇ ತನ್ನ ಸ್ಥಿತಿಯನ್ನು ಬದಲಾಯಿಸಿಕೊಳ್ಳುವ ವರೆಗೂ ಅಲ್ಲಾಹನು ಅದರ ಸ್ಥಿತಿಯನ್ನು ಬದಲಾಯಿಸುವುದಿಲ್ಲ."

(ಅರ್ರಅ್‌ದ್: 11)

"ಪ್ರತಿಯೊಬ್ಬ ಮನುಷ್ಯನ ಶಕುನವನ್ನು ನಾವು ಅವನ ಕೊರಳಿಗೇ ಕಟ್ಟಿಬಿಡುತ್ತೇವೆ. ಪುನರುತ್ಥಾನ ದಿನದಂದು ನಾವು ಅವನಿಗಾಗಿ ಒಂದು ಲಿಖಿತವನ್ನು ಹೊರಡಿಸುವೆವು. ಅವನು ಅದನ್ನು ತೆರೆದ ಗ್ರಂಥದಂತೆ ಕಾಣುವನು. 'ನಿನ್ನ ಕರ್ಮಪತ್ರವನ್ನು ಓದು. ಇಂದು ನಿನ್ನ ಲೆಕ್ಕ ತೆಗೆಯಲು ನೀನೇ ಸಾಕು' (ಎಂದು ಹೇಳಲಾಗುವುದು). ಸನ್ಮಾರ್ಗ ಸ್ವೀಕರಿಸಿಕೊಳ್ಳುವವನ ಸನ್ಮಾರ್ಗ ಗಮನವು ಅವನಿಗೇ ಒಳಿತಾಗಿದೆ ಮತ್ತು ಪಥಭ್ರಷ್ಟತೆಯ ವಿಪತ್ತೂ ಅವನ ಮೇಲೆಯೇ ಬೀಳುತ್ತದೆ. ಯಾವ ಹೊರೆ ಹೊರುವಾತನೂ ಇನ್ನೊಬ್ಬನ ಹೊರೆಯನ್ನು ಹೊರಲಾರನು (ಜನರಿಗೆ ಸತ್ಯಾಸತ್ಯತೆಗಳ ಅಂತರವನ್ನು ತೋರಿಸಿಕೊಡಲು) ಓರ್ವ ಸಂದೇಶವಾಹಕನನ್ನು ಕಳುಹಿಸಿಕೊಡದೆ ನಾವು ಯಾತನೆ ಕೊಡುವವರಲ್ಲ." (ಬನೀ ಇಸ್ರಾಯೀಲ್: 13–15)

"(ಈ ಲೋಕದಲ್ಲಿ) ಶೀಘ್ರವಾಗಿ ಪ್ರಾಪ್ತವಾಗುವ ಫಲಗಳನ್ನು ಅಪೇಕ್ಷಿಸುವವನಿಗೆ ನಾವು ಕೊಡಲಿಚ್ಛಿಸುವುದನ್ನು ಇಲ್ಲೇ ಕೊಟ್ಟು ಬಿಡುತ್ತೇವೆ. ಅನಂತರ ಅವನ ಪಾಲಿಗೆ ನರಕವನ್ನು ಬರೆದು ಬಿಡುತ್ತೇವೆ. ಅದರಲ್ಲಿ ಅವನು ಧಿಕ್ಕರಿಸಲ್ಪಟ್ಟು ಹಾಗೂ ಕೃಪೆಯಿಂದ

ವಂಚಿತನಾಗಿ ಬೇಯುತ್ತಿರುವನು ಮತ್ತು ಯಾರಾದರೂ ಪರಲೋಕವನ್ನು ಇಷ್ಟಪಟ್ಟು ಅದಕ್ಕಾಗಿ ಪ್ರಯತ್ನಿಸಬೇಕಾದ ರೀತಿಯಲ್ಲಿ ಪ್ರಯತ್ನಿಸಿದರೆ ಮತ್ತು ಅವನು ಸತ್ಯವಿಶ್ವಾಸಿಯಾಗಿದ್ದರೆ, ಇಂತಹ ಪ್ರತಿಯೊಬ್ಬನ ಪ್ರಯತ್ನವು ಕೃತಾರ್ಥವಾಗುವುದು. ನಾವು ಇವರಿಗೂ ಅವರಿಗೂ ಎರಡು ವರ್ಗದವರಿಗೂ (ಇಹಲೋಕದಲ್ಲಿ) ಜೀವನ ಸಾಮಗ್ರಿಯನ್ನು ಕೊಡುತ್ತಿರುತ್ತೇವೆ. ಇದು ನಿನ್ನ ಪ್ರಭುವಿನ ಕೊಡುಗೆ. ನಿನ್ನ ಪ್ರಭುವಿನ ಕೊಡುಗೆಯನ್ನು ತಡೆಯುವವನು ಯಾರೂ ಇಲ್ಲ. ಆದರೆ ನಾವು ಇಹಲೋಕದಲ್ಲಿ ಒಂದು ವರ್ಗಕ್ಕೆ ಇನ್ನೊಂದು ವರ್ಗದ ಮೇಲೆ ಎಂತಹ ಶ್ರೇಷ್ಠತೆ ಪ್ರಧಾನ ಮಾಡಿರುತ್ತೇವೆಂದು ನೋಡಿರಿ. ಪರಲೋಕದಲ್ಲಿ ಅದರ ಸ್ಥಾನವು ಇನ್ನಷ್ಟು ಹೆಚ್ಚುವುದು ಮತ್ತು ಅದರ ಶ್ರೇಷ್ಠತೆ ಮತ್ತಷ್ಟು ಅಧಿಕವಾಗುವುದು." **(ಬನೀ ಇಸ್ರಾಯೀಲ್: 18–21)**

"ಅಧರ್ಮ ಮತ್ತು ನಿಷೇಧ ನೀತಿಯನ್ನನುಸರಿಸುವವರಿಗೆ ಇಹ–ಪರಗಳೆರಡರಲ್ಲೂ ಕಠಿಣ ಶಿಕ್ಷೆ ಕೊಡುವೆನು ಮತ್ತು ಅವರು ಯಾವ ಸಹಾಯಕನನ್ನೂ ಪಡೆಯಲಾರರು. ಸತ್ಯವಿಶ್ವಾಸ ಮತ್ತು ಸತ್ಕರ್ಮಗಳ ನಿಲುಮೆಯನ್ನಿರಿಸಿಕೊಂಡವರಿಗೆ ಅವರ ಪ್ರತಿಫಲಗಳು ಸರ್ವಸಂಪೂರ್ಣವಾಗಿ ಕೊಡಲ್ಪಡುವುವು ಮತ್ತು ಅಲ್ಲಾಹನು ಅಕ್ರಮಿಗಳನ್ನು ಎಂದಿಗೂ ಪ್ರೀತಿಸುವುದಿಲ್ಲ (ಎಂಬುದನ್ನು ಚೆನ್ನಾಗಿ ತಿಳಿದುಕೊಳ್ಳಿರಿ.)"

**(ಆಲಿ ಇಮ್ರಾನ್: 56–57)**

## ಪರಲೋಕ

"ಇವರಿಗೆಲ್ಲಾ ನಮ್ಮ ಕಡೆಗೇ ಮರಳಲಿಕ್ಕಿದೆ. ತರುವಾಯ ಇವರ ವಿಚಾರಣೆ ನಡೆಸುವ ಹೊಣೆ ನಮ್ಮ ಮೇಲೆಯೇ ಇದೆ." **(ಅಲ್ ಗಾಶಿಯ: 25–26)**

"ಅಂದು ಜನರು ವಿಭಿನ್ನ ಸ್ಥಿತಿಗಳಲ್ಲಿ ಮರಳುವರು. (ಇದು) ಅವರ ಕರ್ಮಗಳು ಅವರಿಗೆ ತೋರಿಸಲ್ಪಡಲಿಕ್ಕಾಗಿ. ತರುವಾಯ ಅಣು ಗಾತ್ರದಷ್ಟು ಪುಣ್ಯಕಾರ್ಯವೆಸಗಿದವನು ಅದನ್ನು ಕಂಡೇ ತೀರುವನು ಮತ್ತು ಅಣುಗಾತ್ರದಷ್ಟು ಪಾಪಕಾರ್ಯವೆಸಗಿದವನು ಅದನ್ನು ಕಂಡೇ ತೀರುವನು." **(ಅಝ್ಝಿಲ್‌ಝಾಲ್: 6–8)**

"ವಿದ್ರೋಹವೆಸಗಿದವನಿಗೆ ಹಾಗೂ ಇಹಲೋಕ ಜೀವನಕ್ಕೆ ಆದ್ಯತೆ ಕೊಟ್ಟವನಿಗೆ ನರಕವೇ ನಿವಾಸವಾಗುವುದು. ತನ್ನ ಪ್ರಭುವಿನ ಮುಂದೆ ಹಾಜರಾಗಲಿಕ್ಕಿದೆಯೆಂದು ಭಯಪಡುತ್ತಿದ್ದವನಿಗೆ ಮತ್ತು ತನ್ನ ಚಿತ್ತದ ದುಷ್ಟ ಅಪೇಕ್ಷೆಗಳಿಂದ ತನ್ನನ್ನು ತಡೆದಿಟ್ಟುಕೊಂಡಿದ್ದವನಿಗೆ ಸ್ವರ್ಗವೇ ನಿವಾಸವಾಗುವುದು." **(ಅನ್ನಾಝಿಆತ್: 37–41)**

"ಅಂದು ಅಲ್ಲಾಹನು ಕೊಡುವಂತಹ ಯಾತನೆಯನ್ನು ಕೊಡಬಲ್ಲವರು ಬೇರಾರೂ ಇಲ್ಲ. ಅಲ್ಲಾಹನು ಬಂಧಿಸುವ ರೀತಿಯಲ್ಲಿ ಬಂಧಿಸುವವನೂ ಯಾರೂ ಇಲ್ಲ. (ಇನ್ನೊಂದು ಕಡೆಯಿಂದ ಹೀಗೆ ಅಪ್ಪಣೆಯಾಗುವುದು): ಓ ಶಾಂತಚಿತ್ತವೇ!

ನೀನು (ನಿನ್ನ ಸದ್ಗತಿಯಿಂದ) ಸಂತುಷ್ಟನೂ (ನಿನ್ನ ಪ್ರಭುವಿನ ಬಳಿ) ಮೆಚ್ಚುಗೆಗೆ ಪಾತ್ರನೂ ಆಗಿರುವ ಸ್ಥಿತಿಯಲ್ಲಿ ನಿನ್ನ ಪ್ರಭುವಿನ ಬಳಿಗೆ ನಡೆ. ನನ್ನ (ಸಜ್ಜನ) ದಾಸರೊಂದಿಗೆ ಸೇರಿಕೋ ಮತ್ತು ನನ್ನ ಸ್ವರ್ಗದೊಳಗೆ ಪ್ರವೇಶಿಸು."

(ಅಲ್ ಫಜ್ರ್: 25–30)

"ನಿಜಕ್ಕೂ ನಿಮ್ಮ ಪ್ರಭುವಿನ ಹಿಡಿತವು ಬಹಳ ಕಠಿಣವಾದುದು. ಅವನೇ ಪ್ರಥಮ ಬಾರಿ ಸೃಷ್ಟಿಸುತ್ತಾನೆ ಮತ್ತು ಅವನೇ ಪುನಃ ಸೃಷ್ಟಿಸುವವನು ಮತ್ತು ಅವನು ಮಹಾ ಕ್ಷಮಾಶೀಲನೂ ಪ್ರೀತಿಸುವವನೂ ಆಗಿರುತ್ತಾನೆ. ಅವನು ವಿಶ್ವಸಿಂಹಾಸನದ ಒಡೆಯನು, ಪರಮೋನ್ನತನು ಮತ್ತು ತಾನಿಚ್ಛಿಸಿದ್ದನ್ನು ಮಾಡಿ ಬಿಡುವವನು."

(ಅಲ್ ಬುರೂಜ್: 12–16)

"ನಿಸ್ಸಂದೇಹವಾಗಿಯೂ ತೀರ್ಮಾನದ ದಿನವು ಒಂದು ನಿಶ್ಚಿತ ಸಮಯವಾಗಿದೆ. ಕಹಳೆಯನ್ನು ಊದುವಂದು ನೀವು ತಂಡೋಪತಂಡವಾಗಿ ಹೊರಟು ಬರುವಿರಿ. ಆಕಾಶವನ್ನು ತೆರೆದು ಬಿಡಲಾಗುವುದು. ಅದು ದ್ವಾರಗಳೇ ದ್ವಾರಗಳಾಗಿ ಬಿಡುವುದು ಮತ್ತು ಪರ್ವತಗಳು ಚಲಿಸಲ್ಪಡುವುವು. ಅವು ಮರೀಚಿಕೆಗಳಾಗಿ ಬಿಡುವುವು.

ವಾಸ್ತವದಲ್ಲಿ ನರಕವು ಒಂದು ಬೋನಾಗಿದೆ. ಅದು ವಿದ್ರೋಹಿಗಳ ವಾಸಸ್ಥಾನ ವಾಗಿದೆ. ಅದರಲ್ಲಿ ಅವರು ದೀರ್ಘಕಾಲ ಬಿದ್ದುಕೊಂಡಿರುವರು. ಅದರೊಳಗೆ ಅವರು ಯಾವುದೇ ತಂಪನ್ನಾಗಲೀ, ಕುಡಿಯಲರ್ಹವಾದ ಯಾವುದೇ ವಸ್ತುವಿನ ರುಚಿಯನ್ನಾಗಲೀ ಸವಿಯಲಾರರು. ಏನಾದರೂ ಸಿಗುವುದಿದ್ದರೆ ಅದು ಕುದಿಯುವ ನೀರು ಮತ್ತು ಹುಣ್ಣುಗಳ ಕೀವು ಮಾತ್ರ. (ಅವರ ದುಷ್ಕೃತ್ಯಗಳ) ಪರಿಪೂರ್ಣ ಪ್ರತಿಫಲವಿದು. ಅವರು ಯಾವುದೇ ವಿಚಾರಣೆಯನ್ನು ನಿರೀಕ್ಷಿಸುತ್ತಿರಲಿಲ್ಲ ಮತ್ತು ಅವರು ನಮ್ಮ ಸೂಕ್ತಗಳನ್ನು ಸಂಪೂರ್ಣವಾಗಿ ಸುಳ್ಳಾಗಿಸಿ ಬಿಟ್ಟಿದ್ದರು. ವಸ್ತುತಃ ನಾವು ಪ್ರತಿಯೊಂದನ್ನೂ ಸರಿಯಾಗಿ ಎಣಿಸಿ ಬರೆದಿಟ್ಟಿದ್ದೆವು. ಈಗ ಇದರ ರುಚಿ ಸವಿಯಿರಿ. ನಾವು ನಿಮಗಾಗಿ ಯಾತನೆಯ ಹೊರತು ಬೇರೇನನ್ನೂ ಖಂಡಿತ ಹೆಚ್ಚಿಸಲಾರೆವು.

ಖಂಡಿತವಾಗಿಯೂ ಧರ್ಮನಿಷ್ಠರಿಗಾಗಿ ಯಶಸ್ಸಿನ ಒಂದು ಸ್ಥಾನವಿದೆ. ಉದ್ಯಾನಗಳು, ದ್ರಾಕ್ಷೆಗಳು, ಸಮವಯಸ್ಕ ನವತರುಣಿಯರು ಮತ್ತು ತುಂಬಿ ತುಳುಕುವ ಪಾನ ಪಾತ್ರೆಗಳು ಅವರಿಗಾಗಿವೆ. ಅಲ್ಲಿ ಅವರು ಯಾವುದೇ ಅಸಂಬದ್ಧ ಮತ್ತು ಸುಳ್ಳು ಮಾತನ್ನು ಕೇಳಲಾರರು. ನಿಮ್ಮ ಪ್ರಭುವಿನ ಕಡೆಯಿಂದ ಸತ್ಫಲ ಹಾಗೂ ಸಾಕಷ್ಟು ಪುರಸ್ಕಾರ, ಭೂಮಿ–ಆಕಾಶಗಳ ಮತ್ತು ಅವುಗಳ ನಡುವಿನ ಪ್ರತಿಯೊಂದು ವಸ್ತುವಿನ ಒಡೆಯನಾಗಿರುವ ಪರಮ ದಯಾಮಯನಾದ ಪ್ರಭುವಿನ ಕಡೆಯಿಂದ, ಅವನ ಮುಂದೆ ಮಾತಾಡುವ ಸಾಮರ್ಥ್ಯ ಯಾರಿಗೂ ಇಲ್ಲ.

'ರೂಹ್' ಮತ್ತು ದೇವಚರರು ಸಾಲುಸಾಲಾಗಿ ನಿಲ್ಲಲಿರುವ ಆ ದಿನ ಪರಮ

ದಯಾಮಯನ ಅನುಮತಿ ಪಡೆದ ಮತ್ತು ಸರಿಯಾದ ಮಾತನ್ನೇ ಆಡುವ ವ್ಯಕ್ತಿಯ ಹೊರತು ಬೇರಾರೂ ಮಾತಾಡಲಾರರು. ಆ ದಿನ ಬರುವುದು ಸತ್ಯ. ಇನ್ನು ಇಷ್ಟವಿದ್ದವರು ತಮ್ಮ ಪ್ರಭುವಿನ ಕಡೆಗೆ ಮರಳುವ ಹಾದಿ ಹಿಡಿದುಕೊಳ್ಳಲಿ. ಸನ್ನಿಹಿತವಾಗಿರುವ ಆ ಯಾತನೆಯ ಬಗ್ಗೆ ನಿಮ್ಮನ್ನು ನಾವು ಎಚ್ಚರಿಸಿದ್ದೇವೆ. ಅಂದು ಮಾನವನು ತನ್ನ ಕೈಗಳು ಮುಂದೆ ಕಳುಹಿಸಿರುವುದೆಲ್ಲವನ್ನೂ ಕಂಡುಕೊಳ್ಳುವನು ಮತ್ತು ಸತ್ಯನಿಷೇಧಿಯು 'ಅಯ್ಯೋ ನಾನು ಮಣ್ಣಾಗಿ ಬಿಡುತ್ತಿದ್ದರೆ!' ಎಂದು ಗೋಳಿಡುವನು." (ಅನ್ನಬಾ: 17–40)

"ಧರ್ಮನಿಷ್ಠರಿಗೆ ವಾಗ್ದಾನ ಮಾಡಲಾಗಿರುವ ಆ ಸ್ವರ್ಗದ ವಿಶೇಷತೆಯೇನೆಂದರೆ ಅವರಲ್ಲಿ ತಿಳಿನೀರಿನ ಕಾಲುವೆಗಳು ಹರಿಯುತ್ತಿರುವುವು, ಸ್ವಲ್ಪವೂ ರುಚಿ ಬದಲಾಗಿರದಂತಹ ಹಾಲಿನ ಕಾಲುವೆಗಳು ಹರಿಯುತ್ತಿರುವುವು. ಕುಡಿಯುವವರಿಗೆ ಅತ್ಯಂತ ರುಚಿಕರವಾಗಿರುವ ಮದಿರೆಯ ಕಾಲುವೆಗಳು ಹರಿಯುತ್ತಿರುವುವು. ಅತ್ಯಂತ ತಿಳಿಯಾದ ಜೇನಿನ ಕಾಲುವೆಗಳು ಹರಿಯುತ್ತಿರುವುವು. ಅದರಲ್ಲಿ ಅವರಿಗಾಗಿ ಎಲ್ಲ ಬಗೆಯ ಫಲಗಳಿರುವುವು ಮತ್ತು ಅವರ ಪ್ರಭುವಿನ ಕಡೆಯಿಂದ ಕ್ಷಮೆ ಇರುವುದು. (ಇಂತಹ ಸ್ವರ್ಗ ಯಾರ ಪಾಲಿಗೆ ಬರಲಿದೆಯೋ ಅವನು) ಸದಾಕಾಲ ನರಕದಲ್ಲೇ ವಾಸಿಸಲಿರುವ ಮತ್ತು ಕರುಳುಗಳನ್ನು ಕತ್ತರಿಸಿಬಿಡುವಂತಹ ಕುದಿಯುವ ನೀರನ್ನು ಕುಡಿಸಲ್ಪಡಲಿರುವ ಜನರಿಗೆ ಸಮಾನನಾಗಬಲ್ಲನೇ?" (ಮುಹಮ್ಮದ್: 15)

"ಬರಲಿರುವ ಘಳಿಗೆಯು ಸನ್ನಿಹಿತವಾಗಿದೆ. ಅಲ್ಲಾಹನ ಹೊರತು ಯಾರೂ ಅದನ್ನು ಸರಿಸುವವನಿಲ್ಲ. ನೀವೀಗ ಇದೇ ವಿಷಯಗಳ ಬಗ್ಗೆ ಅಚ್ಚರಿಪಡುತ್ತಿರುವುದೇ? ನಗುತ್ತೀರಾ? ಅಳುವುದಿಲ್ಲವೇ? ಹಾಡಿ ನಲಿದು ಇವುಗಳನ್ನು ತಳ್ಳಿ ಹಾಕುತ್ತೀರಾ? ಅಲ್ಲಾಹನ ಮುಂದೆ ಸಾಷ್ಟಾಂಗವೆರಗಿರಿ ಮತ್ತು ಅವನ ದಾಸ್ಯ ಕೈಗೊಳ್ಳಿರಿ." (ಅನ್ನಜ್ಮ್: 57–62)

"ಸತ್ಯವಿಶ್ವಾಸಿಗಳೇ, ಅಲ್ಲಾಹನನ್ನು ಭಯಪಡಿರಿ ಮತ್ತು ಪ್ರತಿಯೊಬ್ಬನೂ ನಾನು ನಾಳೆಗಾಗಿ ಏನನ್ನು ಸಿದ್ಧಪಡಿಸಿಟ್ಟಿರುವೆನೆಂಬುದನ್ನು ನೋಡಿಕೊಳ್ಳಲಿ. ಅಲ್ಲಾಹನನ್ನು ಭಯಪಡುತ್ತಲಿರಿ. ನಿಶ್ಚಯವಾಗಿಯೂ ನೀವು ಮಾಡುತ್ತಿರುವ ಸಕಲ ಕರ್ಮಗಳನ್ನು ಅಲ್ಲಾಹನು ಬಲ್ಲವನಾಗಿರುತ್ತಾನೆ. ಯಾರು ಅಲ್ಲಾಹನನ್ನು ಮರೆತಾಗ ಅಲ್ಲಾಹನು ಅವರು ತಮ್ಮನ್ನು ತಾವೇ ಮರೆತು ಬಿಡುವಂತೆ ಮಾಡಿದನೋ ಅವರಂತೆ ನೀವಾಗಬಾರದು. ಅವರೇ 'ಫಾಸಿಕರು' (ಕರ್ಮಭ್ರಷ್ಟರು)." (ಅಲ್ ಹಶ್ರ್: 18–19)

"(ಅಲ್ಲಾಹನು ಅಂದು ಹೀಗೆ ಹೇಳುವನು) ಇದೋ ನಾವು ನಿಮ್ಮನ್ನು ಪ್ರಥಮ ಬಾರಿ ಒಬ್ಬಂಟಿಗರನ್ನಾಗಿ ಸೃಷ್ಟಿಸಿದಂತೆಯೇ ನೀವೀಗ ಒಬ್ಬಂಟಿಗರಾಗಿ ನಮ್ಮ ಮುಂದೆ ಹಾಜರಾಗಿಬಿಟ್ಟಿರಿ. ನಾವು ನಿಮಗೆ ಇಹಲೋಕದಲ್ಲಿ ಕೊಟ್ಟಿದ್ದುದನ್ನೆಲ್ಲಾ

ನೀವು ಬಿಟ್ಟು ಬಂದಿರಿ. ಈಗ ನಿಮ್ಮೊಂದಿಗೆ ನಿಮ್ಮ ಕಾರ್ಯನಿರ್ವಹಣೆಯಲ್ಲಿ ಯಾರ ಪಾಲಿದೆಯೆಂದು ನೀವು ತಿಳಿದುಕೊಂಡಿದ್ದೀರೋ ಆ ನಿಮ್ಮ ಶಿಫಾರಸುದಾರರನ್ನು ನಾವು ಇಲ್ಲಿ ಕಾಣುತ್ತಿಲ್ಲ. ನಿಮ್ಮ ಪರಸ್ಪರ ಸಂಬಂಧಗಳು ಮುರಿದು ಹೋದವು. ನೀವು ಅಭಿಮಾನವಿರಿಸಿಕೊಂಡಿದ್ದವರೆಲ್ಲರೂ ನಿಮ್ಮಿಂದ ಮಾಯವಾಗಿ ಬಿಟ್ಟರು."

(ಅಲ್ ಅನ್‌ಆಮ್: 96)

## ಒಳಿತು-ಕೆಡುಕು

"ಲುಕ್ಮಾನರು ಅಲ್ಲಾಹನಿಗೆ ಕೃತಜ್ಞರಾಗಲೆಂದು ನಾವು ಅವರಿಗೆ ಯುಕ್ತಿಯನ್ನು ದಯಪಾಲಿಸಿದೆವು. ಕೃತಜ್ಞನ ಕೃತಜ್ಞತೆಯು ಅವನ ಸ್ವಂತಕ್ಕೇ ಲಾಭದಾಯಕವಾಗಿದೆ ಮತ್ತು ಯಾರಾದರೂ ಧಿಕ್ಕರಿಸಿದರೆ, ವಾಸ್ತವದಲ್ಲಿ ಅಲ್ಲಾಹನು ನಿರಪೇಕ್ಷನೂ ಸ್ವಯಂ ಸ್ತುತ್ಯರ್ಹನೂ ಆಗಿರುತ್ತಾನೆ. ಲುಕ್ಮಾನರು ತಮ್ಮ ಪುತ್ರನಿಗೆ ಉಪದೇಶವೀಯುತ್ತಿದ್ದ ಸಂದರ್ಭವನ್ನು ಸ್ಮರಿಸಿರಿ. ಅವರು, 'ಮಗನೇ ಅಲ್ಲಾಹನೊಂದಿಗೆ ಯಾರನ್ನೂ ಸಹಭಾಗಿಯಾಗಿ ಮಾಡಬೇಡ, ನಿಜವಾಗಿಯೂ ಬಹುದೇವ ವಿಶ್ವಾಸ ಮಹಾ ಅಕ್ರಮವಾಗಿದೆ' ಎಂದರು. ಮಾನವನಿಗೆ ತನ್ನ ಮಾತಾಪಿತರ ಹಕ್ಕನ್ನು ತಿಳಿದುಕೊಳ್ಳಲು ನಾವೇ ತಾಕೀತು ಮಾಡಿರುತ್ತೇವೆ.

ಅವನ ತಾಯಿಯು ನಿತ್ರಾಣದ ಮೇಲೆ ನಿತ್ರಾಣವನ್ನು ಸಹಿಸಿ ಅವನನ್ನು ತನ್ನ ಗರ್ಭದಲ್ಲಿರಿಸಿದಳು ಮತ್ತು ಅವನ ಸ್ತನಪಾನ ಬಿಡುವುದರಲ್ಲಿ ಎರಡು ವರ್ಷಗಳು ತಗಲಿದುವು. (ಆದುದರಿಂದಲೇ ನಾವು ಅವನೊಡನೆ) ನನಗೆ ಕೃತಜ್ಞತೆ ಸಲ್ಲಿಸು ಮತ್ತು ನಿನ್ನ ಮಾತಾಪಿತರಿಗೆ ಕೃತಜ್ಞತೆ ಸಲ್ಲಿಸು. ನೀನು ನನ್ನ ಕಡೆಗೇ ಮರಳಬೇಕಾಗಿದೆ. (ಎಂದು ಉಪದೇಶಿಸಿದೆವು) ಆದರೆ, ಅವರು ನಿನಗೆ ತಿಳಿಯದುದನ್ನು ನನ್ನೊಂದಿಗೆ ಸಹಭಾಗಿಯಾಗಿ ಮಾಡಬೇಕೆಂದು ನಿನ್ನ ಮೇಲೆ ಒತ್ತಡ ಹಾಕಿದರೆ ಅವರ ಮಾತನ್ನು ಎಷ್ಟು ಮಾತ್ರಕ್ಕೂ ಕೇಳಬೇಡ. ಈ ಲೋಕದಲ್ಲಿ ಅವರೊಂದಿಗೆ ಸದ್ವರ್ತನೆ ಮಾಡುತ್ತಿರು. ಆದರೆ, ಯಾರು ನನ್ನ ಕಡೆಗೆ ಒಲಿದಿರುವನೋ ಅವನ ಮಾರ್ಗವನ್ನು ಮಾತ್ರ ಅನುಸರಿಸು. ಮುಂದೆ ನಿಮಗೆಲ್ಲರಿಗೂ ನನ್ನ ಕಡೆಗೇ ಮರಳಲಿಕ್ಕಿದೆ. ಆಗ ನೀವು ಯಾವ ತರದ ಕರ್ಮಗಳನ್ನು ಮಾಡುತ್ತಿದ್ದಿರೆಂದು ನಾನು ನಿಮಗೆ ತೋರಿಸುವೆನು.

(ಲುಕ್ಮಾನರು ಹೀಗೆಂದಿದ್ದರು), 'ಮಗನೇ! ಸಾಸಿವೆ ಕಾಳಿನಷ್ಟಿರುವ ಒಂದು ವಸ್ತುವೇ ಇರಲಿ ಅದು ಒಂದು ಬಂಡೆಯಲ್ಲಿ ಅಥವಾ ಆಕಾಶಗಳಲ್ಲಿ ಅಥವಾ ಭೂಮಿಯೊಳಗೆ ಎಲ್ಲಾದರೂ ಅಡಗಿರಲಿ ಅಲ್ಲಾಹನು ಅದನ್ನು ಹೊರತರುವನು. ಅವನು ಸೂಕ್ಷ್ಮದರ್ಶಿಯೂ ವಿವರಪೂರ್ಣನೂ ಆಗಿರುತ್ತಾನೆ. ಮಗನೇ ನಮಾಝನ್ನು ಸಂಸ್ಥಾಪಿಸು. ಒಳಿತಿನ ಆದೇಶ ಕೊಡು, ಕೆಡುಕಿನಿಂದ ತಡೆ ಮತ್ತು ಯಾವ ಕಷ್ಟವೇ

ುಗಲಿ ಸಹನೆ ವಹಿಸು. ಇವು ಅತೀ ಹೆಚ್ಚು ತಾಕೀತು ಮಾಡಲ್ಪಟ್ಟ ವಿಷಯಗಳು. ಜನರೊಡನೆ ಮುಖ ತಿರುಗಿಸಿ ಮಾತಾಡಬೇಡ. ಭೂಮಿಯ ಮೇಲೆ ದರ್ಪದಿಂದ ನಡೆಯಬೇಡ. ದುರಭಿಮಾನ ಹಾಗೂ ಅಹಂಕಾರ ಪಡುವವನನ್ನು ಅಲ್ಲಾಹನು ಮೆಚ್ಚುವುದಿಲ್ಲ. ನಿನ್ನ ನಡೆಯಲ್ಲಿ ಇತಿಮಿತಿಯನ್ನಿರಿಸು. ನಿನ್ನ ಸ್ವರವನ್ನು ಸ್ವಲ್ಪ ತಗ್ಗಿಸು. ಎಲ್ಲ ಸ್ವರಗಳಿಗಿಂತ ಕೆಟ್ಟ ಸ್ವರವು ಕತ್ತೆಯ ಸ್ವರವಾಗಿರುತ್ತದೆ." (ಲುಕ್ಮಾನ್: 12–19)

"ನೀನು ಅಲ್ಲಾಹನೊಂದಿಗೆ ಬೇರಾರನ್ನೂ ಆರಾಧ್ಯನಾಗಿ ಮಾಡಿಕೊಳ್ಳಬೇಡ, ಅನ್ಯಥಾ ಶಪಿತನಾಗಿ ಅಸಹಾಯಕನಾಗಿ ಕುಳಿತುಕೊಂಡಿರುವೆ.

ನಿಮ್ಮ ಪ್ರಭು(ಹೀಗೆ) ವಿಧಿಸಿಬಿಟ್ಟಿದ್ದಾನೆ: ನೀವು ಕೇವಲ ಅವನೊಬ್ಬನ ಹೊರತು ಇನ್ನಾರ ದಾಸ್ಯ–ಆರಾಧನೆಯನ್ನೂ ಮಾಡಬಾರದು. ಮಾತಾಪಿತರೊಡನೆ ಸೌಜನ್ಯದಿಂದ ವರ್ತಿಸಿರಿ. ಅವರ ಪೈಕಿ ಒಬ್ಬರು ಅಥವಾ ಅವರಿಬ್ಬರೂ ವೃದ್ಧರಾಗಿ ನಿಮ್ಮ ಬಳಿಯಲ್ಲಿದ್ದರೆ, ಅವರ ಬಗ್ಗೆ ಚಕಾರವೆತ್ತಬೇಡಿರಿ ಮತ್ತು ಅವರನ್ನು ಜರೆಯಬೇಡಿರಿ. ಅವರೊಂದಿಗೆ ಗೌರವಪೂರ್ವಕವಾಗಿ ಮಾತನಾಡಿರಿ: ನಯವಿನಯ ಮತ್ತು ಕರುಣೆಯೊಂದಿಗೆ ಅವರ ಮುಂದೆ ಬಾಗಿಕೊಂಡಿರಿ. 'ಓ ನನ್ನ ಪ್ರಭೂ! ಇವರು ನನ್ನ ಚಿಕ್ಕಂದಿನಲ್ಲಿ ದಯಾವಾತ್ಸಲ್ಯಗಳಿಂದ ನನ್ನನ್ನು ಸಾಕಿದಂತೆಯೇ ನೀನು ಅವರ ಮೇಲೆ ಕೃಪೆ ತೋರು' ಎಂದು ಪ್ರಾರ್ಥಿಸಿರಿ. ನಿಮ್ಮ ಅಂತರಂಗದಲ್ಲಿ ಏನಿದೆ ಎಂಬುದನ್ನು ನಿಮ್ಮ ಪ್ರಭು ಚೆನ್ನಾಗಿ ಬಲ್ಲನು. ನೀವು ಸಜ್ಜನರಾಗಿ ಬಾಳಿಕೊಂಡಿದ್ದರೆ ತಮ್ಮ ಅಪರಾಧಗಳ ಬಗ್ಗೆ ಜಾಗೃತರಾಗಿ ದಾಸ್ಯ–ಆರಾಧನೆಯ ಕಡೆಗೆ ಮರಳಿ ಬರುವಂತಹ ಸರ್ವರನ್ನೂ ಅವನು ಕ್ಷಮಿಸುವವ ನಾಗಿರುತ್ತಾನೆ.

ಸಂಬಂಧಿಕನಿಗೆ ಅವನ ಹಕ್ಕನ್ನು, ದರಿದ್ರನಿಗೂ ಪ್ರಯಾಣಿಕನಿಗೂ ಅವನವನ ಹಕ್ಕನ್ನು ಕೊಡಿರಿ. ದುಂದುವೆಚ್ಚ ಮಾಡಬೇಡಿರಿ. ದುಂದುಗಾರರು ಶೈತಾನನ ಸೋದರ ರಾಗಿರುತ್ತಾರೆ ಮತ್ತು ಶೈತಾನನು ತನ್ನ ಪ್ರಭುವಿಗೆ ಕೃತಘ್ನನು. ನೀವು ನಿರೀಕ್ಷಿಸುತ್ತಿರುವ ಅಲ್ಲಾಹನ ಕೃಪೆಯನ್ನು ಇನ್ನೂ ಅರಸುತ್ತಿರುವ ಕಾರಣ ನಿಮಗೆ ಅವರಿಂದ (ನಿರ್ಗತಿಕರಾದ ಸಂಬಂಧಿಕರಿಂದ, ದರಿದ್ರರಿಂದ ಮತ್ತು ಪ್ರಯಾಣಿಕರಿಂದ) ತಪ್ಪಿಸಿ ಕೊಳ್ಳಬೇಕೆಂದಾದರೆ ಅವರಿಗೆ ನಯವಾಗಿ ಉತ್ತರ ಕೊಡಿರಿ. ನಿಮ್ಮ ಕೈಯನ್ನು ಕೊರಳಿಗೆ ಕಟ್ಟಿಕೊಂಡಿರಲೂ ಬೇಡಿರಿ ಮತ್ತು ನಿಂದ್ಯರೂ ನಿಸ್ಸಹಾಯಕರೂ ಆಗಿ ಬಿಡುವಂತೆ ಅದನ್ನು ಸಂಪೂರ್ಣವಾಗಿ ತೆರೆದಿಟ್ಟು ಬಿಡಲೂ ಬೇಡಿರಿ. ನಿನ್ನ ಪ್ರಭು ತನಗಿಷ್ಟ ಬಂದವರಿಗೆ ಜೀವನಾಧಾರವನ್ನು ವಿಶಾಲಗೊಳಿಸುತ್ತಾನೆ ಮತ್ತು ತನಗಿಷ್ಟ ಬಂದವರಿಗೆ ಸಂಕುಚಿತಗೊಳಿಸುತ್ತಾನೆ. ಅವನು ತನ್ನ ದಾಸರ ಸ್ಥಿತಿಗತಿಗಳನ್ನು ಅರಿತವನಾಗಿರುತ್ತಾನೆ ಮತ್ತು ಅವರನ್ನು ವೀಕ್ಷಿಸುತ್ತಿದ್ದಾನೆ. ನಿಮ್ಮ ಮಕ್ಕಳನ್ನು ಬಡತನದ ಭೀತಿಯಿಂದ ಕೊಲ್ಲಬೇಡಿರಿ. ನಾವು ಅವರಿಗೂ ಆಹಾರ ನೀಡುವೆವು ನಿಮಗೂ

ನೀಡುವೆವು. ವಾಸ್ತವದಲ್ಲಿ ಅವರ ವಧೆಯು ಒಂದು ಘೋರ ಅಪರಾಧವಾಗಿದೆ. ವ್ಯಭಿಚಾರದ ಹತ್ತಿರವೂ ಸುಳಿಯಬೇಡಿರಿ ಅದು ಅತೀ ಹೀನಕಾರ್ಯ ಮತ್ತು ಅತ್ಯಂತ ಕೆಟ್ಟ ಮಾರ್ಗ. ಅಲ್ಲಾಹನು ಸನ್ಮಾನಿಸಿರುವ ಜೀವವನ್ನು ನ್ಯಾಯದಿಂದಲ್ಲದೆ ಹರಣ ಮಾಡಬೇಡಿರಿ. ಅಕ್ರಮವಾಗಿ ವಧಿಸಲ್ಪಟ್ಟವನ ವಾರೀಸುದಾರನಿಗೆ ಪ್ರತೀಕಾರ ಪಡೆಯುವ ಹಕ್ಕನ್ನು ನಾವು ನೀಡಿರುತ್ತೇವೆ. ಆದುದ ರಿಂದ ಅವನು ವಧೆಯಲ್ಲಿ ಹದಮೀರಬಾರದು. ನಿಶ್ಚಯವಾಗಿಯೂ ಅವನಿಗೆ ಸಹಾಯ ಮಾಡಲಾಗುವುದು.

ಅನಾಥನ ಸೊತ್ತನ್ನು ಉತ್ತಮ ರೀತಿಯಿಂದಲ್ಲದೆ ಸಮೀಪಿಸಬಾರದು; (ಇದು) ಅವನು ಯೌವನಾವಸ್ಥೆಗೆ ತಲುಪುವ ತನಕ. ವಚನವನ್ನು ಪಾಲಿಸಿರಿ. ನಿಶ್ಚಯವಾಗಿಯೂ ವಚನದ ಕುರಿತು ನಿಮ್ಮನ್ನು ಪ್ರಶ್ನಿಸಲಾಗುವುದು. ಅಳತೆ ಮಾಡಿಕೊಡುವಾಗ ಪೂರ್ಣ ತುಂಬಿಸಿ ಕೊಡಿರಿ. ತೂಗುವಾಗ ಸರಿಯಾದ ತಕ್ಕಡಿಯಲ್ಲಿ ತೂಗಿರಿ. ಇದು ಒಳ್ಳೆಯ ಕ್ರಮ ಮತ್ತು ಪರಿಣಾಮದ ದೃಷ್ಟಿಯಿಂದಲೂ ಇದುವೇ ಉತ್ತಮ. ನಿಮಗೆ ಜ್ಞಾನವಿಲ್ಲದಂತಹ ವಸ್ತುಗಳನ್ನು ಬೆಂಬತ್ತಬೇಡಿರಿ. ನಿಶ್ಚಯವಾಗಿಯೂ ಶ್ರವಣ, ದೃಷ್ಟಿ ಮತ್ತು ಮನಸ್ಸು ಇವೆಲ್ಲವುಗಳ ವಿಚಾರಣೆ ನಡೆಯಲಿದೆ. ಭೂಮಿಯ ಮೇಲೆ ದರ್ಪದಿಂದ ನಡೆಯ ಬೇಡಿರಿ. ನೀವು ಭೂಮಿಯನ್ನು ಸೀಳಲಾರಿರಿ ಮತ್ತು ಪರ್ವತಗಳ ಶಿಖರಕ್ಕೂ ತಲಪಲಾರಿರಿ. ಈ ವಿಷಯದಲ್ಲಿ ಪ್ರತಿಯೊಂದು ದೋಷಭಾಗವು ನಿಮ್ಮ ಪ್ರಭುವಿನ ಬಳಿ ಅಪ್ರಿಯ ವಾಗಿರುತ್ತದೆ. ನಿಮ್ಮ ಪ್ರಭು ನಿಮ್ಮ ಮೇಲೆ ದಿವ್ಯವಾಣಿ ಮಾಡಿದ (ಅವತೀರ್ಣ ಗೊಳಿಸಿದ) ಯುಕ್ತಿಪೂರ್ಣ ಮಾತುಗಳಿವು. ಇದೋ ನೋಡು? ಅಲ್ಲಾಹನೊಂದಿಗೆ ಇನ್ನಾವ ಆರಾಧ್ಯನನ್ನೂ ಮಾಡಿಕೊಳ್ಳ ಬೇಡ, ಅನ್ಯಥಾ ನೀನು ನಿಂದ್ಯನಾಗಿ ಸಕಲ ಒಳಿತುಗಳಿಂದ ವಂಚಿತನಾಗಿ ನರಕದೊಳಗೆ ತಳ್ಳಲ್ಪಡುವೆ." (ಬನೀ ಇಸ್ರಾಯೀಲ್: 22–39)

"ಅಲ್ಲಾಹನು ನ್ಯಾಯ, ಪರೋಪಕಾರ ಹಾಗೂ ಆಪ್ತೇಷ್ಟರ ಬಗ್ಗೆ ಸೌಜನ್ಯದ ಆಜ್ಞೆ ನೀಡುತ್ತಾನೆ ಮತ್ತು ಅಶ್ಲೀಲ ಕಾರ್ಯ, ದುಷ್ಕೃತ್ಯ, ಅಕ್ರಮ, ಅತ್ಯಾಚಾರಗಳನ್ನು ನಿಷೇಧಿಸುತ್ತಾನೆ. ನೀವು ಜಾಗ್ರತರಾಗಲಿಕ್ಕಾಗಿ ಅವನು ನಿಮಗೆ ಉಪದೇಶ ನೀಡುತ್ತಾನೆ. ನೀವು ಅಲ್ಲಾಹನೊಡನೆ ಕರಾರು ಮಾಡಿಕೊಂಡಿದ್ದರೆ ಅದನ್ನು ಪಾಲಿಸಿರಿ. ನೀವು ಅಲ್ಲಾಹನನ್ನು ನಿಮ್ಮ ಮೇಲೆ ಸಾಕ್ಷ್ಯ ನಿಲ್ಲಿಸಿಕೊಂಡು ಮಾಡಿದ ಪ್ರತಿಜ್ಞೆಗಳನ್ನು ಮುರಿಯಬೇಡಿರಿ. ನಿಶ್ಚಯವಾಗಿಯೂ ನಿಮ್ಮ ಸಕಲ ಕರ್ಮಗಳನ್ನೂ ಅಲ್ಲಾಹನು ತಿಳಿದಿರುತ್ತಾನೆ." (ಅನ್ನಹ್ಲ್: 90–91)

## ಅಲ್ಲಾಹನ ಆಜ್ಞಾಪಾಲಕ

"ಆಕಾಶದಲ್ಲಿ ಬುರುಜುಗಳನ್ನು ಮಾಡಿದವನು ಮತ್ತು ಅದರಲ್ಲಿ ಒಂದು ದೀಪ ಮತ್ತು ಹೊಳೆಯುವ ಚಂದ್ರನನ್ನು ಬೆಳಗಿಸಿದವನು ಪರಮ ಮಂಗಳಮಯನು.

ಪಾಠ ಕಲಿಯಲು ಅಥವಾ ಕೃತಜ್ಞನಾಗಲು ಬಯಸುವ ಪ್ರತಿಯೊಬ್ಬನಿಗಾಗಿ ರಾತ್ರೆ-ಹಗಲುಗಳನ್ನು ಪರಸ್ಪರ ಉತ್ತರಾಧಿಕಾರಿಗಳನ್ನಾಗಿ ಮಾಡಿದವನು ಅವನೇ.

ರಹ್ಮಾನನ ನಿಜವಾದ ದಾಸರು ಭೂಮಿಯ ಮೇಲೆ ಸೌಮ್ಯ ನಡಿಗೆ ನಡೆಯುತ್ತಾರೆ. ತಿಳಿಗೇಡಿಗಳು ವ್ಯರ್ಥ ತಕರಾರಿಗೆ ಬಂದಾಗ 'ನಿಮಗೆ ಸಲಾಮ್' ಎಂದು ಬಿಡುತ್ತಾರೆ. ಅವರು ತಮ್ಮ ಪ್ರಭುವಿನ ಮುಂದೆ ಸಾಷ್ಟಾಂಗವೆರಗುತ್ತಲೂ ನಿಲ್ಲುತ್ತಲೂ ರಾತ್ರಿಗಳನ್ನು ಕಳೆಯುತ್ತಾರೆ. ಅವರು 'ನಮ್ಮ ಪ್ರಭೂ ನಮ್ಮನ್ನು ನರಕದ ಯಾತನೆಯಿಂದ ರಕ್ಷಿಸು. ಅದರ ಯಾತನೆಯಂತೂ ಪ್ರಾಣಾಂತಿಕವಾಗಿದೆ. ಅದು ಅತ್ಯಂತ ನಿಕೃಷ್ಟ ನೆಲೆ ಮತ್ತು ಸ್ಥಾನವಾಗಿರುತ್ತದೆ' ಎಂದು ಪ್ರಾರ್ಥಿಸುತ್ತಾರೆ. ಅವರು ಖರ್ಚು ಮಾಡುವಾಗ ದುಂದುವೆಚ್ಚವನ್ನೂ ಮಾಡುವುದಿಲ್ಲ, ಜಿಪುಣತೆಯನ್ನೂ ತೋರುವುದಿಲ್ಲ. ಅವರ ಖರ್ಚು ಇವೆರಡರ ನಡುವೆ ಸಮತೂಕದಲ್ಲಿ ನಿಂತಿರುತ್ತದೆ. ಅವರು ಅಲ್ಲಾಹನ ಹೊರತು ಇತರ ಯಾವ ಆರಾಧ್ಯನನ್ನೂ ಪಾರ್ಥಿಸುವುದಿಲ್ಲ. ಅಲ್ಲಾಹನು ಗೌರವಿಸಿರುವ ಯಾವ ಜೀವವನ್ನೂ ಅನ್ಯಾಯವಾಗಿ ಸಂಹರಿಸುವುದಿಲ್ಲ. ವ್ಯಭಿಚಾರವೆಸಗುವುದೂ ಇಲ್ಲ. ಈ ಕಾರ್ಯಗಳನ್ನು ಯಾರೇ ಮಾಡಿದರೂ ಅವನು ತನ್ನ ಪಾಪಗಳ ಫಲವನ್ನು ಪಡೆಯುವನು. ನಿರ್ಣಾಯಕ ದಿನದಂದು ಅವನಿಗೆ ಇಮ್ಮಡಿ ಯಾತನೆ ನೀಡಲಾಗುವುದು ಮತ್ತು ಅವನು ಅದರಲ್ಲೇ ಸದಾ ಅವಮಾನಿತನಾಗಿ ಬಿದ್ದುಕೊಂಡಿರುವನು. (ಈ ಪಾಪಗಳನ್ನು ಮಾಡಿದ ಬಳಿಕ) ಪಶ್ಚಾತ್ತಾಪಪಟ್ಟು ಸತ್ಯವಿಶ್ವಾಸವನ್ನು ಸ್ವೀಕರಿಸಿ, ಸತ್ಕರ್ಮಗಳನ್ನು ಮಾಡಲಾರಂಭಿಸಿದವರ ಹೊರತು. ಇಂತಹವರ ಕೆಡುಕುಗಳನ್ನು ಅಲ್ಲಾಹನು ಒಳಿತುಗಳಾಗಿ ಪರಿವರ್ತಿಸುವನು. ಅಲ್ಲಾಹನು ಅತ್ಯಂತ ಕ್ಷಮಾಶೀಲನೂ ಕರುಣಾನಿಧಿಯೂ ಆಗಿರುತ್ತಾನೆ. ಪಶ್ಚಾತ್ತಾಪಪಟ್ಟು ಸತ್ಕರ್ಮಗಳನ್ನು ಮಾಡಲಾರಂಭಿಸುವವನಂತು ಅಲ್ಲಾಹನ ಕಡೆಗೆ ಮರಳಬೇಕಾದ ರೀತಿಯಲ್ಲಿ ಮರಳುತ್ತಾನೆ. (ರಹ್ಮಾನನ ದಾಸರು) ಸುಳ್ಳಿಗೆ ಸಾಕ್ಷಿಗಳಾಗುವುದಿಲ್ಲ ಮತ್ತು ಅವರಿಗೆ ವ್ಯರ್ಥ ವಿಷಯಗಳ ಸಮೀಪದಿಂದ ಹಾದು ಹೋಗಬೇಕಾಗಿ ಬಂದಾಗ ಸಂಭಾವಿತರಂತೆ ಹಾದು ಹೋಗುತ್ತಾರೆ. ಅವರ ಪ್ರಭುವಿನ ಸೂಕ್ತಗಳನ್ನು ಹೇಳಿ ಉಪದೇಶ ಮಾಡಿದಾಗ ಅವರು ಅದರ ಬಗ್ಗೆ ಕುರುಡರೂ ಕಿವುಡರೂ ಆಗಿದ್ದು ಬಿಡುವುದಿಲ್ಲ. ಅವರು 'ನಮ್ಮ ಪ್ರಭೂ, ನಮ್ಮ ಪತ್ನಿಯರಿಂದಲೂ ಮಕ್ಕಳಿಂದಲೂ ನಮ್ಮ ಕಣ್ಮನಗಳನ್ನು ತಣಿಸು ಮತ್ತು ನಮ್ಮನ್ನು ಧರ್ಮನಿಷ್ಠರ ನಾಯಕರಾಗಿ ಮಾಡು' ಎಂದು ಪ್ರಾರ್ಥಿಸುತ್ತಾರೆ. ಇವರೇ ತಮ್ಮ ಸಹನೆಯ ಫಲವನ್ನು ಉನ್ನತ ಅಂತಸ್ತಿನ ರೂಪದಲ್ಲಿ ಪಡೆಯಲಿರುವವರು. ಅವರನ್ನು ಗೌರವಪೂರ್ಣ ಅಭಿನಂದನೆಗಳೊಂದಿಗೆ ಸ್ವಾಗತಿಸಲಾಗುವುದು. ಅಲ್ಲಿ ಅವರು ಅನಂತಾನಂತ ಕಾಲ ವಾಸಿಸುವರು. ಆ ನೆಲೆ ಮತ್ತು ಸ್ಥಾನ ಅದೆಷ್ಟು ಉತ್ತಮವಾದುದು!"

**(ಅಲ್ ಫುರ್‌ಕಾನ್: 61–76)**

"ಅವರ ಮೊಕದ್ದಮೆಯ ಬಗ್ಗೆ ತೀರ್ಪು ನೀಡುವಂತಾಗಲು ಅವರನ್ನು ಅಲ್ಲಾಹ್ ಮತ್ತು ರಸೂಲರ ಕಡೆಗೆ ಕರೆಯಲಾದಾಗ, ನಾವು ಆಲಿಸಿದೆವು ಮತ್ತು ಅನುಸರಿಸಿದೆವು ಎಂದು ಹೇಳುವುದೇ ಸತ್ಯವಿಶ್ವಾಸಿಗಳ ಕರ್ತವ್ಯವಾಗಿರುತ್ತದೆ. ಇಂತಹವರೇ ಯಶಸ್ವಿಗಳಾಗುವವರು. ಅಲ್ಲಾಹ್ ಮತ್ತು ರಸೂಲರ ಆಜ್ಞಾಪಾಲನೆ ಮಾಡುವವರು ಅಲ್ಲಾಹನನ್ನು ಭಯಪಡುವವರು ಮತ್ತು ಅವನ ಆಜ್ಞೋಲ್ಲಂಘನೆ ಯಿಂದ ದೂರವಿರುವವರೇ ವಿಜಯಿಗಳು." (ಅನ್ನೂರ್: 51–52)

"ಕ್ರಯ–ವಿಕ್ರಯಗಳು ಅಲ್ಲಾಹನ ಸ್ಮರಣೆಯಿಂದಲೂ ನಮಾಝಿನ ಸಂಸ್ಥಾಪನೆ ಯಿಂದಲೂ ಝಕಾತಿನ ಪಾವತಿಯಿಂದಲೂ ಅಲಕ್ಷ್ಯರಾಗಿ ಮಾಡುವುದಿಲ್ಲ. ಹೃದಯಗಳು ಪಲ್ಲಟಗೊಳ್ಳುವ ಮತ್ತು ದೃಷ್ಟಿಗಳು ಸ್ತಬ್ಧಗೊಳ್ಳುವಂತಹ ಆ ದಿನವನ್ನು ಅವರು ಭಯಪಡುತ್ತಿರುವರು." (ಅನ್ನೂರ್: 37)

"ನಾವು ಇವರಿಗೆ ಭೂಮಿಯಲ್ಲಿ ಅಧಿಕಾರ ಪ್ರಧಾನ ಮಾಡಿದರೆ ಇವರು ನಮಾಝ್ ಸಂಸ್ಥಾಪಿಸುವರು, ಝಕಾತ್ ಕೊಡುವರು, ಒಳಿತಿನ ಆಜ್ಞೆ ಕೊಡುವರು ಮತ್ತು ಕೆಡುಕಿನಿಂದ ತಡೆಯುವರು." (ಅಲ್ ಹಜ್ಜ್: 41)

"ಖಂಡಿತವಾಗಿಯೂ ಸತ್ಯವಿಶ್ವಾಸಿಗಳು ವಿಜಯಿಗಳಾದರು. ಅವರು ತಮ್ಮ ನಮಾಝಿನಲ್ಲಿ ಭಯಭಕ್ತಿ ತೋರುತ್ತಾರೆ. ನಿರರ್ಥಕ ಕಾರ್ಯಗಳಿಂದ ದೂರವಿರುತ್ತಾರೆ. ಝಕಾತಿನ ನಿಯಮವನ್ನು ಪಾಲಿಸುತ್ತಾರೆ. ತಮ್ಮ ಪತ್ನಿಯರು ಹಾಗೂ ತಮ್ಮ ಅಧೀನವಿರುವ ದಾಸಿಯರ ಹೊರತು ಇತರರಿಂದ ತಮ್ಮ ಗುಪ್ತಾಂಗಗಳನ್ನು ರಕ್ಷಿಸಿ ಕೊಳ್ಳುತ್ತಾರೆ." (ಅಲ್ ಮೂಮಿನೂನ್: 1–5)

## ಸತ್ಯಧಿಕ್ಕಾರಿ

"ಅಲ್ಲಾಹನು ಅವತೀರ್ಣಗೊಳಿಸಿದ ಕಾನೂನಿನ ಪ್ರಕಾರ ತೀರ್ಮಾನ ಮಾಡದವರೇ ಸತ್ಯನಿಷೇಧಿಗಳು." (ಅಲ್ ಮಾಇದ: 44)

"ಅಲ್ಲಾಹ್ ಹಾಗೂ ಅವನ ಸಂದೇಶವಾಹಕರನ್ನು ನಿಷೇಧಿಸುವವರೂ ಅಲ್ಲಾಹ್ ಹಾಗೂ ಅವನ ಸಂದೇಶವಾಹಕರ ನಡುವೆ ತಾರತಮ್ಯ ಮಾಡಬೇಕೆಂದು ಬಯಸುವವರೂ ನಾವು ಕೆಲವರನ್ನು ಸ್ವೀಕರಿಸುವೆವು ಇನ್ನು ಕೆಲವರನ್ನು ನಿಷೇಧಿಸುವೆವು ಎನ್ನುತ್ತ ಸತ್ಯನಿಷೇಧ ಮತ್ತು ಸತ್ಯವಿಶ್ವಾಸದ ಮಧ್ಯೆ ಒಂದು ನಡುಮಾರ್ಗವನ್ನು ಸ್ವೀಕರಿಸುವ ಇಚ್ಛೆಯುಳ್ಳವರೂ ನೈಜ ಸತ್ಯನಿಷೇಧಿಗಳಾಗಿದ್ದಾರೆ. ಇಂತಹ ಸತ್ಯನಿಷೇಧಿಗಳಿಗೆ ನಾವು ಅವಮಾನಕಾರಕ ಶಿಕ್ಷೆ ಸಿದ್ಧಪಡಿಸಿಟ್ಟಿರುತ್ತೇವೆ." (ಅನ್ನಿಸಾ: 150–151)

"ಈ ವಿಷಯಗಳನ್ನು ನಿಷೇಧಿಸಿದವರಿಗೆ ನೀವು ಎಚ್ಚರಿಕೆ ಕೊಟ್ಟರೂ ಕೊಡದಿದ್ದರೂ ಸರಿಯೇ. ಅವರಂತು ವಿಶ್ವಾಸವಿಡುವವರಲ್ಲ. ಅಲ್ಲಾಹನು ಅವರ ಹೃದಯಗಳ

ಹಾಗೂ ಕಿವಿಗಳ ಮೇಲೆ ಮುದ್ರೆಯೊತ್ತಿರುತ್ತಾನೆ. ಅವರ ದೃಷ್ಟಿಗಳ ಮೇಲೆ ಪರದೆ ಬಿದ್ದಿದೆ. ಅವರಿಗೆ ಘೋರ ಶಿಕ್ಷೆ ಕಾದಿದೆ." (ಅಲ್ ಬಕರ: 7)

"ಇವರು ಕಿವುಡರೂ ಮೂಕರೂ ಅಂಧರೂ ಆಗಿದ್ದಾರೆ. ಇನ್ನಿವರು ಮರಳುವವರಲ್ಲ." (ಅಲ್ ಬಕರ: 18)

"ನಿಶ್ಚಯವಾಗಿಯೂ ಭೂಮಿಯ ಮೇಲೆ ಚಲಿಸುವ ಸೃಷ್ಟಿಗಳಲ್ಲಿ ಸತ್ಯವನ್ನು ನಿರಾಕರಿಸುವವರೇ ಅಲ್ಲಾಹನ ಬಳಿ ಅತ್ಯಂತ ನಿಕೃಷ್ಟರು. ಅವರು ಎಷ್ಟು ಮಾತ್ರಕ್ಕೂ ವಿಶ್ವಾಸವಿರಿ ಸುವವರಲ್ಲ." (ಅಲ್ ಅನ್‌ಫಾಲ್: 55)

"ಹೇಳಿಬಿಡಿರಿ, ಓ ಸತ್ಯನಿಷೇಧಿಗಳೇ! ನೀವು ಆರಾಧಿಸುವವುಗಳನ್ನು ನಾನು ಆರಾಧಿಸುವುದಿಲ್ಲ ಮತ್ತು ನಾನು ಆರಾಧಿಸುವವನನ್ನು ನೀವು ಆರಾಧಿಸುವವರಲ್ಲ ಮತ್ತು ನೀವು ಆರಾಧಿಸಿದವುಗಳ ಆರಾಧನೆಯನ್ನು ನಾನು ಮಾಡುವವನಲ್ಲ. ನಾನು ಆರಾಧಿಸುವವನನ್ನು ನೀವು ಆರಾಧಿಸುವವರಲ್ಲ. ನಿಮಗೆ ನಿಮ್ಮ ಧರ್ಮ ಮತ್ತು ನನಗೆ ನನ್ನ ಧರ್ಮ." (ಅಲ್ ಕಾಫಿರೂನ್: 1–6)

"ಅಲ್ಲಾಹ್ ಮತ್ತು ಅವನ ಸಂದೇಶವಾಹಕರನ್ನು ವಿರೋಧಿಸುವವರು ತಮಗಿಂತ ಹಿಂದಿನವರು ಅಪಮಾನಿತರಾದಂತೆಯೇ ಅಪಮಾನಿತರಾಗುವರು. ನಾವು ಸುಸ್ಪಷ್ಟ ಸೂಕ್ತಗಳನ್ನು ಅವತೀರ್ಣಗೊಳಿಸಿದ್ದೇವೆ ಮತ್ತು ಸತ್ಯನಿಷೇಧಿಗಳಿಗೆ ಅಪಮಾನಕರ ಯಾತನೆ ಇದೆ. ಅಲ್ಲಾಹನು ಇವರೆಲ್ಲರನ್ನೂ ಪುನಃ ಜೀವಂತಗೊಳಿಸಿ ಎಬ್ಬಿಸುವ ಮತ್ತು ಅವರು ಏನೆಲ್ಲ ಮಾಡಿ ಬಂದಿರುವರೆಂಬುದನ್ನು ಅವರಿಗೆ ತಿಳಿಸುವ ದಿನ (ಈ ಅಪಮಾನಕರ ಯಾತನೆ ಒದಗಲಿದೆ). ಅವರು ಮರೆತುಬಿಟ್ಟಿದ್ದಾರೆ. ಆದರೆ ಅಲ್ಲಾಹನು ಅವರು ಮಾಡಿದುದೆಲ್ಲವನ್ನೂ ಎಣಿಸಿ ಕಾಯ್ದಿರಿಸಿದ್ದಾನೆ. ಅಲ್ಲಾಹನು ಪ್ರತಿಯೊಂದು ವಸ್ತುವಿನ ಬಗೆಗೂ ಸಾಕ್ಷಿಯಾಗಿದ್ದಾನೆ." (ಅಲ್ ಮುಜಾದಲ: 5–6)

## ಕಪಟವಿಶ್ವಾಸಿಗಳು

"ಸತ್ಯವಿಶ್ವಾಸಿಗಳು ಯಾರು ಹಾಗೂ ಕಪಟವಿಶ್ವಾಸಿಗಳು ಯಾರು ಎಂಬುದು ನಿಶ್ಚಯವಾಗಿಯೂ ಅಲ್ಲಾಹನಿಗೆ ಅರಿಯಲೇಬೇಕಾಗಿದೆ." (ಅಲ್ ಅಂಕಬೂತ್: 11)

"ನಾವು ಅಲ್ಲಾಹ್ ಮತ್ತು ಸಂದೇಶವಾಹಕರ ಮೇಲೆ ವಿಶ್ವಾಸವಿರಿಸಿದೆವೆಂದೂ ನಾವು ಅನುಸರಣೆಯನ್ನು ಸ್ವೀಕರಿಸಿದ್ದೇವೆಂದೂ ಅವರು ಹೇಳುತ್ತಾರೆ. ಆದರೆ ಅನಂತರ ಅವರಲ್ಲೊಂದು ವಿಭಾಗವು (ಅನುಸರಣೆಯಿಂದ) ವಿಮುಖವಾಗಿ ಬಿಡುತ್ತದೆ. ಇಂತಹವರು ಖಂಡಿತ ಸತ್ಯವಿಶ್ವಾಸಿಗಳಲ್ಲ. ಅವರ ನಡುವಿನ ವ್ಯಾಜ್ಯಗಳನ್ನು ಇತ್ಯರ್ಥಪಡಿಸಲಿಕ್ಕಾಗಿ ಅವರನ್ನು ಅಲ್ಲಾಹ್ ಮತ್ತು ಅವನ ಸಂದೇಶವಾಹಕರ ಕಡೆಗೆ ಕರೆಯಲಾದಾಗ ಅವರಲ್ಲೊಂದು ವಿಭಾಗವು ಹಿಂಜರಿಯುತ್ತದೆ. ಆದರೆ ಸತ್ಯವು

ಅವರ ಪರವಾಗಿದ್ದರೆ ಅತ್ಯಂತ ವಿಧೇಯರಾಗಿ ರಸೂಲರ ಬಳಿಗೆ ಬಂದು ಬಿಡುತ್ತಾರೆ. ಇವರ ಹೃದಯಗಳಿಗೆ (ಕಪಟವಿಶ್ವಾಸದ) ರೋಗ ತಗಲಿದೆಯೇ? ಅಥವಾ ಇವರು ಸಂಶಯಗ್ರಸ್ತರಾಗಿರುವರೇ? ಅಥವಾ ಅವರಿಗೆ ಅಲ್ಲಾಹ್ ಮತ್ತು ರಸೂಲರು ಅವರ ಮೇಲೆ ಅನ್ಯಾಯ ಮಾಡುವರೆಂಬ ಭಯವಿದೆಯೇ? ವಾಸ್ತವದಲ್ಲಿ ಅಕ್ರಮಿಗಳಂತೂ ಅವರೇ ಆಗಿರುತ್ತಾರೆ." (ಅನ್ನೂರ್: 47–50)

"ನಾವು ವಿಶ್ವಾಸವಿರಿಸಿದೆವು ಎಂದ ಮಾತ್ರಕ್ಕೆ ಅವರನ್ನು ಬಿಟ್ಟುಬಿಡಲಾಗುವುದೆಂದೂ ಅವರನ್ನು ಪರೀಕ್ಷೆಗೊಳಪಡಿಸಲಾಗದೆಂದೂ ಜನರು ತಿಳಿದುಕೊಂಡಿರುವರೇ? ವಸ್ತುತಃ ನಾವು ಇವರಿಗಿಂತ ಮುಂಚೆ ಗತಿಸಿ ಹೋದವರನ್ನು ಪರೀಕ್ಷೆಗೊಳಪಡಿಸಿದ್ದೆವು. ಯಾರು ಸತ್ಯವಾದಿಗಳು ಮತ್ತು ಯಾರು ಸುಳ್ಳುಗಾರರೆಂದು ಅಲ್ಲಾಹನು ನಿಶ್ಚಯವಾಗಿಯೂ ನೋಡಬೇಕಾಗಿದೆ." (ಅಲ್ ಅಂಕಬೂತ್: 2–3)

"ಅಂದು ನೀವು ಸತ್ಯವಿಶ್ವಾಸಿಗಳನ್ನೂ ಸತ್ಯವಿಶ್ವಾಸಿನಿಯರನ್ನೂ ನೋಡುವಾಗ ಅವರ ಪ್ರಕಾಶವು ಅವರ ಮುಂದೆಯೂ ಅವರ ಬಲಭಾಗಗಳಲ್ಲೂ ಸಾಗುತ್ತಿರುವುದು. (ಆಗ ಅವರೊಡನೆ) 'ಇಂದು ನಿಮಗೆ ಶುಭವಾರ್ತೆ ಇದೆ' (ಎನ್ನಲಾಗುವುದು). ತಳಭಾಗದಲ್ಲಿ ಕಾಲುವೆಗಳು ಹರಿಯುತ್ತಿರುವ ಸ್ವರ್ಗೋದ್ಯಾನಗಳಿದ್ದು, ಅವುಗಳಲ್ಲಿ ಅವರು ಸದಾಕಾಲ ವಾಸಿಸುವರು. ಇದೇ ಮಹಾ ಯಶಸ್ಸು. ಅಂದು ಕಪಟವಿಶ್ವಾಸಿಗಳಾದ ಪುರುಷರು ಮತ್ತು ಸ್ತ್ರೀಯರು ಸತ್ಯವಿಶ್ವಾಸಿಗಳೊಡನೆ, 'ನಿಮ್ಮ ಪ್ರಕಾಶದಿಂದ ನಾವು ಒಂದಿಷ್ಟು ಪ್ರಯೋಜನ ಪಡೆಯುವಂತಾಗಲು ನೀವು ಸ್ವಲ್ಪ ನಮ್ಮ ಕಡೆಗೆ ನೋಡಿರಿ' ಎನ್ನುವರು. ಆದರೆ ಅವರೊಡನೆ, 'ಹಿಂದಕ್ಕೆ ಸರಿಯಿರಿ. ನಿಮ್ಮ ಪ್ರಕಾಶವನ್ನು ಬೇರೆ ಎಲ್ಲಾದರೂ ಹುಡುಕಿಕೊಳ್ಳಿರಿ' ಎನ್ನಲಾಗುವುದು. ತರುವಾಯ ಅವರ ನಡುವೆ ಒಂದು ಅಡ್ಡಗೋಡೆಯನ್ನು ನಿರ್ಮಿಸಲಾಗುವುದು. ಅದರಲ್ಲಿ ಒಂದು ಬಾಗಿಲಿರುವುದು. ಆ ಬಾಗಿಲಿನ ಒಳಗೆ ಕರುಣೆಯೂ ಹೊರಗೆ ಯಾತನೆಯೂ ಇರುವುದು. ಅವರು ಸತ್ಯವಿಶ್ವಾಸಿಗಳನ್ನು ಕೂಗಿ ಕರೆಯುತ್ತ, 'ನಾವು ನಿಮ್ಮ ಜೊತೆಗಿರಲಿಲ್ಲವೇ?' ಎಂದು ಕೇಳುವರು. ಆಗ ಸತ್ಯವಿಶ್ವಾಸಿಗಳು, 'ಹೌದು! ಆದರೆ ಸ್ವತಃ ನೀವೇ ನಿಮ್ಮನ್ನು ವಂಚನೆಗೆ ಸಿಲುಕಿಸಿಕೊಂಡಿರಿ. ಸಂದರ್ಭ ಸಾಧಕತನವನ್ನು ತೋರಿದಿರಿ, ಸಂಶಯಗ್ರಸ್ತರಾದಿರಿ ಮತ್ತು ಹುಸಿ ನಿರೀಕ್ಷೆಗಳು ನಿಮ್ಮನ್ನು ಮೋಸಗೊಳಿಸುತ್ತಿದ್ದುವು. ಕೊನೆಗೆ ಅಲ್ಲಾಹನ ತೀರ್ಪು ಬಂದೇ ಬಿಟ್ಟಿತು ಮತ್ತು ಆ ಮಹಾ ವಂಚಕನು (ಶೈತಾನನು) ಕೊನೆಯ ವರೆಗೂ ಅಲ್ಲಾಹನ ವಿಷಯದಲ್ಲಿ ನಿಮ್ಮನ್ನು ವಂಚಿಸುತ್ತಲೇ ಇದ್ದನು. ಆದುದರಿಂದ ಇಂದು ನಿಮ್ಮಿಂದಾಗಲಿ, ಸತ್ಯವನ್ನು ಬಹಿರಂಗವಾಗಿ ನಿಷೇಧಿಸಿದ್ದವರಿಂದಾಗಲಿ ಯಾವ ಪರಿಹಾರವನ್ನೂ ಸ್ವೀಕರಿಸಲಾಗದು. ನರಕವು ನಿಮ್ಮ ನಿವಾಸವಾಗಿದೆ. ಅದೇ ನಿಮ್ಮ ಮೇಲ್ವಿಚಾರಕ ಮತ್ತು ಇದು ಅತ್ಯಂತ ಕೆಟ್ಟ ಗತಿಯಾಗಿದೆ' (ಎನ್ನುವರು)."

(ಅಲ್ ಹದೀದ್: 12–15)

"ಕಪಟವಿಶ್ವಾಸಿ ಪುರುಷರೂ ಕಪಟವಿಶ್ವಾಸಿ ಸ್ತ್ರೀಯರೂ ಪರಸ್ಪರ ಅನ್ಯೋನರು. ಅವರು ಕೆಡುಕಿನ ಆಜ್ಞೆ ಕೊಡುತ್ತಾರೆ. ಒಳಿತುಗಳಿಂದ ತಡೆಯುತ್ತಾರೆ ಮತ್ತು ತಮ್ಮ ಕೈಗಳನ್ನು ಸತ್ಕಾರ್ಯಗಳಿಂದ ತಡೆದಿಡುತ್ತಾರೆ. ಅವರು ಅಲ್ಲಾಹನನ್ನು ಮರೆತು ಬಿಟ್ಟರು. ಆಗ ಅಲ್ಲಾಹನೂ ಅವರನ್ನು ಮರೆತುಬಿಟ್ಟನು. ನಿಶ್ಚಯವಾಗಿಯೂ ಈ ಕಪಟವಿಶ್ವಾಸಿಗಳೇ ಕರ್ಮಭ್ರಷ್ಟರು. ಅಲ್ಲಾಹನು ಕಪಟವಿಶ್ವಾಸಿ ಪುರುಷರಿಗೂ ಕಪಟವಿಶ್ವಾಸಿ ಸ್ತ್ರೀಯರಿಗೂ ಸತ್ಯನಿಷೇಧಿಗಳಿಗೂ ನರಕಾಗ್ನಿಯ ವಾಗ್ದಾನ ಮಾಡಿರುತ್ತಾನೆ. ಅವರು ಅದರಲ್ಲಿ ಸದಾಕಾಲ ವಾಸಿಸುವರು. ಅದೇ ಅವರಿಗೆ ಯೋಗ್ಯವಾಗಿದೆ. ಅವರ ಮೇಲೆ ಅಲ್ಲಾಹನ ಅಭಿಶಾಪವಿದೆ ಮತ್ತು ಅವರಿಗೆ ಶಾಶ್ವತ ಶಿಕ್ಷೆಯಿದೆ." (ಅತ್ತೌಬ: 67–68)

"ಓ ಪೈಗಂಬರರೇ ಸತ್ಯನಿಷೇಧಿಗಳ ಹಾಗೂ ಕಪಟ ವಿಶ್ವಾಸಿಗಳ ವಿರುದ್ಧ ಉಗ್ರ ಹೋರಾಟ ನಡೆಸಿರಿ ಮತ್ತು ಅವರೊಡನೆ ಕಟುವಾಗಿ ವರ್ತಿಸಿರಿ. ಕೊನೆಗೆ ಅವರ ವಾಸಸ್ಥಾನವು ನರಕವಾಗಿದೆ ಮತ್ತು ಅದು ಅತ್ಯಂತ ಕೆಟ್ಟ ನಿವಾಸ" (ಅತ್ತೌಬ: 73)

## ಬಹುದೇವ ವಿಶ್ವಾಸಿಗಳು*

"ಅಲ್ಲಾಹ್ ನನ್ನ ಪ್ರಭುವೂ ಆಗಿರುತ್ತಾನೆ ನಿಮ್ಮ ಪ್ರಭುವೂ ಆಗಿರುತ್ತಾನೆ. ಆದುದರಿಂದ ನೀವು ಅವನ ದಾಸ್ಯ–ಆರಾಧನೆಯನ್ನೇ ಮಾಡಿರಿ. ಇದುವೇ ನೇರ ಮಾರ್ಗವಾಗಿದೆ." (ಆಲಿ ಇಮ್ರಾನ್: 51)

"ಇಬ್ಬರು ಆರಾಧ್ಯರನ್ನು ಮಾಡಿಕೊಳ್ಳಬೇಡಿರಿ. ಆರಾಧ್ಯನಂತು ಒಬ್ಬನೇ. ಆದುದರಿಂದ ನನ್ನನ್ನು ಮಾತ್ರ ಭಯಪಡಿರಿ ಎಂದು ಅಲ್ಲಾಹನು ಆಜ್ಞಾಪಿಸುತ್ತಾನೆ. ಆಕಾಶಗಳಲ್ಲೂ ಭೂಮಿಯಲ್ಲೂ ಇರುವ ಸಕಲವೂ ಅವನದೇ. ಅವನ ಧರ್ಮವೇ (ಇಡೀ ವಿಶ್ವದಲ್ಲಿ) ಸಂಪೂರ್ಣವಾಗಿ ಜಾರಿಯಲ್ಲಿವೆ. ಹೀಗಿರುತ್ತ ನೀವು ಅಲ್ಲಾಹನನ್ನು ಬಿಟ್ಟು ಇನ್ನಾರನ್ನಾದರೂ ಭಯಪಡುವಿರಾ?" (ಅನ್ನಹ್ಲ್: 51–52)

"ಅಲ್ಲಾಹನು ತನಗೆ ಗ್ರಂಥವನ್ನೂ ನಿರ್ದೇಶವನ್ನೂ ಪ್ರವಾದಿತ್ವವನ್ನೂ ದಯಪಾಲಿಸಿ ರುವಾಗ ಅವನು ಜನರೊಡನೆ, ನೀವು ಅಲ್ಲಾಹನ ಬದಲಿಗೆ ನನ್ನ ದಾಸರಾಗಿರಿ ಎನ್ನುವುದು ಯಾವನೇ ಮಾನವನ ಕೆಲಸವಲ್ಲ. ಅವನಂತು ನೀವು ಓದುತ್ತಿರುವ ಮತ್ತು ಓದಿಸುತ್ತಿರುವ ಗ್ರಂಥದ ಬೋಧನೆಯ ಬೇಡಿಕೆಯ ಪ್ರಕಾರ ಅಪ್ಪಟ ದೇವಭಕ್ತ ಆಗಿರೆಂದೇ ಹೇಳುವನು." (ಆಲಿ ಇಮ್ರಾನ್: 79)

"ಕೆಲವರು ಅಲ್ಲಾಹನ ಹೊರತು ಇತರರನ್ನು ಅವನ ಸರಿಸಾಟಿ ಮತ್ತು

* ಅಲ್ಲಾಹನ ಜತೆ ಇತರ ಯಾರದಾದರೂ ಆರಾಧನೆ ಮಾಡುವವರು ಅಥವಾ ಅಲ್ಲಾಹನನ್ನು ಬಿಟ್ಟು ಇತರ ಆರಾಧನೆ ಮಾಡುವವರನ್ನು 'ಮುಶ್ರಿಕ್' ಅಂದರೆ ಬಹುದೇವ ವಿಶ್ವಾಸಿ ಎನ್ನಲಾಗುತ್ತದೆ.

ಎದುರಾಳಿಯನ್ನಾಗಿ ಮಾಡುತ್ತಾರೆ ಮತ್ತು ಅಲ್ಲಾಹನಿಗೆ ಮಾರು ಹೋಗಬೇಕಾದ ರೀತಿಯಲ್ಲಿ ಅವರಿಗೆ ಮಾರು ಹೋಗುತ್ತಾರೆ. ವಸ್ತುತಃ ಸತ್ಯವಿಶ್ವಾಸಿಗಳು ಅತ್ಯಧಿಕವಾಗಿ ಅಲ್ಲಾಹನನ್ನೇ ಪ್ರೀತಿಸುತ್ತಾರೆ." (ಅಲ್ ಬಕರ: 165)

"ಅಲ್ಲಾಹನು ತನ್ನೊಂದಿಗೆ ಇತರರನ್ನು ಸಹಭಾಗಿಗಳನ್ನಾಗಿ ಮಾಡುವುದನ್ನು ಮಾತ್ರ ಎಂದೆಂದಿಗೂ ಕ್ಷಮಿಸುವುದಿಲ್ಲ. ಅದರ ಹೊರತು ಅವನು ಕ್ಷಮಿಸಲಿಚ್ಛಿಸುವ ಇತರ ಎಲ್ಲವನ್ನೂ ಕ್ಷಮಿಸುವನು. ಅಲ್ಲಾಹನೊಂದಿಗೆ ಇತರ ಯಾರನ್ನಾದರೂ ಸಹಭಾಗಿಯನ್ನಾಗಿ ಮಾಡಿದವನು ಅತಿದೊಡ್ಡ ಸುಳ್ಳನ್ನು ಸೃಷ್ಟಿಸಿದನು ಮತ್ತು ಅತ್ಯಂತ ಘೋರ ಪಾಪವೆಸಗಿದನು." (ಅನ್ನಿಸಾ: 48)

"ಅಲ್ಲಿ ಈ ಸತ್ಯನಿಷೇಧಿಗಳು, 'ಪ್ರಭೂ, ನಮ್ಮನ್ನು ಪಥಭ್ರಷ್ಟಗೊಳಿಸಿದ್ದ ಜಿನ್ನ್ ಮತ್ತು ಮಾನವರನ್ನು ನಮಗೊಮ್ಮೆ ತೋರಿಸಿಬಿಡು. ಅವರು ಚೆನ್ನಾಗಿ ಅಪಮಾನಿತ ರಾಗುವಂತೆ ನಾವು ಅವರನ್ನು ತುಳಿದು ಬಿಡುವೆವು' ಎಂದು ಹೇಳುವರು."

(ಫುಸ್ಸಿಲತ್: 29)

"ಮತ್ತೂ ಮುಂದುವರಿದು, ನಮ್ಮ ಪ್ರಭೂ ನಾವು ನಮ್ಮ ಸರದಾರರನ್ನು ಹಾಗೂ ಹಿರಿಯರನ್ನು ಅನುಸರಿಸಿದೆವು. ಅವರು ನಮ್ಮನ್ನು ದಾರಿಗೆಡಿಸಿಬಿಟ್ಟರು. ನಮ್ಮ ಪ್ರಭೂ! ಅವರಿಗೆ ಇಮ್ಮಡಿ ಯಾತನೆ ಕೊಡು ಮತ್ತು ಅವರನ್ನು ಅತ್ಯುಗ್ರವಾಗಿ ಶಪಿಸು ಎಂದೂ ಹೇಳುವರು." (ಅಲ್ ಅಹ್‌ಝಾಬ್: 67–68)

"ಸತ್ಯನಿಷೇಧವನ್ನು ಸ್ವೀಕರಿಸಿಕೊಂಡವರು ನನ್ನನ್ನು ಬಿಟ್ಟು ನನ್ನ ದಾಸರನ್ನು ತಮ್ಮ ರಕ್ಷಕ ಮಿತ್ರರನ್ನಾಗಿಸಿಕೊಳ್ಳಬೇಕೆಂದು ಎಣಿಸಿರುವರೇ? ನಾವು ಇಂತಹ ಸತ್ಯ ನಿಷೇಧಿಗಳ ಸತ್ಕಾರಕ್ಕಾಗಿ ನರಕವನ್ನು ಸಿದ್ಧಗೊಳಿಸಿಟ್ಟಿರುತ್ತೇವೆ." (ಅಲ್ ಕಹ್ಫ್: 102)

"ಏಕನಿಷ್ಠರಾಗಿ ಅಲ್ಲಾಹನ ದಾಸರಾಗಿರಿ. ಅವನೊಂದಿಗೆ ಯಾರನ್ನೂ ಭಾಗೀ ದಾರನಾಗಿ ಮಾಡಬೇಡಿರಿ. ಅಲ್ಲಾಹನೊಂದಿಗೆ ಸಹಭಾಗಿತ್ವ ಎಸಗುವವನು ಆಕಾಶ ದಿಂದ ಕೆಳಗೆ ಬಿದ್ದಂತೆ. ಆಗ ಅವನನ್ನು ಒಂದೋ ಪಕ್ಷಿಗಳು ಕಿತ್ತುಕೊಂಡು ಹೋಗುವುವು ಅಥವಾ ಗಾಳಿಯು ಅವನನ್ನು ಒಯ್ದು, ಅವನು ನುಚ್ಚುನೂರಾಗಿ ಬಿಡುವಂತಹ ಸ್ಥಳಕ್ಕೆ ಅಪ್ಪಳಿಸಿ ಬಿಡುವುದು." (ಅಲ್ ಹಜ್ಜ್: 31)

"ಅವನನ್ನು ಬಿಟ್ಟು ನೀವು ಯಾರ ದಾಸ್ಯ–ಆರಾಧನೆ ಮಾಡುತ್ತಿರುವಿರೋ ಅವರೆಲ್ಲಾ ನೀವೂ ನಿಮ್ಮ ಪೂರ್ವಿಕರೂ ಇರಿಸಿಕೊಂಡಿರುವ ಕೆಲವು ಹೆಸರುಗಳ ವಿನಾ ಇನ್ನೇನೂ ಅಲ್ಲ." (ಯೂಸುಫ್: 40)

"ಅಲ್ಲಾಹನನ್ನು ಬಿಟ್ಟು ಬೇರೆ ರಕ್ಷಕ ಮಿತ್ರರನ್ನು ಮಾಡಿಕೊಂಡವರ ಉದಾಹರಣೆಯು ಜೇಡರ ಹುಳುವಿನಂತಿದೆ. ಅದು ತನಗೊಂದು ಮನೆ ಕಟ್ಟುತ್ತದೆ.

ಎಲ್ಲ ಮನೆಗಿಂತಲೂ ದುರ್ಬಲವಾದ ಮನೆಯು ಜೇಡರ ಹುಳುವಿನ ಮನೆಯೇ ಆಗಿರುತ್ತದೆ. ಇವರು ಅರಿತಿರುತ್ತಿದ್ದರೆ? ಇವರು ಅಲ್ಲಾಹನನ್ನು ಬಿಟ್ಟು ಯಾವ ವಸ್ತುವನ್ನೇ ಪ್ರಾರ್ಥಿಸಿದರೂ ಅಲ್ಲಾಹನು ಅದನ್ನು ಚೆನ್ನಾಗಿ ತಿಳಿದಿರುತ್ತಾನೆ. ಅವನೇ ಪ್ರಬಲನೂ ಯುಕ್ತಿಪೂರ್ಣನೂ ಆಗಿರುತ್ತಾನೆ." (ಅಲ್ ಅಂಕಬೂತ್: 41–42)

"ನಿಸ್ಸಂದೇಹವಾಗಿಯೂ ಅಲ್ಲಾಹನೇ ನಮ್ಮ ಪ್ರಭು ಎಂದು ಹೇಳಿ ಅದರಲ್ಲೇ ಸ್ಥಿರಗೊಂಡವರಿಗೆ ಯಾವ ಭಯವೂ ಇಲ್ಲ. ಅವರು ದುಃಖಿತಪ್ತರೂ ಆಗಲಿಕ್ಕಿಲ್ಲ. ಇಂತಹವರು ಸ್ವರ್ಗಕ್ಕೆ ಹೋಗುವವರಾಗಿದ್ದಾರೆ. ಅವರು ಇಹಲೋಕದಲ್ಲಿ ಮಾಡುತ್ತಿದ್ದ ಸತ್ಕರ್ಮಗಳ ಪ್ರತಿಫಲವಾಗಿ ಅಲ್ಲಿ ಸದಾಕಾಲ ಇರುವರು."

(ಅಲ್ ಅಹ್‌ಕಾಫ್: 13–14)

"ಇನ್ನು ಅವನ ಹೊರತು ಇತರರನ್ನು ರಕ್ಷಕ ಮಿತ್ರರಾಗಿ ಮಾಡಿಕೊಂಡವರ ವಿಷಯ; 'ಅವರು ನಮ್ಮನ್ನು ಅಲ್ಲಾಹನಿಗೆ ನಿಕಟಗೊಳಿಸಲಿಕ್ಕಾಗಿ ಮಾತ್ರ ನಾವು ಅವರ ಆರಾಧನೆ ಮಾಡುತ್ತೇವೆ' (ಎಂದು ಅವರು ವಾದಿಸುತ್ತಾರೆ). ಖಂಡಿತವಾಗಿಯೂ ಅಲ್ಲಾಹನು ಅವರು ಭಿನ್ನತೆ ತೋರಿದ ಎಲ್ಲ ವಿಷಯಗಳ ತೀರ್ಮಾನ ಮಾಡಿ ಬಿಡುವನು. ಸುಳ್ಳುಗಾರನೂ ಸತ್ಯನಿಷೇಧಿಯೂ ಆಗಿರುವಂಥವನಿಗೆ ಅಲ್ಲಾಹನು ಸನ್ಮಾರ್ಗದರ್ಶನವೀಯುವುದಿಲ್ಲ." (ಅಝ್ಝುಮರ್: 3)

## ಅಲ್ಲಾಹನತ್ತ ಧಾವಿಸಿರಿ

"ಆದುದರಿಂದ ನೀವು ಅಲ್ಲಾಹನ ಕಡೆಗೆ ಧಾವಿಸಿರಿ." (ಅದ್ದಾರಿಯಾತ್: 50)

"ಇನ್ನು ಯಾರು ಅಲ್ಲಾಹನ ಮಾತನ್ನು ಕೇಳಿ ನಡೆಯುವರೋ ಮತ್ತು ಅವನ ಅಭಯವನ್ನರಸುವರೋ ಅವರನ್ನು ಅಲ್ಲಾಹ್ ತನ್ನ ಕೃಪೆ ಹಾಗೂ ತನ್ನ ಅನುಗ್ರಹ ಗಳ ಆಶ್ರಯದಲ್ಲಿ ತೆಗೆದುಕೊಳ್ಳುವನು ಮತ್ತು ತನ್ನ ಕಡೆಗೆ ಬರುವ ನೇರಮಾರ್ಗ ವನ್ನು ತೋರಿಸಿ ಕೊಡುವನು." (ಅನ್ನಿಸಾ: 175)

"ಆ ಬಳಿಕ ಅವರ ಮಾತನ್ನು ನಂಬಿ, ತಮ್ಮ ಕರ್ಮ ವಿಧಾನವನ್ನು ಸರಿಪಡಿಸಿ ಕೊಂಡವರಿಗೆ ಯಾವುದೇ ಭಯ ಮತ್ತು ವ್ಯಥೆಯ ಸಂಭವವೂ ಇರುವುದಿಲ್ಲ."

(ಅಲ್ ಅನ್‌ಆಮ್: 48)

"ಅಂದು ಸೊತ್ತಾಗಲಿ, ಸಂತತಿಗಳಾಗಲಿ ಸ್ವಲ್ಪವೂ ಫಲಕಾರಿಯಾಗಲಾರವು. ನಿಷ್ಕಳಂಕ ಹೃದಯದೊಂದಿಗೆ ಅಲ್ಲಾಹನ ಸನ್ನಿಧಿಯಲ್ಲಿ ಹಾಜರಾಗುವವನ ಹೊರತು."

(ಅಶ್ಶುಅರಾ: 88–89)

"ಅವನು ಕಣ್ಣಾರೆ ಕಾಣದೆಯೇ ರಹ್ಮಾನನಿಗೆ ಭಯಪಡುತ್ತಿದ್ದನು, ಒಲಿದ ಹೃದಯದೊಂದಿಗೆ ಬಂದಿರುವನು. ಶಾಂತಿಯೊಂದಿಗೆ ಸ್ವರ್ಗವನ್ನು ಪ್ರವೇಶಿಸಿರಿ.

ಅದು ಶಾಶ್ವತ ಜೀವನದ ದಿನವಾಗಿರುವುದು. ಅಲ್ಲಿ ಅವರಿಗಾಗಿ ಅವರು ಬಯಸಿದ್ದೆಲ್ಲವೂ ಇರುವುದು ಮತ್ತು ಅವರಿಗಾಗಿ ಅದಕ್ಕಿಂತಲೂ ಬಹಳಷ್ಟು ಹೆಚ್ಚು ನಮ್ಮಲ್ಲಿದೆ." (ಕಾಫ್: 33–35)

"ಸೌಜನ್ಯ ನೀತಿಯನ್ನು ಸ್ವೀಕರಿಸಿಕೊಳ್ಳಿರಿ. ಏಕೆಂದರೆ, ಅಲ್ಲಾಹನು ಸಜ್ಜನರನ್ನು ಪ್ರೀತಿಸುತ್ತಾನೆ." (ಅಲ್ ಬಕರ: 195)

"ಯಾರೇ ಆಗಿರಲಿ, ತನ್ನ ವಾಗ್ದಾನವನ್ನು ಪೂರೈಸಿದವನು ಮತ್ತು ದೋಷದಿಂದ ದೂರವಿರುವವನು ಅಲ್ಲಾಹನ ಪ್ರೀತಿಗೆ ಪಾತ್ರನಾಗುವನು. ಏಕೆಂದರೆ, ಧರ್ಮನಿಷ್ಠರು ಅಲ್ಲಾಹನಿಗೆ ಪ್ರಿಯರು." (ಆಲಿ ಇಮ್ರಾನ್: 76)

"ತಮ್ಮ ಪ್ರಭುವಿನ ಕರೆಗೆ ಓಗೊಟ್ಟವರಿಗೆ ಉತ್ತಮ ಪ್ರತಿಫಲವಿದೆ." (ಅರ್ರಅ್‌ದ್: 18)

"ಆದುದರಿಂದ ನೀವು ಧರ್ಮವನ್ನು ಅಲ್ಲಾಹನಿಗಾಗಿಯೇ ಮೀಸಲಿರಿಸುತ್ತ ಅವನ ದಾಸ್ಯವನ್ನೇ ಮಾಡಿರಿ. ಎಚ್ಚರಿಕೆ ಧರ್ಮವು ನಿಷ್ಕಳಂಕವಾಗಿ ಕೇವಲ ಅಲ್ಲಾಹನ ಹಕ್ಕಾಗಿದೆ." (ಅಝ್ಝುಮರ್: 2–3)

"ಧಾವಿಸಿರಿ ಮತ್ತು ನಿಮ್ಮ ಪ್ರಭುವಿನ ಕ್ಷಮೆ ಹಾಗೂ ಭೂಮಿ–ಆಕಾಶಗಳಷ್ಟು ವಿಶಾಲವಾಗಿರುವ ಸ್ವರ್ಗದ ಕಡೆಗೆ ಧಾವಿಸುವಲ್ಲಿ ಪರಸ್ಪರ ಸ್ಪರ್ಧಿಸಿರಿ. ಅದನ್ನು ಅಲ್ಲಾಹ್ ಮತ್ತು ಅವನ ಸಂದೇಶವಾಹಕರ ಮೇಲೆ ವಿಶ್ವಾಸವಿರಿಸಿದವರಿಗಾಗಿ ಸಿದ್ಧಗೊಳಿಸಲಾಗಿದೆ. ಇದು ಅಲ್ಲಾಹನ ಅನುಗ್ರಹ. ಅವನಿದನ್ನು ತಾನಿಚ್ಛಿಸಿದವರಿಗೆ ನೀಡುತ್ತಾನೆ ಮತ್ತು ಅಲ್ಲಾಹನು ಮಹಾ ಅನುಗ್ರಹಶಾಲಿಯಾಗಿದ್ದಾನೆ." (ಅಲ್ ಹದೀದ್: 21)

## ಅಲ್ಲಾಹನು ಸರ್ವಶಕ್ತನು ಮತ್ತು ಪರಮಾಧಿಕಾರವುಳ್ಳವನು

"ಅವನೇ ಏಕೈಕ ಅಲ್ಲಾಹ್, ಅವನ ಹೊರತು ಬೇರಾರೂ ಉಪಾಸನೆಗೆ ಅರ್ಹರಿಲ್ಲ. ಈ ಲೋಕದಲ್ಲೂ ಪರಲೋಕದಲ್ಲೂ ಸಕಲ ಸ್ತುತಿಸ್ತೋತ್ರಗಳು ಅವನಿಗೇ ಮೀಸಲು. ಪರಮಾಧಿಕಾರ ಅವನದು. ನೀವೆಲ್ಲರೂ ಅವನ ಕಡೆಗೇ ಮರಳಿಸಲ್ಪಡುವಿರಿ." (ಅಲ್ ಕಸಸ್: 70)

"ಅವನು ಭೂಮಿ–ಆಕಾಶಗಳ ಹಾಗೂ ಅವುಗಳ ನಡುವೆ ಇರುವ ಸಕಲ ವಸ್ತುಗಳ ಒಡೆಯನೂ ಪ್ರಬಲನೂ ಅತ್ಯಂತ ಕ್ಷಮಾಶೀಲನೂ ಆಗಿರುತ್ತಾನೆ." (ಸ್ವಾದ್: 66)

"ಅಲ್ಲಾಹನು ಮಹೋನ್ನತನು. ಯಥಾರ್ಥ ಸಾಮ್ರಾಟನು." (ತಾಹಾ: 114)

"ಅವನು ಪ್ರಬಲನೂ ಸರ್ವಜ್ಞನೂ ಪಾಪಗಳನ್ನು ಕ್ಷಮಿಸುವವನೂ ಪಶ್ಚಾತ್ತಾಪ

ಸ್ವೀಕರಿಸುವವನೂ ಕಠಿಣ ಶಿಕ್ಷೆ ಕೊಡುವವನೂ ಮಹಾ ಅನುಗ್ರಹಿಯೂ ಆಗಿರುತ್ತಾನೆ. ಅವನ ಹೊರತು ಬೇರೆ ಆರಾಧ್ಯರಿಲ್ಲ. ಸರ್ವರಿಗೂ ಅವನ ಕಡೆಗೇ ಮರಳಬೇಕಾಗಿದೆ."

(ಅಲ್ ಮೂಮಿನ್: 2-3)

"ಅವನು ಅತ್ಯುನ್ನತ ಪದವಿಯುಳ್ಳವನೂ ವಿಶ್ವಸಿಂಹಾಸನದ ಒಡೆಯನೂ ಆಗಿರುತ್ತಾನೆ. ಭೇಟಿಯಾಗುವ ದಿನದ ಬಗ್ಗೆ ಎಚ್ಚರಿಕೆ ಕೊಡಲಿಕ್ಕಾಗಿ ಅವನು ತನ್ನ ದಾಸರ ಪೈಕಿ ತಾನಿಚ್ಛಿಸಿದವರ ಮೇಲೆ ತನ್ನ ಅಪ್ಪಣೆಯಿಂದ ದಿವ್ಯವಾಣಿಯನ್ನು ಅವತೀರ್ಣಗೊಳಿಸುತ್ತಾನೆ." (ಅಲ್ ಮೂಮಿನ್: 15)

"ಆದುದರಿಂದ ನೀವು ನನ್ನನ್ನು ಸ್ಮರಿಸುತ್ತಲಿರಿ. ನಾನು ನಿಮ್ಮನ್ನು ಸ್ಮರಿಸುವೆನು ಮತ್ತು ನನಗೆ ಕೃತಜ್ಞರಾಗಿರಿ, ಕೃತಘ್ನರಾಗಬೇಡಿರಿ." (ಅಲ್ ಬಕರ: 152)

"ಓ ಪೈಗಂಬರರೇ! ನನ್ನ ದಾಸರು ನಿಮ್ಮೊಡನೆ ನನ್ನ ಬಗ್ಗೆ ಕೇಳಿದರೆ, ನಾನು ಅವರಿಗೆ ನಿಕಟನಾಗಿದ್ದೇನೆಂದೂ ಪ್ರಾರ್ಥಿಸುವವನು ನನ್ನನ್ನು ಪ್ರಾರ್ಥಿಸಿದಾಗ ಅವನ ಪ್ರಾರ್ಥನೆಯನ್ನು ಆಲಿಸುತ್ತೇನೆಂದೂ ಅದಕ್ಕೆ ಉತ್ತರಿಸುತ್ತೇನೆಂದೂ ಅವರಿಗೆ ಹೇಳಿರಿ. ಆದುದರಿಂದ ಅವರು ನನ್ನ ಕರೆಗೆ ಓಗೊಡಲಿ ಮತ್ತು ನನ್ನ ಮೇಲೆ ವಿಶ್ವಾಸವಿರಿಸಲಿ. (ಇದನ್ನು ಅವರಿಗೆ ತಿಳಿಸಿ ಬಿಡಿರಿ) ಅವರು ಸನ್ಮಾರ್ಗ ಪಡೆಯಲೂಬಹುದು."

(ಅಲ್ ಬಕರ: 186)

"ನಿಶ್ಚಯವಾಗಿಯೂ ನಿಮ್ಮ ಪ್ರಭು ಜನರ ಮೇಲೆ ಮಹಾ ಅನುಗ್ರಹಶಾಲಿ. ಆದರೆ ಹೆಚ್ಚಿನವರು ಕೃತಜ್ಞತೆ ತೋರುವುದಿಲ್ಲ." (ಅನ್ನಮ್ಲ್: 73)

"ಕೃತಜ್ಞತೆ ತೋರುವವನ ಕೃತಜ್ಞತೆಯು ಅವನಿಗೇ ಲಾಭದಾಯಕವಾಗಿದೆ. ಯಾರಾದರೂ ಕೃತಘ್ನತೆ ತೋರಿದರೆ ನನ್ನ ಪ್ರಭು ನಿರಪೇಕ್ಷನೂ ಸ್ವಯಂ ಸನ್ಮಾನ್ಯನೂ ಆಗಿರುತ್ತಾನೆ." (ಅನ್ನಮ್ಲ್: 40)

"ವಿಶ್ವಸಿಂಹಾಸನವನ್ನು ಹೊತ್ತ ದೇವಚರರು ಮತ್ತು ಅದರ ಸುತ್ತಲೂ ಉಪಸ್ಥಿತರಿರುವವರು ತಮ್ಮ ಪ್ರಭುವಿನ ಪ್ರಶಂಸೆಯೊಂದಿಗೆ ಅವನನ್ನು ಸ್ತುತಿಸುತ್ತಿರುತ್ತಾರೆ. ಅವರು ಅವನ ಮೇಲೆ ವಿಶ್ವಾಸವಿರಿಸುತ್ತಾರೆ ಮತ್ತು ಸತ್ಯವಿಶ್ವಾಸಿಗಳ ಪಾಪ ವಿಮೋಚನೆಗಾಗಿ ಪ್ರಾರ್ಥಿಸುತ್ತಾರೆ. ಅವರು ಹೇಳುತ್ತಾರೆ: ನನ್ನ ಪ್ರಭೂ, ನೀನು ನಿನ್ನ ಕೃಪೆ ಮತ್ತು ನಿನ್ನ ಜ್ಞಾನದೊಂದಿಗೆ ಸಕಲ ವಸ್ತುಗಳನ್ನು ಆವರಿಸಿಕೊಂಡಿರುವೆ. ಆದುದರಿಂದ ಪಶ್ಚಾತ್ತಾಪ ಪಟ್ಟವರನ್ನು ಹಾಗೂ ನಿನ್ನ ಮಾರ್ಗವನ್ನು ಸ್ವೀಕರಿಸಿಕೊಂಡವರನ್ನು ಕ್ಷಮಿಸು ಮತ್ತು ನರಕ ಯಾತನೆಯಿಂದ ರಕ್ಷಿಸು. ನನ್ನ ಪ್ರಭೂ, ನೀನು ಅವರಿಗೆ ವಾಗ್ದಾನ ಮಾಡಿರುವ ಶಾಶ್ವತವಾದ ಸ್ವರ್ಗೋದ್ಯಾನಗಳಲ್ಲಿ ಅವರನ್ನು ಪ್ರವೇಶಗೊಳಿಸು. ಅವರ ಪಿತರ, ಪತ್ನಿಯರ ಮತ್ತು ಮಕ್ಕಳ ಪೈಕಿ ಸಜ್ಜನರಾದವರನ್ನು

ಕೂಡಾ ಅವರೊಂದಿಗೆ ಅಲ್ಲಿಗೆ ತಲುಪಿಸು. ನಿಶ್ಚಯವಾಗಿಯೂ ನೀನು ಪ್ರಬಲನೂ ಯುಕ್ತಿವಂತನೂ ಆಗಿರುವೆ. ಅವರನ್ನು ಕೇಡುಗಳಿಂದ ರಕ್ಷಿಸು. ನೀನು ಆ ದಿನ ಯಾರನ್ನು ಕೇಡುಗಳಿಂದ ರಕ್ಷಿಸಿದೆಯೋ ಅವನ ಮೇಲೆ ನೀನು ಮಹಾ ಕೃಪೆಗೈದೆ ಇದುವೇ ಮಹಾ ಯಶಸ್ಸಾಗಿದೆ." (ಅಲ್ ಮೂಮಿನ್: 7-9)

"ಅಲ್ಲಾಹನು ತೋರಿಸಿದ ಮಾರ್ಗದರ್ಶನವೇ ವಾಸ್ತವಿಕ ಮಾರ್ಗದರ್ಶನವೆಂದು ಸ್ಪಷ್ಟವಾಗಿ ಹೇಳಿಬಿಡಿರಿ." (ಅಲ್ ಬಕರ: 120)

"ನಿಜಕ್ಕೂ ನಿಮ್ಮ ಪ್ರಭು ಮಹಾ ಪ್ರಬಲನೂ ಕರುಣಾನಿಧಿಯೂ ಆಗಿರುತ್ತಾನೆ." (ಅಶ್ಶುಅರಾ: 104)

"ಮತ್ತು ನಮ್ಮ ನಿದರ್ಶನಗಳನ್ನು ಸುಳ್ಳಾಗಿಸಿದವರ ಬೇರನ್ನೇ ಕಡಿದುಬಿಟ್ಟೆವು. ಅವರು ವಿಶ್ವಾಸವಿರಿಸುವವರಾಗಿರಲಿಲ್ಲ." (ಅಲ್ ಅಅ್‌ರಾಫ್: 72)

"ಆದುದರಿಂದ ಅವನ ಮಹಿಮಾದ್ಭುತಗಳ ಬಗ್ಗೆ ಬೋಧಶೂನ್ಯರಾಗಬೇಡಿರಿ." (ಅಲ್ ಅಅ್‌ರಾಫ್: 74)

"ನಮಗಾಗಿ ಹೋರಾಡುವವರಿಗೆ ನಾವು ನಮ್ಮ ಮಾರ್ಗಗಳನ್ನು ತೋರಿಸಿ ಕೊಡುವೆವು ಮತ್ತು ನಿಶ್ಚಯವಾಗಿಯೂ ಅಲ್ಲಾಹನು ಸಜ್ಜನರ ಜೊತೆಯಲ್ಲೇ ಇದ್ದಾನೆ." (ಅಲ್ ಅಂಕಬೂತ್: 69)

"ಅಲ್ಲಾಹನು ಮನುಷ್ಯನ ಮತ್ತು ಅವನ ಹೃದಯದ ನಡುವೆ ಇದ್ದಾನೆಂದೂ ನೀವು ಅವನ ಕಡೆಗೆ ಒಟ್ಟುಗೂಡಿಸಲ್ಪಡುವಿರೆಂದೂ ಅರಿತುಕೊಳ್ಳಿರಿ." (ಅಲ್ ಅನ್‌ಫಾಲ್: 24)

"ನಾವು ಅವನ ಕಂಠನಾಡಿಗಿಂತಲೂ ಹೆಚ್ಚು ಅವನಿಗೆ ಸಮೀಪವಿದ್ದೇವೆ." (ಕಾಫ್: 16)

"ಆಕಾಶಗಳಲ್ಲಿರುವ ಪ್ರತಿಯೊಂದು ವಸ್ತುವೂ ಭೂಮಿಯಲ್ಲಿರುವ ಪ್ರತಿಯೊಂದು ವಸ್ತುವೂ ಅಲ್ಲಾಹನನ್ನು ಜಪಿಸುತ್ತಿವೆ. ಅತ್ಯಂತ ಪರಿಶುದ್ಧನೂ ಪ್ರಬಲನೂ ಯುಕ್ತಿಪೂರ್ಣನೂ ಆಗಿರುವ ಸಾಮ್ರಾಟನು." (ಅಲ್ ಜುಮ್‌ಆ: 1)

"ಅವನು ಮಹಾ ಕರುಣಾನಿಧಿ. ನಾವು ಅವನ ಮೇಲೆಯೇ ವಿಶ್ವಾಸವಿರಿಸಿದ್ದೇವೆ ಮತ್ತು ಅವನ ಮೇಲೆಯೇ ಭರವಸೆಯನ್ನಿರಿಸಿದ್ದೇವೆ ಸುವ್ಯಕ್ತವಾದ ಪಥಭ್ರಷ್ಟತೆಯಲ್ಲಿ ಬಿದ್ದಿರುವವನು ಯಾರೆಂದು ಸದ್ಯದಲ್ಲೇ ನಿಮಗೆ ತಿಳಿದು ಬರುವುದು ಎಂದು ಇವರೊಡನೆ ಹೇಳಿರಿ." (ಅಲ್ ಮುಲ್ಕ್: 29)

"ಅವನು ಅತ್ಯಂತ ಮಂಗಲಮಯನು. ಅವನ ಕೈಯಲ್ಲಿ (ವಿಶ್ವದ) ಪ್ರಭುತ್ವವಿದೆ ಮತ್ತು ಅವನು ಸಕಲ ವಸ್ತುಗಳ ಮೇಲೆ ಸಾಮರ್ಥ್ಯವುಳ್ಳವನಾಗಿದ್ದಾನೆ. ನಿಮ್ಮನ್ನು

ಪರೀಕ್ಷಿಸಿ ನಿಮ್ಮ ಪೈಕಿ ಯಾರು ಸತ್ಕರ್ಮವೆಸಗುವವನೆಂದು ನೋಡಲಿಕ್ಕಾಗಿ ಅವನು ಜೀವನವನ್ನೂ ಮರಣವನ್ನೂ ಆವಿಷ್ಕರಿಸಿದನು. ಅವನು ಪ್ರಬಲನೂ ಕ್ಷಮಾಶೀಲನೂ ಆಗಿರುತ್ತಾನೆ. ಅವನು ಅಂತಸ್ತು ಅಂತಸ್ತುಗಳಾಗಿ ಸಪ್ತಗಗನಗಳನ್ನು ಉಂಟುಮಾಡಿದನು. ದಯಾಮಯನ ಸೃಷ್ಟಿಯಲ್ಲಿ ನೀವು ಯಾವುದೇ ಅಸಾಂಗತ್ಯವನ್ನು ಕಾಣಲಾರಿರಿ. ಇನ್ನೊಮ್ಮೆ ನೋಡಿರಿ, ನಿಮಗೆಲ್ಲಾದರೂ ನ್ಯೂನತೆ ಕಾಣಿಸುತ್ತಿದೆಯೇ? ಪುನಃ ದೃಷ್ಟಿ ಹಾಯಿಸಿರಿ. ನಿಮ್ಮ ದೃಷ್ಟಿಯು ಸೋತು ಹತಾಶವಾಗಿ ಮರಳಿ ಬರುವುದು. ನಾವು ನಿಮ್ಮ ಸಮೀಪದ ಆಕಾಶವನ್ನು ಉಜ್ವಲ ದೀಪಗಳಿಂದ ಅಲಂಕರಿಸಿದ್ದೇವೆ ಮತ್ತು ಅವುಗಳನ್ನು ಶೈತಾನರನ್ನು ಹೊಡೆದಟ್ಟುವ ಸಾಧನವಾಗಿ ಮಾಡಿದ್ದೇವೆ. ನಾವು ಈ ಶೈತಾನರಿಗಾಗಿ ಧಗಧಗಿಸುವ ಅಗ್ನಿಯನ್ನು ಸಿದ್ಧಪಡಿಸಿಟ್ಟಿರುತ್ತೇವೆ."

(ಅಲ್ ಮುಲ್ಕ್: 6)

"ಹೇಳಿರಿ– ಓ ಅಲ್ಲಾಹ್, ಸಕಲ ವಿಶ್ವಾಧಿಪತ್ಯದ ಒಡೆಯನೇ, ನೀನು ನಿನಗಿಷ್ಟ ಬಂದವರಿಗೆ ರಾಜ್ಯಾಧಿಕಾರ ನೀಡುವೆ ಮತ್ತು ನಿನಗಿಷ್ಟ ಬಂದವರಿಂದ ಕಸಿದುಕೊಳ್ಳುವೆ. ನಿನಗಿಷ್ಟ ಬಂದವರಿಗೆ ಪ್ರತಿಷ್ಠೆ ಪ್ರಧಾನ ಮಾಡುವೆ. ನಿನಗಿಷ್ಟ ಬಂದವರನ್ನು ಅವಮಾನ ಪಡಿಸುವೆ. ಒಳಿತುಗಳು ನಿನ್ನ ಅಧಿಕಾರ ಹಸ್ತದಲ್ಲಿವೆ. ನಿಶ್ಚಯವಾಗಿಯೂ ನೀನು ಸರ್ವಶಕ್ತನಾಗಿರುವೆ." (ಆಲಿ ಇಮ್ರಾನ್: 26)

"ಹೇಳಿರಿ– ಜನರೇ, ನಿಮ್ಮ ಬಳಿಗೆ ನಿಮ್ಮ ಪ್ರಭುವಿನ ಕಡೆಯಿಂದ ಪರಮ ಸತ್ಯವು ಬಂದು ಬಿಟ್ಟಿತು. ಇನ್ನು ಯಾರು ಸನ್ಮಾರ್ಗವನ್ನನುಸರಿಸುವನೋ ಅವನ ಸನ್ಮಾರ್ಗ ಪ್ರವರ್ತನವು ಅವನಿಗೇ ಫಲಕಾರಿಯಾಗುವುದು ಮತ್ತು ಯಾರು ಪಥಭ್ರಷ್ಟನಾಗಿರುವನೋ ಅವನ ಪಥಭ್ರಷ್ಟತೆಯು ಅವನಿಗೇ ಹಾನಿಕರವಾಗುವುದು ಮತ್ತು ನಾನು ನಿಮ್ಮ ಮೇಲೆ ಕೊತ್ವಾಲನೇನೂ ಅಲ್ಲ." (ಯೂನುಸ್: 108)

"ಭೂಮಿಯ ಮೇಲೆ ಅಥವಾ ನಿಮ್ಮ ಮೇಲೆ ಎರಗುವ ಸಂಕಷ್ಟವೂ ನಾವು ಅದನ್ನು ಸೃಷ್ಟಿಸುವುದಕ್ಕೆ ಮುಂಚೆ ಒಂದು ಗ್ರಂಥದಲ್ಲಿ (ವಿಧಿ ಲಿಖಿತದಲ್ಲಿ) ಬರೆದಿಟ್ಟುಕೊಳ್ಳದೆ ಇಲ್ಲ. ಖಂಡಿತವಾಗಿಯೂ ಹೀಗೆ ಮಾಡುವುದು ಅಲ್ಲಾಹನಿಗೆ ಅತ್ಯಂತ ಸುಲಭ ಕಾರ್ಯವಾಗಿದೆ. (ಹೀಗೇಕೆಂದರೆ) ನಿಮಗುಂಟಾಗುವ ಯಾವುದೇ ನಷ್ಟಕ್ಕಾಗಿ ನೀವು ಖೇದಿಸಬಾರದು ಮತ್ತು ಅಲ್ಲಾಹನು ನಿಮಗೆ ಏನನ್ನು ದಯಪಾಲಿಸಿರುವನೋ ಅದರ ಬಗ್ಗೆ ಹಿಗ್ಗಬಾರದು. ಅಲ್ಲಾಹನು ಆತ್ಮಪ್ರಶಂಸಕರನ್ನು ಮತ್ತು ದುರಭಿಮಾನಿಗಳನ್ನು ಮೆಚ್ಚುವುದಿಲ್ಲ." (ಅಲ್ ಹದೀದ್: 22–23)

"ಅಲ್ಲಾಹನು ಭೂಮಿ–ಆಕಾಶಗಳ ಅಧಿಪತಿಯೆಂಬುದನ್ನು ನೀವು ತಿಳಿದಿಲ್ಲವೇ? ಅವನು ತಾನಿಚ್ಛಿಸಿದವರನ್ನು ಶಿಕ್ಷಿಸುತ್ತಾನೆ ಮತ್ತು ತನಗಿಷ್ಟ ಬಂದವರನ್ನು ಕ್ಷಮಿಸುತ್ತಾನೆ. ಅವನಿಗೆ ಎಲ್ಲ ಅಧಿಕಾರವೂ ಇದೆ." (ಅಲ್ ಮಾಇದ: 40)

"ಅಲ್ಲಾಹನ ಮೇಲೆಯೇ ಭರವಸೆಯಿಟ್ಟು ಕಾರ್ಯವೆಸಗುವವರನ್ನು ಅವನು ಪ್ರೀತಿಸುತ್ತಾನೆ. ಅಲ್ಲಾಹನು ನಿಮ್ಮ ಸಹಾಯಕ್ಕಿದ್ದರೆ ಯಾವ ಶಕ್ತಿಯಿಂದಲೂ ನಿಮ್ಮನ್ನು ಜಯಿಸಲು ಮತ್ತು ಅವನು ನಿಮ್ಮ ಕೈಬಿಟ್ಟರೆ, ಆಮೇಲೆ ನಿಮಗೆ ಸಹಾಯ ಮಾಡುವವರು ಯಾರಿದ್ದಾರೆ? ಆದುದರಿಂದ ಅಪ್ಪಟ ಸತ್ಯವಿಶ್ವಾಸಿಗಳು ಅಲ್ಲಾಹನ ಮೇಲೆಯೇ ಭರವಸೆಯನ್ನಿರಿಸಬೇಕು." (ಆಲಿ ಇಮ್ರಾನ್: 159–160)

## ಧರ್ಮದ ಸ್ತಂಭಗಳು

"ಅಲ್ಲಾಹನು ನನ್ನ ಪ್ರಭುವೂ ಆಗಿರುತ್ತಾನೆ ನಿಮ್ಮ ಪ್ರಭುವೂ ಆಗಿರುತ್ತಾನೆ. ಆದುದರಿಂದ ನೀವು ಅವನ ದಾಸ್ಯ-ಆರಾಧನೆಯನ್ನೇ ಮಾಡಿರಿ. ಇದುವೇ ನೇರ ಮಾರ್ಗ ವಾಗಿದೆ." (ಆಲಿ ಇಮ್ರಾನ್: 51)

"ನಿಮ್ಮ ಕಡೆಗೆ ದಿವ್ಯವಾಣಿಯ ಮೂಲಕ ಕಳುಹಿಸಲ್ಪಟ್ಟಿರುವ ಈ ಗ್ರಂಥವನ್ನು ಪಠಿಸಿರಿ ಮತ್ತು ನಮಾಝನ್ನು ಸಂಸ್ಥಾಪಿಸಿರಿ. ನಿಶ್ಚಯವಾಗಿಯೂ ನಮಾಝ್ ಅಶ್ಲೀಲ ಹಾಗೂ ದುಷ್ಕೃತ್ಯಗಳಿಂದ ತಡೆಯುತ್ತದೆ ಮತ್ತು ಅಲ್ಲಾಹನ ಧ್ಯಾನ ಇದಕ್ಕಿಂತಲೂ ದೊಡ್ಡದು. ನೀವು ಮಾಡುವುದೆಲ್ಲವನ್ನೂ ಅಲ್ಲಾಹನು ಅರಿಯುತ್ತಾನೆ." (ಅಲ್ ಅಂಕಬೂತ್: 45)

"ನೀವು ಏಳುವಾಗ ನಿಮ್ಮ ಪ್ರಭುವಿನ ಪ್ರಶಂಸೆಯೊಂದಿಗೆ ಅವನನ್ನು ಕೀರ್ತಿಸಿರಿ. ಇರುಳಲ್ಲೂ ಅವನನ್ನು ಕೀರ್ತಿಸಿರಿ, ನಕ್ಷತ್ರಗಳು ಮರಳುವಾಗಲೂ ಕೀರ್ತಿಸಿರಿ." (ಅತ್ತೂರ್: 48–49)

"ಓ ಸತ್ಯವಿಶ್ವಾಸಿಗಳೇ! ಗತ ಪ್ರವಾದಿಗಳ ಅನುಯಾಯಿಗಳಿಗೆ ಕಡ್ಡಾಯಗೊಳಿಸಿದ್ದಂತೆಯೇ ನಿಮ್ಮ ಮೇಲೂ ಉಪವಾಸ ವ್ರತವನ್ನು ಕಡ್ಡಾಯಗೊಳಿಸಲಾಗಿದೆ. ಇದರಿಂದ ನಿಮ್ಮಲ್ಲಿ ಧರ್ಮನಿಷ್ಠೆಯ ಗುಣವಿಶೇಷವುಂಟಾಗುವುದೆಂದು ಆಶಿಸಲಾಗಿದೆ." (ಅಲ್ ಬಕರ: 183)

"ಸ್ವತಃ ಜಿಪುಣತೆ ತೋರುವವರನ್ನೂ ಇತರರನ್ನೂ ಜಿಪುಣತೆಗೆ ಪ್ರೇರೇಪಿಸುವವರನ್ನೂ ಅಲ್ಲಾಹನು ತನ್ನ ಅನುಗ್ರಹದಿಂದ ತಮಗೆ ದಯಪಾಲಿಸಿದುದನ್ನು ಬಚ್ಚಿಡುವವರನ್ನೂ ಅಲ್ಲಾಹನು ಮೆಚ್ಚುವುದಿಲ್ಲ, ಅಂತಹ ಕೃತಘ್ನರಿಗಾಗಿ ನಾವು ಅಪಮಾನಕರ ಶಿಕ್ಷೆಯನ್ನು ಸಿದ್ಧಗೊಳಿಸಿಟ್ಟಿರುತ್ತೇವೆ." (ಅನ್ನಿಸಾ: 37)

"ಅಲ್ಲಾಹನ ಮಾರ್ಗದಲ್ಲಿ ತಮ್ಮ ಸಂಪತ್ತನ್ನು ಖರ್ಚು ಮಾಡುವವರ, ಖರ್ಚು ಮಾಡಿದುದನ್ನು ಆಡಿಕೊಳ್ಳದವರ ಮತ್ತು ಪರಪೀಡನಗೈಯದವರ ಪ್ರತಿಫಲವು ಅವರ ಪ್ರಭುವಿನ ಬಳಿ ಇದೆ. ಅವರಿಗೆ ಯಾವತ್ತೂ ಭಯ ಮತ್ತು ವ್ಯಥೆಯ ಸಂಭವವಿಲ್ಲ." (ಅಲ್ ಬಕರ: 262)

"ನೀವು ನಿಮಗೆ ಬಹಳ ಪ್ರಿಯವಾಗಿರುವ ವಸ್ತುಗಳನ್ನು (ಅಲ್ಲಾಹನ ಮಾರ್ಗದಲ್ಲಿ) ವ್ಯಯಿಸುವ ತನಕವೂ ಪುಣ್ಯ ಮಟ್ಟವನ್ನು ತಲಪಲಾರಿರಿ. ನೀವು ಏನೇನು ಖರ್ಚು ಮಾಡುವಿರೋ ಅದರ ಬಗ್ಗೆ ಅಲ್ಲಾಹನು ಅಜ್ಞನಲ್ಲ." (ಆಲಿ ಇಮ್ರಾನ್: 92)

"ಈ ಭವನದ ವರೆಗೆ ತಲಪಲು ಸಾಧನಾನುಕೂಲತೆಗಳಿರುವವನು ಅದರ 'ಹಜ್ಜ್' ಯಾತ್ರೆ ಕೈಗೊಳ್ಳಬೇಕೆಂಬುದು ಜನರ ಮೇಲೆ ಅಲ್ಲಾಹನ ಹಕ್ಕಾಗಿರುತ್ತದೆ." (ಆಲಿ ಇಮ್ರಾನ್: 97)

"ಓ ಸತ್ಯವಿಶ್ವಾಸಿಗಳೇ! ನೀವು ದೇವಭಯವನ್ನಿರಿಸಿಕೊಂಡರೆ ಅಲ್ಲಾಹನು ನಿಮಗೊಂದು ಒರೆಗಲ್ಲನ್ನು ಒದಗಿಸುವನು. ನಿಮ್ಮ ದೋಷಗಳನ್ನು ನಿಮ್ಮಿಂದ ದೂರೀಕರಿಸುವನು ಮತ್ತು ನಿಮ್ಮ ಅಪರಾಧಗಳನ್ನು ಕ್ಷಮಿಸುವನು. ಅಲ್ಲಾಹನು ಮಹಾ ಅನುಗ್ರಹದಾನಿಯಾಗಿರುತ್ತಾನೆ." (ಅಲ್ ಅನ್‌ಫಾಲ್: 29)

## ಅಲ್ಲಾಹನ ಮಾರ್ಗದಲ್ಲಿ ಹೋರಾಟ

"ಸತ್ಯವಿಶ್ವಾಸಿಗಳೇ, ನಿಮ್ಮನ್ನು ವೇದನಾಯುಕ್ತ ಯಾತನೆಯಿಂದ ರಕ್ಷಿಸುವಂತಹ ಒಂದು ವ್ಯಾಪಾರವನ್ನು ನಾನು ನಿಮಗೆ ತೋರಿಸಿಕೊಡಲೇ? ಅಲ್ಲಾಹ್ ಮತ್ತು ಅವನ ಸಂದೇಶವಾಹಕರ ಮೇಲೆ ವಿಶ್ವಾಸವಿರಿಸಿರಿ ಮತ್ತು ನಿಮ್ಮ ಸಂಪತ್ತುಗಳಿಂದಲೂ ಜೀವಗಳಿಂದಲೂ ಅಲ್ಲಾಹನ ಮಾರ್ಗದಲ್ಲಿ ಹೋರಾಡಿರಿ. ನೀವು ಅರಿಯುವವರಾಗಿದ್ದರೆ, ನಿಮ್ಮ ಪಾಲಿಗೆ ಇದುವೇ ಉತ್ತಮವಾಗಿದೆ." (ಅಸ್ಸಫ್ಫ್: 10–11)

"ಅಲ್ಲಾಹನ ಮಾರ್ಗದಲ್ಲಿ ಹೋರಾಡಬೇಕಾದ ರೀತಿಯಲ್ಲಿ ಹೋರಾಡಿರಿ. ಅವನು ತನ್ನ ಕಾರ್ಯಕ್ಕಾಗಿ ನಿಮ್ಮನ್ನು ಆರಿಸಿಕೊಂಡಿರುತ್ತಾನೆ." (ಅಲ್ ಹಜ್ಜ್: 78)

"ಸತ್ಯವಿಶ್ವಾಸವನ್ನು ಕೈಗೊಂಡ, ಅಲ್ಲಾಹನ ಮಾರ್ಗದಲ್ಲಿ ಮನೆಮಾರುಗಳನ್ನು ಬಿಟ್ಟ ಮತ್ತು ತನು-ಧನಗಳಿಂದ ಹೋರಾಟ ನಡೆಸಿದವರ ಪದವಿಯೇ ಅಲ್ಲಾಹನ ಬಳಿ ಉನ್ನತವಾಗಿರುತ್ತದೆ. ಅವರೇ ವಿಜಯಿಗಳು." (ಅತ್ತೌಬ: 20)

"ಓ ಸತ್ಯವಿಶ್ವಾಸಿಗಳೇ! ಪ್ರತಿರೋಧಕ್ಕೆ ಸದಾ ಸಜ್ಜಾಗಿರಿ." (ಅನ್ನಿಸಾ: 71)

"ಓ ನಮ್ಮ ಪ್ರಭೂ! ಅಕ್ರಮಿಗಳು ವಾಸಿಸುತ್ತಿರುವ ಈ ನಾಡಿನಿಂದ ನಮ್ಮನ್ನು ಹೊರ ತೆಗೆ. ನೀನು ನಿನ್ನ ಕಡೆಯಿಂದ ನಮಗೊಬ್ಬ ಮೇಲ್ವಿಚಾರಕನನ್ನು ಮತ್ತು ಒಬ್ಬ ಸಹಾಯಕನನ್ನು ನಿಯೋಜಿಸು ಎಂದು ಮೊರೆಯಿಡುತ್ತಿರುವ ಮರ್ದನಕ್ಕೊಳಗಾದ ಪುರುಷರು, ಸ್ತ್ರೀಯರು ಮತ್ತು ಮಕ್ಕಳಿಗಾಗಿ, ನೀವು ಅಲ್ಲಾಹನ ಮಾರ್ಗದಲ್ಲಿ ಯುದ್ಧ ಮಾಡದಿರಲು ಕಾರಣವೇನು? ಸತ್ಯವಿಶ್ವಾಸ ಕೈಗೊಂಡವರು ಅಲ್ಲಾಹನ ಮಾರ್ಗದಲ್ಲಿ ಯುದ್ಧ ಮಾಡುತ್ತಾರೆ ಮತ್ತು ಸತ್ಯನಿಷೇಧವನ್ನು ಕೈಗೊಂಡವರು 'ತಾಗೂತ್' (ಬಂಡುಕೋರ)ನ ಮಾರ್ಗದಲ್ಲಿ ಯುದ್ಧ ಮಾಡುತ್ತಾರೆ. ಆದುದರಿಂದ ನೀವು

ಶೈತಾನನ ಸಂಗಡಿಗರೊಡನೆ ಹೋರಾಡಿರಿ. ಶೈತಾನನ ಕುತಂತ್ರಗಳು ವಾಸ್ತವದಲ್ಲಿ ಬಹಳ ದುರ್ಬಲವೆಂಬುದನ್ನು ಖಾತ್ರಿಯಾಗಿ ತಿಳಿದುಕೊಳ್ಳಿರಿ." (ಅನ್ನಿಸಾ: 75-76)

## ಪ್ರತೀಕಾರ

"ಓ ಬುದ್ಧಿಜೀವಿಗಳೇ! 'ಕಿಸಾಸ್'ನಲ್ಲಿ (ಪ್ರತೀಕಾರದಲ್ಲಿ) ನಿಮಗೆ ಜೀವನವಿದೆ. ನೀವು ಈ ಕಾನೂನಿನ ಉಲ್ಲಂಘನೆಯಿಂದ ದೂರವಿರುವಿರೆಂದು ಆಶಿಸಲಾಗುತ್ತದೆ."

(ಅಲ್ ಬಕರ: 179)

"ನಿಮಗೆ ನೀಡಲಾಗಿರುವುದೆಲ್ಲವೂ ಕೇವಲ ಇಹಲೋಕದ ಕೆಲವೇ ದಿನಗಳ ಜೀವನ ಸಾಧನಗಳಾಗಿವೆ ಮತ್ತು ಅಲ್ಲಾಹನ ಬಳಿಯಲ್ಲಿರುವುದೆಲ್ಲ ಉತ್ತಮವೂ ಶಾಶ್ವತವೂ ಆಗಿರುತ್ತದೆ. ಅದು ಇರುವುದು ಸತ್ಯವಿಶ್ವಾಸಿಗಳಿಗಾಗಿ ಮತ್ತು ತಮ್ಮ ಪ್ರಭುವಿನ ಮೇಲೆ ಭರವಸೆ ಇಡುವವರಿಗಾಗಿ ಅವರು ದೊಡ್ಡ ದೊಡ್ಡ ಪಾಪಗಳಿಂದ ಮತ್ತು ಅಶ್ಲೀಲ ಕಾರ್ಯಗಳಿಂದ ದೂರವಿರುವವರೂ ಸಿಟ್ಟು ಬಂದಾಗ ಕ್ಷಮಿಸಿ ಬಿಡುವವರೂ ಆಗಿರುತ್ತಾರೆ. ಅವರು ತಮ್ಮ ಪ್ರಭುವಿನ ಆಜ್ಞೆಗಳನ್ನು ಪಾಲಿಸುತ್ತಾರೆ. ನಮಾಝನ್ನು ಸಂಸ್ಥಾಪಿಸುತ್ತಾರೆ. ತಮ್ಮ ವ್ಯವಹಾರಗಳನ್ನು ಪರಸ್ಪರ ಸಮಾಲೋಚನೆಯಿಂದ ನಡೆಸುತ್ತಾರೆ. ನಾವು ಅವರಿಗೆ ಕೊಟ್ಟಿರುವ ಜೀವನಾಧಾರಗಳಿಂದ ಖರ್ಚು ಮಾಡುತ್ತಾರೆ ಮತ್ತು ಅವರ ಮೇಲೆ ಅತಿರೇಕವೆಸಗಲ್ಪಟ್ಟರೆ ಅದನ್ನು ಪ್ರತಿರೋಧಿಸುತ್ತಾರೆ. ಕೇಡುಕಿನ ಪ್ರತಿಫಲ ಅದಕ್ಕೆ ಸಮಾನವಾದ ಕೇಡುಕಾಗಿದೆ. ಇನ್ನು ಯಾರಾದರೂ ಕ್ಷಮಿಸಿಬಿಟ್ಟರೆ ಹಾಗೂ ಸುಧಾರಿಸಿಕೊಂಡರೆ ಅದರ ಪ್ರತಿಫಲದ ಹೊಣೆ ಅಲ್ಲಾಹನ ಮೇಲಿದೆ. ನಿಶ್ಚಯವಾಗಿಯೂ ಅವನು ಅಕ್ರಮಿಗಳನ್ನು ಮೆಚ್ಚುವುದಿಲ್ಲ. ತಮ್ಮ ಮೇಲೆ ಅಕ್ರಮವಾದ ಬಳಿಕ ಪ್ರತೀಕಾರವೆಸಗಿದವರನ್ನು ಆಕ್ಷೇಪಿಸಲಾಗದು. ವಾಸ್ತವದಲ್ಲಿ ಇತರರ ಮೇಲೆ ಅಕ್ರಮವೆಸಗುವವರು ಮತ್ತು ಭೂಮಿಯಲ್ಲಿ ಅನ್ಯಾಯವಾಗಿ ಅತಿರೇಕವೆಸಗುವವರೇ ಆಕ್ಷೇಪಕ್ಕೆ ಅರ್ಹರು. ಇಂತಹವರಿಗೆ ವೇದನಾಯುಕ್ತ ಯಾತನೆ ಇದೆ. ಆದರೆ ಯಾರಾದರೂ ಸಹನೆಯಿಂದ ವರ್ತಿಸಿದರೆ ಹಾಗೂ ಕ್ಷಮಿಸಿದರೆ ಇದೊಂದು ಮಹಾ ಸಾಹಸ ಕಾರ್ಯಗಳಲ್ಲಾಗುವುದು."

(ಅಶ್ಶೂರಾ: 36-43)

## ಯುದ್ಧ

"ಅಲ್ಲಾಹನ ಮಾರ್ಗದಲ್ಲಿ ಹೋರಾಡಬೇಕಾದ ರೀತಿಯಲ್ಲಿ ಹೋರಾಡಿರಿ. ಅವನು ತನ್ನ ಕಾರ್ಯಕ್ಕಾಗಿ ನಿಮ್ಮನ್ನು ಆರಿಸಿಕೊಂಡಿರುತ್ತಾನೆ." (ಅಲ್ ಹಜ್ಜ್: 78)

"ನಿಮ್ಮ ಧನಗಳಿಂದಲೂ ಜೀವಗಳಿಂದಲೂ ಅಲ್ಲಾಹನ ಮಾರ್ಗದಲ್ಲಿ ಹೋರಾಟ ನಡೆಸಿರಿ. ನೀವು ಅರಿತಿದ್ದರೆ ಇದು ನಿಮಗೆ ಉತ್ತಮ." (ಅತ್ತೌಬ: 41)

"ನಿಮ್ಮೊಡನೆ ಯುದ್ಧ ಮಾಡುವವರೊಂದಿಗೆ ನೀವೂ ಅಲ್ಲಾಹನ ಮಾರ್ಗದಲ್ಲಿ ಯುದ್ಧ ಮಾಡಿರಿ. ಆದರೆ ಅತಿಕ್ರಮಿಸಬೇಡಿರಿ. ಅಲ್ಲಾಹನು ಅತಿಕ್ರಮಿಸುವವರನ್ನು ಮೆಚ್ಚುವುದಿಲ್ಲ." (ಅಲ್ ಬಕರ: 190)

"ನಿಮಗೆ ಯುದ್ಧವನ್ನು ಶಾಸನಗೊಳಿಸಲಾಗಿದೆ. ಅದು ನಿಮಗೆ ಅಪ್ರಿಯವಾಗಿದೆ. ಒಂದು ವಸ್ತುವು ನಿಮಗೆ ಅಪ್ರಿಯವಾಗಿದ್ದರೂ ಆ ವಸ್ತುವೇ ನಿಮಗೆ ಗುಣಕರವಾಗಿರಲೂ ಸಾಧ್ಯವಿದೆ ಮತ್ತು ಒಂದು ವಸ್ತುವು ನಿಮಗೆ ಪ್ರಿಯವಾಗಿದ್ದರೂ ಆ ವಸ್ತುವೇ ನಿಮಗೆ ಹಾನಿಕರವಾಗಿರಲೂ ಸಾಧ್ಯವಿದೆ. ಅಲ್ಲಾಹನು ಬಲ್ಲವನಾಗಿದ್ದಾನೆ ನೀವು ಬಲ್ಲವರಲ್ಲ." (ಅಲ್ ಬಕರ: 216)

"ಪರಲೋಕ ಜೀವನದ ಬದಲಿಗೆ ಇಹಜೀವನವನ್ನು ಮಾರಿದವರು ಅಲ್ಲಾಹನ ಮಾರ್ಗದಲ್ಲಿ ಹೋರಾಡಬೇಕು. ಅಲ್ಲಾಹನ ಮಾರ್ಗದಲ್ಲಿ ಹೋರಾಟ ನಡೆಸುವವನು ವಧಿಸಲ್ಪಡಲಿ ಅಥವಾ ವಿಜಯಗಳಿಸಲಿ. ಅವನಿಗೆ ನಾವು ಖಂಡಿತವಾಗಿಯೂ ಉನ್ನತವಾದ ಪ್ರತಿಫಲ ನೀಡುವೆವು." (ಅನ್ನಿಸಾ: 74)

"ವಾಸ್ತವದಲ್ಲಿ ಅಲ್ಲಾಹ್ ಸತ್ಯವಿಶ್ವಾಸಿಗಳಿಂದ ಅವರ ತನು-ಧನಗಳನ್ನು ಸ್ವರ್ಗದ ಬದಲಿಗೆ ಖರೀದಿ ಮಾಡಿರುತ್ತಾನೆ. ಅವರು ಅಲ್ಲಾಹನ ಮಾರ್ಗದಲ್ಲಿ ಹೋರಾಡುತ್ತಾರೆ, ವಧಿಸುತ್ತಾರೆ ಮತ್ತು ವಧಿಸಲ್ಪಡುತ್ತಾರೆ. ತೌರಾತ್, ಇಂಜೀಲ್ ಮತ್ತು ಕುರ್‌ಆನಿನಲ್ಲಿ ಅವರೊಡನೆ (ಮಾಡಲಾದ ಸ್ವರ್ಗದ ವಾಗ್ದಾನವು) ಅಲ್ಲಾಹನ ಹೊಣೆಯಲ್ಲಿರುವ ದೃಢ ವಾಗ್ದಾನವಾಗಿದೆ. ಅಲ್ಲಾಹನಿಗಿಂತ ಮಿಗಿಲಾಗಿ ತನ್ನ ವಾಗ್ದಾನ ಪೂರೈಸುವವನು ಯಾರಿದ್ದಾನೆ? ಆದುದರಿಂದ ನೀವು ಆತನೊಂದಿಗೆ ಮಾಡಿಕೊಂಡಿರುವ ವ್ಯವಹಾರಕ್ಕಾಗಿ ಸಂತೋಷಪಡಿರಿ. ಇದುವೇ ಅತ್ಯಂತ ಹಿರಿಯ ವಿಜಯವಾಗಿದೆ. ಅಲ್ಲಾಹನ ಕಡೆಗೆ ಪದೇಪದೇ ಮರಳುವವರು, ಅವನ ದಾಸ್ಯ-ಆರಾಧನೆ ಮಾಡುವವರು, ಅವನ ಗುಣಗಾನ ಮಾಡುವವರು, ಅವನಿಗಾಗಿ ಭೂಮಿಯಲ್ಲಿ ಸಂಚರಿಸುವವರು, ಅವನ ಮುಂದೆ ರುಕೂಅ್ ಮಾಡುವವರು (ಬಾಗುವವರು) ಮತ್ತು ಸುಜೂದ್ ಮಾಡುವವರು (ಸಾಷ್ಟಾಂಗವೆರಗುವವರು), ಒಳಿತಿನ ಆಜ್ಞೆ ನೀಡುವವರು, ಕೆಡುಕಿನಿಂದ ತಡೆಯುವವರು ಮತ್ತು ಅಲ್ಲಾಹನ ಮೇರೆಗಳ ರಕ್ಷಣೆ ಮಾಡುವವರು (ಅಲ್ಲಾಹನೊಂದಿಗೆ ತಮ್ಮ ವ್ಯವಹಾರವನ್ನು ಪೂರ್ತಿಗೊಳಿಸಿಕೊಂಡ ಆ ಸತ್ಯವಿಶ್ವಾಸಿಗಳ ವೈಶಿಷ್ಟ್ಯಗಳಿವು). ಓ ಪೈಗಂಬರರೇ! ಆ ಸತ್ಯವಿಶ್ವಾಸಿಗಳಿಗೆ ಶುಭವಾರ್ತೆ ನೀಡಿರಿ." (ಅತ್ತೌಬ: 111–112)

## ಭಯ

"ನೀವು ಜನರನ್ನು ಭಯಪಡಬೇಡಿರಿ, ನನ್ನನ್ನು ಭಯಪಡಿರಿ." (ಅಲ್ ಮಾಇದ: 44)

"ಅಲ್ಲದೆ, ನಾವು ಭೂಮಿಯಲ್ಲಿಯೂ ಅಲ್ಲಾಹನನ್ನು ಸೋಲಿಸಲಾರೆವು ಮತ್ತು ಓಡಿ ಹೋಗಿಯೂ ಅವನನ್ನು ಸೋಲಿಸಲಾರೆವು ಎಂದು ನಾವು ತಿಳಿದುಕೊಂಡಿದ್ದೆವು. ಅಲ್ಲದೆ, ನಾವು ಸನ್ಮಾರ್ಗದ ಬೋಧನೆಯನ್ನು ಕೇಳಿದಾಗ ಅದರ ಮೇಲೆ ವಿಶ್ವಾಸ ವಿರಿಸಿದೆವು. ಇನ್ನು ತನ್ನ ಪ್ರಭುವಿನ ಮೇಲೆ ಯಾರು ವಿಶ್ವಾಸವಿರಿಸುವನೋ ಅವನಿಗೆ ಯಾವುದೇ ಹಕ್ಕುಚ್ಯುತಿ ಅಥವಾ ಅನ್ಯಾಯದ ಭಯವಿರಲಾರದು."

(ಅಲ್ ಜಿನ್ನ್: 12–13)

## ವಿಜಯ

"ನಾನು ಮತ್ತು ನನ್ನ ಸಂದೇಶವಾಹಕರೇ ವಿಜಯಿಗಳಾಗುವೆವೆಂದು ಅಲ್ಲಾಹನು ವಿಧಿ ಬರೆದು ಬಿಟ್ಟಿರುವನು. ವಾಸ್ತವದಲ್ಲಿ ಅಲ್ಲಾಹನು ಅತ್ಯಂತ ಬಲಿಷ್ಠನೂ ಅಜೇಯನೂ ಆಗಿರುತ್ತಾನೆ." (ಅಲ್ ಮುಜಾದಲ: 21)

"ಅಲ್ಲಾಹನು ಅವರಿಂದ ಪ್ರಸನ್ನನಾದನು ಮತ್ತು ಅವರು ಅಲ್ಲಾಹನಿಂದ ಪ್ರಸನ್ನರಾದರು. ಅವರು ಅಲ್ಲಾಹನ ಪಕ್ಷದವರು. ತಿಳಿಯಿರಿ, ಅಲ್ಲಾಹನ ಪಕ್ಷದವರೇ ವಿಜಯಿಗಳಾಗುವರು." (ಅಲ್ ಮುಜಾದಲ: 22)

"ಸಹಾಯವು ಯಾವಾಗ ಲಭಿಸಿದರೂ ಅದು ಅಲ್ಲಾಹನ ಕಡೆಯಿಂದಲೇ ಲಭಿಸುತ್ತದೆ. ನಿಶ್ಚಯವಾಗಿಯೂ ಅಲ್ಲಾಹನು ಮಹಾ ಪ್ರತಾಪಿಯೂ ಧೀಮಂತನೂ ಆಗಿರುತ್ತಾನೆ." (ಅಲ್ ಅನ್‌ಫಾಲ್: 10)

## ಮರಣ

"ಯಾವ ಜೀವಿಯೂ ಅಲ್ಲಾಹನ ಅನುಮತಿ ಹೊಂದದೆ ಸಾಯಲಾರದು."

(ಆಲಿ ಇಮ್ರಾನ್: 145)

"ತನಗೆ ಯಾವ ಭೂಭಾಗದಲ್ಲಿ ಮರಣ ಬರುವುದೆಂಬ ಅರಿವು ಯಾರಿಗೂ ಇಲ್ಲ. ನಿಶ್ಚಯವಾಗಿಯೂ ಅಲ್ಲಾಹನೇ ಸರ್ವಜ್ಞನೂ ವಿವರಪೂರ್ಣನೂ ಆಗಿರುತ್ತಾನೆ."

(ಲುಕ್‌ಮಾನ್: 34)

"ಪ್ರತಿಯೊಂದು ಜೀವಿಗೂ ಮರಣದ ಸವಿಯನ್ನು ಅನುಭವಿಸಲಿಕ್ಕಿದೆ ಮತ್ತು ನಾವು ನಿಮ್ಮೆಲ್ಲರನ್ನೂ ಸುಸ್ಥಿತಿ–ದುಸ್ಥಿತಿಗಳಲ್ಲಿಟ್ಟು ಪರೀಕ್ಷಿಸುತ್ತಿದ್ದೇವೆ. ಕೊನೆಗೆ ನೀವು ನಮ್ಮ ಕಡೆಗೇ ಮರಳಲಿದ್ದೀರಿ." (ಅಲ್ ಅಂಬಿಯಾ: 35)

"ವಾಸ್ತವದಲ್ಲಿ ಒಬ್ಬನ ಕರ್ಮಾವಧಿಯು ಪೂರ್ಣಗೊಳ್ಳುವ ಸಮಯ ಬಂದು ಬಿಟ್ಟರೆ ಅಲ್ಲಾಹನು ಯಾರಿಗೂ ಇನ್ನಷ್ಟು ಕಾಲಾವಧಿಯನ್ನು ಕೊಡುವುದಿಲ್ಲ. ನೀವು ಮಾಡುತ್ತಿರುವುದೆಲ್ಲವನ್ನು ಅಲ್ಲಾಹನು ತಿಳಿದವನಾಗಿದ್ದಾನೆ."

(ಅಲ್ ಮುನಾಫಿಕೂನ್: 11)

"ನಿಮ್ಮ ಪ್ರಭುವಿನ ಕೀರ್ತನೆಯೊಂದಿಗೆ ಅವನನ್ನು ಸ್ತುತಿಸಿರಿ. ಅವನ ಸನ್ನಿಧಿಯಲ್ಲಿ ಸಾಷ್ಟಾಂಗವೆರಗಿರಿ. ಖಂಡಿತವಾಗಿಯೂ ಬಂದೇ ತೀರುವ ಆ ಕೊನೆಯ ಘಳಿಗೆಯ ವರೆಗೂ ನಿಮ್ಮ ಪ್ರಭುವಿನ ದಾಸ್ಯ-ಆರಾಧನೆ ಮಾಡುತ್ತಲಿರಿ."

(ಅಲ್ ಹಿಜ್ರ್: 98-99)

"ಆದುದರಿಂದ ಓ ನಮ್ಮೊಡೆಯಾ, ನಮ್ಮಿಂದ ಸಂಭವಿಸಿ ಹೋಗಿದ್ದ ಅಪರಾಧಗಳನ್ನು ಕ್ಷಮಿಸು. ನಮ್ಮಲ್ಲಿರುವ ಕೆಡುಕುಗಳನ್ನು ದೂರೀಕರಿಸು ಮತ್ತು ನಮ್ಮ ಅವಸಾನವನ್ನು ಸಜ್ಜನರೊಂದಿಗೆ ಮಾಡು." (ಆಲಿ ಇಮ್ರಾನ್: 193)

## ಅಸಡ್ಡೆ

"ಆದುದರಿಂದ ಸಂದೇಶವಾಹಕರೇ, ನಮ್ಮ ಸ್ಮರಣೆಯಿಂದ ವಿಮುಖನಾಗುವವನನ್ನು ಹಾಗೂ ಲೌಕಿಕ ಜೀವನದ ಹೊರತು ಇನ್ನೇನನ್ನೂ ಬಯಸದವನನ್ನು ಅವನ ಪಾಡಿಗೆ ಬಿಟ್ಟುಬಿಡಿರಿ."

(ಅನ್ನಜ್ಮ್: 29)

"ಆ ಅಕ್ರಮಿಗಳ ಕಡೆಗೆ ಕೊಂಚವೂ ವಾಲಬೇಡಿರಿ. ಅನ್ಯಥಾ ನರಕಾಗ್ನಿಯ ಸುಳಿಯಲ್ಲಿ ಸಿಕ್ಕಿಬಿಡುವಿರಿ. ನಿಮ್ಮನ್ನು ಅಲ್ಲಾಹನಿಂದ ರಕ್ಷಿಸತಕ್ಕ ರಕ್ಷಕ ಮಿತ್ರರಾರೂ ನಿಮಗೆ ಸಿಗಲಾರರು ಮತ್ತು ನಿಮಗೆ ಎಲ್ಲಿಂದಲೂ ಸಹಾಯವೂ ಒದಗದು."

(ಹೂದ್: 113)

"ಅಲ್ಲಾಹ್ ಮತ್ತು ಪರಲೋಕದ ಮೇಲೆ ವಿಶ್ವಾಸವಿರಿಸುವವರು ಅಲ್ಲಾಹ್ ಮತ್ತು ಅವನ ಸಂದೇಶವಾಹಕರನ್ನು ವಿರೋಧಿಸಿದವರನ್ನು ಪ್ರೀತಿಸುವುದನ್ನು ನೀವೆಂದೂ ಕಾಣಲಾರಿರಿ. ಅಂತಹವರು ಅವರ ತಂದೆ, ಪುತ್ರರು, ಸಹೋದರರು ಮತ್ತು ಆಪ್ತ ಬಂಧುಗಳೇ ಆಗಿದ್ದರೂ ಸರಿಯೇ." (ಅಲ್ ಮುಜಾದಲ: 22)

"ಸತ್ಯವಿಶ್ವಾಸಿಗಳೇ, ಅಲ್ಲಾಹನ ಕ್ರೋಧಕ್ಕೊಳಗಾದವರನ್ನು ಮಿತ್ರರಾಗಿ ಮಾಡಿಕೊಳ್ಳಬೇಡಿರಿ. ಸಮಾಧಿಗಳೊಳಗೆ ಬಿದ್ದಿರುವ ಸತ್ಯನಿಷೇಧಿಗಳು ಪರಲೋಕದ ಬಗ್ಗೆ ನಿರಾಶರಾಗಿ ಬಿಟ್ಟಂತೆಯೇ ಇವರು ನಿರಾಶರಾಗಿ ಬಿಟ್ಟಿರುತ್ತಾರೆ."

(ಅಲ್ ಮುಮ್ತಹಿನ: 13)

"ಅಲ್ಲಾಹನು ಉತ್ತಮ ನಾಮಗಳಿಗೆ ಅರ್ಹನಾಗಿದ್ದಾನೆ. ಅವನನ್ನು ಉತ್ತಮ ನಾಮಗಳಿಂದಲೇ ಕರೆಯಿರಿ. ಅವನ ನಾಮಗಳನ್ನಿಡುವುದರಲ್ಲಿ ಅತಿರೇಕವೆಸಗುವವರನ್ನು ಬಿಟ್ಟುಬಿಡಿರಿ. ಅವರು ಮಾಡುವುದರ ಪ್ರತಿಫಲವನ್ನು ಅವರು ಪಡೆದೇ ತೀರುವರು."

(ಅಲ್ ಅಅ್‌ರಾಫ್: 180)

"ಜನರಿಗೆ ಇಂದ್ರಿಯಾಭಿಲಾಷೆಗಳಾದ ಸ್ತ್ರೀಯರು, ಮಕ್ಕಳು, ಚಿನ್ನ-ಬೆಳ್ಳಿಗಳ ರಾಶಿ, ಆಯ್ದ ಕುದುರೆಗಳು, ಜಾನುವಾರುಗಳು ಮತ್ತು ಕೃಷಿ ಭೂಮಿ, ಇವುಗಳನ್ನು

ಅತ್ಯಾಕರ್ಷಕವಾಗಿ ಮಾಡಲಾಗಿದೆ. ಆದರೆ, ಇವೆಲ್ಲಾ ಇಹಲೋಕದ ಕೆಲವೇ ದಿನಗಳ ಜೀವನ ಸಾಧನಗಳು. ಯಥಾರ್ಥದಲ್ಲಿ ಅತ್ಯುತ್ತಮ ವಾಸಸ್ಥಳವಂತು ಅಲ್ಲಾಹನ ಬಳಿಯಲ್ಲಿದೆ. ಹೇಳಿರಿ– ನಾನು ಇವುಗಳಿಗಿಂತಲೂ ಹೆಚ್ಚು ಉತ್ತಮವಾದುದೇನೆಂದು ನಿಮಗೆ ತಿಳಿಸಲೇ? ಧರ್ಮನಿಷ್ಠೆಯ ನಿಲುಮೆಯನ್ನು ಕೈಗೊಂಡವರಿಗೆ ಅವರ ಪ್ರಭುವಿನ ಬಳಿ ತಳಭಾಗದಲ್ಲಿ ಕಾಲುವೆಗಳು ಹರಿಯುತ್ತಿರುವ ಉದ್ಯಾನಗಳಿವೆ. ಅಲ್ಲಿ ಅವರಿಗೆ ಶಾಶ್ವತ ಜೀವನ ಪ್ರಾಪ್ತವಾಗುವುದು. ಪರಿಶುದ್ಧ ಮಡದಿಯರ ಒಡನಾಟವಿರುವುದು ಮತ್ತು ಅವರು ಅಲ್ಲಾಹನ ಸಂಪ್ರೀತಿಗೆ ಪಾತ್ರರಾಗುವರು. ಅಲ್ಲಾಹ್ ತನ್ನ ದಾಸರ ರೀತಿ–ನೀತಿಗಳನ್ನು ಸೂಕ್ಷ್ಮವಾಗಿ ಅವಲೋಕಿಸುತ್ತಾನೆ. ಅವರು, 'ಓ ನಮ್ಮ ಪ್ರಭೂ! ನಾವು ವಿಶ್ವಾಸವಿರಿಸಿದೆವು. ನಮ್ಮ ಅಪರಾಧಗಳನ್ನು ಕ್ಷಮಿಸು ಮತ್ತು ನಮ್ಮನ್ನು ನರಕಾಗ್ನಿಯಿಂದ ರಕ್ಷಿಸು' ಎಂದು ಹೇಳುವರು. ಇವರು ಸಹನೆಯುಳ್ಳವರೂ ಸತ್ಯಸಂಧರೂ ವಿಧೇಯರೂ ಉದಾರಿಗಳೂ ಆಗಿರುತ್ತಾರೆ ಮತ್ತು ರಾತ್ರೆಯ ಕೊನೆಯ ಘಳಿಗೆಯಲ್ಲಿ ಅಲ್ಲಾಹನೊಡನೆ ಪಾಪ ವಿಮೋಚನೆಗಾಗಿ ಪ್ರಾರ್ಥಿಸುತ್ತಿರುತ್ತಾರೆ." (ಆಲಿ ಇಮ್ರಾನ್: 14–17)

## ಮೋಸ

"ಈ ಲೌಕಿಕ ಜೀವನವು ಒಂದು ಆಟ ಮತ್ತು ಮನೋರಂಜನೆಯಲ್ಲದೆ ಇನ್ನೇನೂ ಅಲ್ಲ. ನೈಜ ಜೀವನ ಗೃಹವು ಪರಲೋಕ ಗೃಹವೇ ಆಗಿದೆ. ಇವರು ಅರಿಯುತ್ತಿದ್ದರೆ!" (ಅಲ್ ಅಂಕಬೂತ್: 64)

"ಈ ಲೋಕದ ಜೀವನವಂತೂ ಕೇವಲ ಭ್ರಾಮಕ ಸಂಪತ್ತಾಗಿದೆ." (ಆಲಿ ಇಮ್ರಾನ್: 185)

"ಹೆಚ್ಚುಹೆಚ್ಚಾಗಿ ಮತ್ತು ಇತರರಿಗಿಂತ ಅಧಿಕವಾಗಿ ಸಂಪಾದಿಸುವ ಚಿಂತೆಯು ನಿಮ್ಮನ್ನು ಅನಾಸ್ಥೆಗೆ ಒಳಪಡಿಸಿ ಬಿಟ್ಟಿದೆ. ಕೊನೆಗೆ (ಇದೇ ಚಿಂತೆಯಲ್ಲಿ) ನೀವು ಗೋರಿಯ ಅಂಚನ್ನು ತಲಪುತ್ತೀರಿ. ಖಂಡಿತ ಅಲ್ಲ. ಸದ್ಯವೇ ನಿಮಗೆ ತಿಳಿಯಲಿದೆ. ಇನ್ನೂ (ಕೇಳಿರಿ) ಖಂಡಿತ ಅಲ್ಲ. ಸದ್ಯವೇ ನಿಮಗೆ ತಿಳಿಯಲಿದೆ. ಖಂಡಿತ ಅಲ್ಲ, ನೀವು ಖಚಿತ ಜ್ಞಾನದ ಆಧಾರದಲ್ಲಿ (ಈ ಪ್ರವೃತ್ತಿಯ ಪರಿಣಾಮವನ್ನು) ತಿಳಿದಿರುತ್ತಿದ್ದರೆ! (ನಿಮ್ಮ ವರ್ತನೆ ಹೀಗಿರುತ್ತಿರಲಿಲ್ಲ.) ನೀವು ನರಕವನ್ನು ಕಂಡೇ ತೀರುವಿರಿ. ಇನ್ನೂ (ಕೇಳಿರಿ) ನೀವು ಸಂಪೂರ್ಣ ಅರಿವಿನೊಂದಿಗೆ ಅದನ್ನು ನೋಡುವಿರಿ. ಆ ಬಳಿಕ ಖಂಡಿತವಾಗಿಯೂ ಈ ಅನುಗ್ರಹಗಳ ಬಗ್ಗೆ ನೀವು ಪ್ರಶ್ನಿಸಲ್ಪಡುವಿರಿ." (ಅತ್ತಕಾಸುರ್: 1–8)

"ಚೆನ್ನಾಗಿ ತಿಳಿದುಕೊಳ್ಳಿರಿ! ಈ ಲೌಕಿಕ ಜೀವನವು ಕೇವಲ ಒಂದು ಆಟ, ವಿನೋದ, ತೋರಿಕೆಯ ವೈಭವ, ಪರಸ್ಪರರ ಮೇಲೆ ಹಿರಿಮೆ ಸಾಧಿಸುವ ಪ್ರಯತ್ನ

ಮತ್ತು ಸಂಪತ್ತು ಹಾಗೂ ಸಂತಾನದ ವಿಷಯೆದಲ್ಲಿ ಪರಸ್ಪರರನ್ನು ಮೀರಿ ಹೋಗುವ ಪೈಪೋಟಿ ಮಾತ್ರವಲ್ಲದೆ ಇನ್ನೇನೂ ಅಲ್ಲ. ಇದರ ಉಪಮೆ ಹೀಗಿದೆ: ಒಂದು ಮಳೆ ಬಂದೊಡನೆ ಅದರಿಂದಾಗಿ ಹುಟ್ಟುವ ಸಸ್ಯಗಳನ್ನು ಕಂಡು ಕೃಷಿಕರು ಸಂತೋಷಗೊಂಡರು. ತರುವಾಯ ಅದೇ ಬೆಳೆಯು ಬಲಿತಾಗ ಅದು ಹಳದಿಯಾಗಿ ಬಿಟ್ಟದ್ದನ್ನು ನೀವು ಕಾಣುತ್ತೀರಿ. ಅನಂತರ ಅದು ಹೊಟ್ಟಾಗಿ ಬಿಡುತ್ತದೆ. ಇದಕ್ಕೆ ವ್ಯತಿರಿಕ್ತವಾಗಿ ಪರಲೋಕವು ಕಠಿಣ ಯಾತನೆ ಇರುವ ಮತ್ತು ಅಲ್ಲಾಹನ ಕ್ಷಮೆ ಹಾಗೂ ಸಂಪ್ರೀತಿ ಇರುವ ಸ್ಥಳವಾಗಿದೆ. ಲೌಕಿಕ ಜೀವನವು ಒಂದು ವಂಚನೆಯ ಸಾಧನವಲ್ಲದೆ ಮತ್ತೇನೂ ಅಲ್ಲ." (ಅಲ್ ಹದೀದ್: 20)

## ಅಲ್ಲಾಹನು ಎಲ್ಲರ ಸೃಷ್ಟಿಕರ್ತ ಮತ್ತು ಪರಮ ಸತ್ಯನಾಗಿದ್ದಾನೆ

"ಅವನಂತೂ ಮಹಾ ನಿಪುಣ ಸೃಷ್ಟಿಕರ್ತನಾಗಿದ್ದಾನೆ. ಅವನು ಯಾವುದಾದರೊಂದು ವಿಷಯದ ಸಂಕಲ್ಪ ಮಾಡಿದಾಗ ಅದಕ್ಕೆ 'ಆಗಿಬಿಡು' ಎಂಬ ಅಪ್ಪಣೆ ಕೊಡುವುದೇ ತಡ, ಅದು ಆಗಿಬಿಡುತ್ತದೆ. ಸಕಲ ವಸ್ತುಗಳ ಮೇಲೆ ಸಂಪೂರ್ಣ ಅಧಿಕಾರವಿರುವವನು ಪರಮ ಪಾವನನು ಮತ್ತು ನೀವು ಅವನ ಕಡೆಗೇ ಮರಳಿಸಲ್ಪಡಲಿರುವಿರಿ." (ಯಾಸೀನ್: 81–83)

"ಅಲ್ಲಾಹನು ಆಕಾಶಗಳನ್ನೂ ಭೂಮಿಯನ್ನೂ ಅವುಗಳ ನಡುವೆ ಇರುವುದೆಲ್ಲವನ್ನೂ ಸತ್ಯಪೂರ್ಣವಾಗಿ ಮತ್ತು ಒಂದು ನಿರ್ದಿಷ್ಟ ಕಾಲಾವಧಿಗಾಗಿಯೇ ಸೃಷ್ಟಿಸಿದ್ದಾನೆ. ಆದರೆ ಅನೇಕರು ತಮ್ಮ ಪ್ರಭುವಿನ ಭೇಟಿಯನ್ನು ನಿರಾಕರಿಸುವವರಾಗಿರುತ್ತಾರೆ."
(ಅರ್ರೂಮ್: 8)

"ರಾತ್ರಿಯನ್ನು ನಿಮಗೆ ಉಡುಪಾಗಿಯೂ ನಿದ್ದೆಯನ್ನು ಪ್ರಶಾಂತಿಯಾಗಿಯೂ ಹಗಲನ್ನು ಎದ್ದೇಳುವ ಸಮಯವಾಗಿಯೂ ಮಾಡಿದವನು ಅಲ್ಲಾಹನೇ ಆಗಿರುತ್ತಾನೆ."
(ಅಲ್ ಫುರ್‌ಕಾನ್: 47)

"ಸರ್ವ ಪ್ರಶಂಸೆಗಳು ಅಲ್ಲಾಹನಿಗೆ ಮೀಸಲು. ಅವನು ಭೂಮಿ–ಆಕಾಶಗಳ ಸೃಷ್ಟಿಕರ್ತನು. ಎರಡೆರಡು, ಮೂರು ಮೂರು, ಹಾಗೂ ನಾಲ್ಕು ನಾಲ್ಕು ರೆಕ್ಕೆಗಳಿರುವ ದೇವಚರರನ್ನು ದೂತರನ್ನಾಗಿ ನೇಮಿಸುವವನು. ಅವನು ತನ್ನ ಸೃಷ್ಟಿಯ ರಚನೆಯಲ್ಲಿ ತಾನಿಚ್ಛಿಸುವಂತೆ ವೃದ್ಧಿಯನ್ನು ಮಾಡುತ್ತಾನೆ. ನಿಶ್ಚಯವಾಗಿಯೂ ಅಲ್ಲಾಹನು ಪ್ರತಿಯೊಂದು ಕಾರ್ಯಕ್ಕೂ ಸಾಮರ್ಥ್ಯವುಳ್ಳವನು. ಅಲ್ಲಾಹನು ಜನರಿಗಾಗಿ ಯಾವ ಕೃಪಾದ್ವಾರವನ್ನು ತೆರೆದರೂ ಅವನನ್ನು ಯಾರೂ ತಡೆಯುವವನಿಲ್ಲ. ಅವನು ಯಾವುದನ್ನು ಮುಚ್ಚಿಬಿಟ್ಟನೋ ಅವನ ಹೊರತು ಇನ್ನಾರೂ ಅದನ್ನು ತೆರೆಯುವವನಿಲ್ಲ. ಅವನು ಅತ್ಯಂತ ಪ್ರಬಲನೂ ಯುಕ್ತಿಪೂರ್ಣನೂ ಆಗಿರುತ್ತಾನೆ."
(ಫಾತಿರ್: 1–2)

## ಅಲ್ಲಾಹನು ಸಜ್ಜನರನ್ನು ಪ್ರೀತಿಸುತ್ತಾನೆ

"ಅಲ್ಲಾಹನೇ ಭೂಮಿ-ಆಕಾಶಗಳ ಸಕಲ ವಸ್ತುಗಳ ಒಡೆಯನು. (ಇದು) ದುಷ್ಕರ್ಮಿಗಳಿಗೆ ಅಲ್ಲಾಹನು ಅವರ ಕರ್ಮಗಳ ಪ್ರತಿಫಲ ನೀಡುವಂತಾಗಲಿಕ್ಕಾಗಿ ಮತ್ತು ಉತ್ತಮ ಧೋರಣೆ ಅನುಸರಿಸಿದವರಿಗೆ ಉತ್ತಮ ಪ್ರತಿಫಲ ದಯಪಾಲಿಸು ವಂತಾಗಲಿಕ್ಕಾಗಿ. ಅವರು ದೊಡ್ಡ ದೊಡ್ಡ ಪಾಪ ಕೃತ್ಯಗಳಿಂದ ಮತ್ತು ಬಹಿರಂಗವಾದ ಲಜ್ಜಾಸ್ಪದ ಕೃತ್ಯಗಳಿಂದ ದೂರವಿರುತ್ತಾರೆ. ಅಲ್ಪಸ್ವಲ್ಪ ನ್ಯೂನತೆಗಳು ಅವರಿಂದ ಸಂಭವಿಸಿದರೆ ಅದು ಇದಕ್ಕೆ ಹೊರತಾಗಿದೆ. ನಿಸ್ಸಂದೇಹವಾಗಿಯೂ ನಿಮ್ಮ ಪ್ರಭು ವಿನ ಕ್ಷಮಾಶೀಲತೆಯು ಬಹಳ ವಿಶಾಲವಾಗಿದೆ. ಅವನು ನಿಮ್ಮನ್ನು ಭೂಮಿಯಿಂದ ಸೃಷ್ಟಿಸಿದನು ಹಾಗೂ ನೀವು ನಿಮ್ಮ ಮಾತೆಯರ ಉದರಗಳಲ್ಲಿ ಭ್ರೂಣಾವಸ್ಥೆಯಲ್ಲಿದ್ದ ಕಾಲದಿಂದಲೇ ಅವನು ನಿಮ್ಮನ್ನು ಚೆನ್ನಾಗಿ ಬಲ್ಲನು. ಆದುದರಿಂದ ನೀವು ನಿಮ್ಮ ಆತ್ಮಶುದ್ಧತೆಯ ಬಗ್ಗೆ ಹೇಳಿಕೊಳ್ಳಬೇಡಿರಿ. ನಿಜವಾದ ಧರ್ಮನಿಷ್ಠನು ಯಾರೆಂಬುದನ್ನು ಅವನೇ ಹೆಚ್ಚು ಬಲ್ಲನು." (ಅನ್ನಜ್ಮ್: 31–32)

"ಪ್ರತಿಯೊಬ್ಬನಿಗೂ ಅವನು ಮುಖಮಾಡುವ ದಿಕ್ಕೊಂದಿದೆ. ನೀವಂತು ಸತ್ಕರ್ಮಗಳ ದಿಕ್ಕಿಗೆ ಮುನ್ನಡೆಯಿರಿ. ನೀವೆಲ್ಲಿದ್ದರೂ ಅಲ್ಲಾಹನು ನಿಮ್ಮೆಲ್ಲರನ್ನೂ ಮರಳಿ ತರುವನು. ಅವನ ಅಧಿಕಾರ ವ್ಯಾಪ್ತಿಯಿಂದ ಯಾವುದೂ ಹೊರಗಿಲ್ಲ." (ಅಲ್ ಬಕರ: 148)

"ಅಂತಿಮವಾಗಿ ತಲುಪಲಿಕ್ಕಿರುವುದು ನಿಮ್ಮ ಪ್ರಭುವಿನ ಕಡೆಗೇ ಆಗಿದೆ. ಅವನೇ ನಗಿಸಿದನು ಮತ್ತು ಅವನೇ ಅಳುವಂತೆ ಮಾಡಿದನು. ಅವನೇ ಮರಣ ಕೊಟ್ಟನು ಮತ್ತು ಅವನೇ ಜೀವಂತಗೊಳಿಸಿದನು. ಒಂದು ಹನಿಯು ತೊಟ್ಟಿಕ್ಕುವಾಗ, ಅವನೇ ಅದರಿಂದ ಗಂಡು ಮತ್ತು ಹೆಣ್ಣುಗಳ ಜೊತೆಯನ್ನುಂಟು ಮಾಡಿದನು. ಇನ್ನೊಂದು ಜೀವನ ಪ್ರದಾನ ಮಾಡುವುದೂ ಅವನ ಹೊಣೆಗಾರಿಕೆಯಾಗಿದೆ. ಅವನೇ ಶ್ರೀಮಂತಗೊಳಿಸಿದನು ಮತ್ತು ಆಸ್ತಿಪಾಸ್ತಿ ನೀಡಿದನು." (ಅನ್ನಜ್ಮ್: 42–48)

"ನಿಮ್ಮ ಪ್ರಭುವಿನ ಕ್ಷಮೆಯ ಕಡೆಗೆ ಮತ್ತು ಭೂಮಿ-ಆಕಾಶಗಳಷ್ಟು ವಿಶಾಲವಾಗಿ ರುವ ಸ್ವರ್ಗದ ಕಡೆಗೆ ಧಾವಿಸಿರಿ. ಅದು ದೇವಭಯವುಳ್ಳವರಿಗಾಗಿ ಸಿದ್ಧಗೊಳಿಸಲ್ಪಟ್ಟಿ ರುತ್ತದೆ. ಅವರು ಸ್ಥಿತಿವಂತರಾಗಿರುವಾಗಲೂ ದುಸ್ಥಿತಿಯಲ್ಲಿರುವಾಗಲೂ ತಮ್ಮ ಸಂಪತ್ತನ್ನು ಖರ್ಚು ಮಾಡುತ್ತಾರೆ, ಕೋಪವನ್ನು ನುಂಗಿಕೊಳ್ಳುತ್ತಾರೆ ಮತ್ತು ಇತರರ ಅಪರಾಧಗಳನ್ನು ಕ್ಷಮಿಸುತ್ತಾರೆ. ಇಂತಹ ಸಜ್ಜನರು ಅಲ್ಲಾಹನಿಗೆ ಅತ್ಯಂತ ಮೆಚ್ಚುಗೆ ಯವರು. ಅವರಿಂದ ಎಂದಾದರೂ ಯಾವುದಾದರೂ ಅಶ್ಲೀಲ ಕಾರ್ಯಗಳು ಸಂಭವಿಸಿ ಹೋದಾಗ ಅಥವಾ ಅವರು ಯಾವುದಾದರೂ ಪಾಪ ಕಾರ್ಯ ಮಾಡಿ

ತಮ್ಮ ಮೇಲೆ ತಾವೇ ಅಕ್ರಮವೆಸಗಿಕೊಂಡಾಗ ಅವರಿಗೆ ತಕ್ಷಣವೇ ಅಲ್ಲಾಹನ ಸ್ಮರಣೆ ಯುಂಟಾಗಿ ಬಿಡುತ್ತದೆ ಮತ್ತು ಅವರು ಅವನೊಡನೆ ತಮ್ಮ ಅಪರಾಧಗಳಿಗೆ ಕ್ಷಮೆ ಯಾಚಿಸುತ್ತಾರೆ– ಅಲ್ಲಾಹನ ಹೊರತು ಪಾಪಗಳನ್ನು ಕ್ಷಮಿಸುವವರು ಇನ್ನಾರಿದ್ದಾರೆ? ಮತ್ತು ಅವರು ತಿಳಿದೂ ತಿಳಿದೂ ತಾವು ಮಾಡಿದ ಅಪರಾಧದ ಬಗ್ಗೆ ಪಟ್ಟು ಹಿಡಿಯುವುದಿಲ್ಲ. ಅಂಥವರಿಗೆ ಅವರ ಪ್ರಭುವಿನ ಬಳಿ ಇರುವ ಪ್ರತಿಫಲವು ಕ್ಷಮೆ ಮತ್ತು ತಳಭಾಗದಲ್ಲಿ ಕಾಲುವೆಗಳು ಹರಿಯುತ್ತಿರುವ ಉದ್ಯಾನಗಳಾಗಿವೆ. ಅಲ್ಲಿ ಅವರು ಸದಾಕಾಲವೂ ವಾಸಿಸುವರು. ಸತ್ಕರ್ಮ ಮಾಡುವವರಿಗೆ ಇರುವ ಪ್ರತಿಫಲವು ಎಷ್ಟೊಂದು ಉತ್ತಮ." (ಆಲಿ ಇಮ್ರಾನ್: 133–136)

"ತಮ್ಮ ಪಾವಿತ್ರ್ಯದ ಕುರಿತು ಅತಿಯಾಗಿ ಹಿಗ್ಗುವವರನ್ನೂ ನೀವು ನೋಡಿದಿರಾ? ವಸ್ತುತಃ ಪಾವಿತ್ರ್ಯವನ್ನು ಅಲ್ಲಾಹನೇ ತಾನಿಚ್ಛಿಸಿದವರಿಗೆ ದಯಪಾಲಿಸುತ್ತಾನೆ ಮತ್ತು (ಇವರಿಗೆ ಪಾವಿತ್ರ್ಯ ಒದಗುತ್ತಿಲ್ಲವಾದರೆ ವಾಸ್ತವದಲ್ಲಿ) ಇವರ ಮೇಲೆ ಕಿಂಚಿತ್ತೂ ಅನ್ಯಾಯವಾಗುತ್ತಿಲ್ಲ." (ಅನ್ನಿಸಾ: 49)

"ಮುಸ್ಲಿಮರಿರಲಿ, ಯಹೂದಿಯರಿರಲಿ, 'ಸಾಬೀ'ಗಳಿರಲಿ, ಕ್ರೈಸ್ತರಿರಲಿ ಯಾರೇ ಇರಲಿ ಯಾರು ಅಲ್ಲಾಹನ ಮೇಲೆ ಮತ್ತು ಅಂತಿಮ ದಿವಸದ ಮೇಲೆ ವಿಶ್ವಾಸವಿರಿಸಿ ಕೊಂಡು ಸತ್ಕರ್ಮಗಳನ್ನು ಮಾಡುತ್ತಾ ಇರುವನೋ ಅವನಿಗೆ ನಿಶ್ಚಯವಾಗಿಯೂ ಯಾವ ಭಯವೂ ಇಲ್ಲ ವ್ಯಥೆಯೂ ಇಲ್ಲ." (ಅಲ್ ಮಾಇದ: 69)

"ಸತ್ಯವಿಶ್ವಾಸವಿರಿಸಿ ಸತ್ಕರ್ಮವನ್ನು ಕೈಗೊಳ್ಳತೊಡಗಿದವರು ಹಿಂದೆ ಏನನ್ನು ಉಂಡಿದ್ದರೂ ಅಥವಾ ಕುಡಿದಿದ್ದರೂ ಮುಂದೆ 'ನಿಷಿದ್ಧ' ಎಂದು ವಿಧಿಸಲ್ಪಟ್ಟ ವಸ್ತುಗಳಿಂದ ದೂರವಿದ್ದರೆ ಹಾಗೂ ಸತ್ಯವಿಶ್ವಾಸದಲ್ಲೇ ಸ್ಥಿರವಾಗಿದ್ದರೆ, ಸತ್ಕರ್ಮಗಳನ್ನು ಮಾಡಿದರೆ, ಅನಂತರ ಯಾವ ಯಾವ ವಸ್ತುವಿನಿಂದ ತಡೆಯಲಾಗುವುದೋ ಅದರಿಂದ ತಡೆದು ನಿಂತರೆ, ಅಲ್ಲಾಹನ ಆಜ್ಞೆಯನ್ನು ಸ್ವೀಕರಿಸಿದರೆ ಮತ್ತು ಆ ಬಳಿಕ ದೇವಭಯದೊಂದಿಗೆ ಪುಣ್ಯ ಕಾರ್ಯಗಳಲ್ಲಿ ನಿರತರಾದರೆ ದೋಷವಿಲ್ಲ. ಅಲ್ಲಾಹನು ಸಜ್ಜನರನ್ನು ಪ್ರೀತಿಸುತ್ತಾನೆ." (ಅಲ್ ಮಾಇದ: 93)

"ಓ ಸಂದೇಶವಾಹಕರೇ! ಅವರೊಡನೆ ಹೇಳಿರಿ– ಅಶುದ್ಧದ ಹೆಚ್ಚಳವು ನಿಮಗೆ ಎಷ್ಟು ಮೋಹಕವಾಗಿ ಕಂಡರೂ ಶುದ್ಧ ಮತ್ತು ಅಶುದ್ಧಗಳು ಎಷ್ಟಕ್ಕೂ ಸಮಾನವಲ್ಲ. ಆದುದರಿಂದ ಓ ಬುದ್ಧಿಜೀವಿಗಳೇ! ಅಲ್ಲಾಹನ ಆಜ್ಞೋಲ್ಲಂಘನೆಯಿಂದ ದೂರವಿರಿ. ಇದರಿಂದ ನಿಮಗೆ ವಿಜಯ ಪ್ರಾಪ್ತವಾಗಬಹುದೆಂದು ನಿರೀಕ್ಷಿಸಬಹುದು." (ಅಲ್ ಮಾಇದ: 100)

"ಜನರೇ, ನಾವು ನಿಮ್ಮನ್ನು ಒಬ್ಬ ಪುರುಷ ಮತ್ತು ಒಬ್ಬ ಸ್ತ್ರೀಯಿಂದ ಉಂಟು ಮಾಡಿದೆವು. ತರುವಾಯ ನೀವು ಪರಸ್ಪರ ಪರಿಚಯ ಪಟ್ಟುಕೊಳ್ಳಲಿಕ್ಕಾಗಿ ನಿಮ್ಮ

ಜನಾಂಗಗಳನ್ನೂ ಗೋತ್ರಗಳನ್ನೂ ಮಾಡಿದೆವು. ನಿಮ್ಮ ಪೈಕಿ ಅತ್ಯಧಿಕ ಧರ್ಮನಿಷ್ಠನೇ ವಾಸ್ತವದಲ್ಲಿ ಅಲ್ಲಾಹನ ಬಳಿ ಹೆಚ್ಚು ಗೌರವಕ್ಕೆ ಪಾತ್ರನು. ನಿಶ್ಚಯವಾಗಿಯೂ ಅಲ್ಲಾಹನು ಸರ್ವಜ್ಞನೂ ವಿವರಪೂರ್ಣನೂ ಆಗಿರುತ್ತಾನೆ."

(ಅಲ್ ಹುಜುರಾತ್: 13)

"ಅಲ್ಲಾಹನು ನಿಮಗೆ ಸತ್ಯವಿಶ್ವಾಸವನ್ನು ಪ್ರಿಯಗೊಳಿಸಿದನು. ಅದನ್ನು ನಿಮ್ಮ ಮನಸ್ಸಿಗೆ ಆಕರ್ಷಕವಾಗಿ ಮಾಡಿದನು ಮತ್ತು ಸತ್ಯನಿಷೇಧ, ಕರ್ಮಭ್ರಷ್ಟತೆ ಹಾಗೂ ಆಜ್ಞೋಲ್ಲಂಘನೆಯ ಬಗ್ಗೆ ನೀವು ಜಿಗುಪ್ಸೆ ತಾಳುವಂತೆ ಮಾಡಿದನು. ಇಂತಹವರೇ ಅಲ್ಲಾಹನ ಅನುಗ್ರಹ ಹಾಗೂ ಕೃಪೆಯಿಂದ ಸನ್ಮಾರ್ಗಗಾಮಿಗಳಾಗಿರುವರು. ಅಲ್ಲಾಹನು ಸರ್ವಜ್ಞನೂ ಯುಕ್ತಿವಂತನೂ ಆಗಿರುತ್ತಾನೆ." (ಅಲ್ ಹುಜುರಾತ್: 7–8)

## ಮೇರೆ ಮೀರದಿರಿ

"ಓ ಸತ್ಯವಿಶ್ವಾಸಿಗಳೇ! ಅಲ್ಲಾಹನು ನಿಮಗೆ 'ಧರ್ಮಸಮ್ಮತ'ಗೊಳಿಸಿರುವ ಶುದ್ಧ ವಸ್ತುವನ್ನು ನಿಷಿದ್ಧ ಮಾಡಿಕೊಳ್ಳಬೇಡಿರಿ ಮತ್ತು ಹದಮೀರಬೇಡಿರಿ. ಅಲ್ಲಾಹನಿಗೆ, ಅತಿರೇಕವೆಸಗುವವರು ಎಷ್ಟು ಮಾತ್ರಕ್ಕೂ ಮೆಚ್ಚುಗೆಯವರಲ್ಲ."

(ಅಲ್ ಮಾಇದ: 87)

"ಅಲ್ಲಾಹನ ಮೇರೆಗಳನ್ನು ಮೀರುವವನು ತನ್ನ ಮೇಲೆ ತಾನೇ ಅಕ್ರಮ ವೆಸಗುವನು."

(ಅತ್ತಲಾಕ್: 1)

"ಮತ್ತು ನೀವು ಅಲ್ಲಾಹನ ಕಾರ್ಯವಿಧಾನದಲ್ಲಿ ಯಾವ ಬದಲಾವಣೆಯನ್ನೂ ಕಾಣಲಾರಿರಿ."

(ಅಲ್ ಫತಹ್: 23)

"ಅಲ್ಲಾಹನ ಆಜ್ಞೆಯಂತು ಜಾರಿಗೆ ಬಂದೇ ತೀರಬೇಕಿತ್ತು."

(ಅಲ್ ಅಹ್‌ಝಾಬ್: 37)

"ಅಲ್ಲಾಹನ ವಚನಗಳನ್ನು ಬದಲಾಯಿಸುವ ಶಕ್ತಿ ಯಾರಲ್ಲೂ ಇಲ್ಲ."

(ಅಲ್ ಅನ್‌ಆಮ್: 34)

"ನಿಮ್ಮ ಪ್ರಭುವಿನ ವಚನವು ಸತ್ಯ ಮತ್ತು ನ್ಯಾಯದ ದೃಷ್ಟಿಯಿಂದ ಪರಿಪೂರ್ಣವಾಗಿದೆ." (ಅಲ್ ಅನ್‌ಆಮ್: 115)

"ಕೇಳಿರಿ! ನಿಶ್ಚಯವಾಗಿಯೂ ಅಲ್ಲಾಹನ ಮಿತ್ರರಾಗಿರುವವರಿಗೆ, ಸತ್ಯವಿಶ್ವಾಸವಿರಿಸಿ ಕೊಂಡವರಿಗೆ ಮತ್ತು ಧರ್ಮನಿಷ್ಠೆಯ ನಿಲುಮೆಯನ್ನಿರಿಸಿಕೊಂಡವರಿಗೆ ಯಾವತ್ತೂ ಭಯ ಮತ್ತು ವ್ಯಥೆಯ ಸಂಭವವೇ ಇಲ್ಲ. ಇಹ–ಪರ ಜೀವನಗಳೆರಡರಲ್ಲೂ ಅವರಿಗೆ ಭಾರೀ ಶುಭವಾರ್ತೆ ಇದೆ. ಅಲ್ಲಾಹನ ವಚನಗಳು ಬದಲಾಗುವಂತಿಲ್ಲ. ಇದುವೇ ಅತಿ ಹಿರಿದಾದ ಯಶಸ್ಸು." (ಯೂನುಸ್: 62–64)

"ಓ ಸತ್ಯವಿಶ್ವಾಸಿಗಳೇ! ನಿರ್ಬಂಧಗಳನ್ನು ಕಟ್ಟುನಿಟ್ಟಾಗಿ ಪಾಲಿಸಿರಿ."

(ಅಲ್ ಮಾಇದ: 1)

"ಸತ್ಯವಿಶ್ವಾಸಿಗಳೇ, ನೀವು ಮಾಡದ್ದನ್ನು ಆಡುತ್ತೀರೇಕೆ? ಮಾಡದ್ದನ್ನು ಆಡುವುದು ಅಲ್ಲಾಹನ ಬಳಿ ಅತ್ಯಂತ ಅಪ್ರಿಯ ಕೃತ್ಯವಾಗಿದೆ." (ಅಸ್ಸಫ್ಫ್: 2–3)

"ನೀವು ಇತರರಿಗೆ ಸನ್ಮಾರ್ಗವನ್ನು ಅನುಸರಿಸಲು ಉಪದೇಶ ನೀಡುತ್ತೀರಿ. ಆದರೆ ನಿಮ್ಮನ್ನು ನೀವು ಮರೆತೇ ಬಿಡುತ್ತೀರಾ? ವಸ್ತುತಃ ನೀವು ದಿವ್ಯಗ್ರಂಥವನ್ನು ಪಠಿಸುತ್ತೀರಿ. ನೀವು ಒಂದಿಷ್ಟು ಯೋಚಿಸುವುದಿಲ್ಲವೇ?" (ಅಲ್ ಬಕರ: 44)

"ಪುಣ್ಯ ಹಾಗೂ ದೇವಭಯದ ಕಾರ್ಯಗಳಲ್ಲಿ ಎಲ್ಲರ ಜೊತೆ ಸಹಕರಿಸಿರಿ ಮತ್ತು ಪಾಪ ಹಾಗೂ ಅತಿರೇಕ ಕಾರ್ಯಗಳಲ್ಲಿ ಯಾರೊಂದಿಗೂ ಸಹಕರಿಸಬೇಡಿರಿ. ಅಲ್ಲಾಹನನ್ನು ಭಯಪಡಿರಿ. ಅವನ ಶಿಕ್ಷೆಯು ಅತ್ಯಂತ ಕಠಿಣವಾಗಿರುತ್ತದೆ."

(ಅಲ್ ಮಾಇದ: 2)

"ಅಲ್ಲಾಹನು ನಿಮ್ಮಲ್ಲಿ ಕೆಲವರಿಗೆ ಇನ್ನು ಕೆಲವರಿಗಿಂತ ಅಧಿಕವಾಗಿ ನೀಡಿದ್ದರೆ ಅದಕ್ಕಾಗಿ ಆಶೆ ಪಡಬೇಡಿರಿ. ಪುರುಷರು ಗಳಿಸಿದುದಕ್ಕನುಸಾರವಾದ ಪಾಲು ಅವರಿಗಿದೆ. ಸ್ತ್ರೀಯರು ಗಳಿಸಿದುದಕ್ಕನುಸಾರವಾದ ಪಾಲು ಅವರಿಗಿದೆ. ಅಲ್ಲಾಹನೊಡನೆ ಅವನ ಅನುಗ್ರಹವನ್ನು ಯಾಚಿಸುತ್ತಲಿರಿ. ನಿಶ್ಚಯವಾಗಿಯೂ ಅಲ್ಲಾಹನು ಎಲ್ಲ ಸಂಗತಿಗಳ ಅರಿವುಳ್ಳವನಾಗಿರುತ್ತಾನೆ." (ಅನ್ನಿಸಾ: 32)

"ಅಳತೆ ಪಾತ್ರೆಯನ್ನು ಸರಿಯಾಗಿ ತುಂಬಿರಿ ಮತ್ತು ಯಾರಿಗೂ ಕಡಿಮೆ ಕೊಡಬೇಡಿರಿ. ಸರಿಯಾದ ತಕ್ಕಡಿಯಲ್ಲಿ ತೂಗಿರಿ. ಜನರಿಗೆ ಅವರ ವಸ್ತುಗಳನ್ನು ಕಡಿತಗೊಳಿಸಿ ಕೊಡಬೇಡಿರಿ ಮತ್ತು ಭೂಮಿಯಲ್ಲಿ ಗೊಂದಲವನ್ನು ಹರಡುತ್ತಿರಬೇಡಿರಿ. ನಿಮ್ಮನ್ನೂ ಗತಪೀಳಿಗೆಗಳನ್ನೂ ಸೃಷ್ಟಿಸಿದಾತನನ್ನು ಭಯಪಡಿರಿ."

(ಅಶ್ಶುಅರಾ: 181–184)

"ಅಲ್ಲಾಹನು ಸೀಮೋಲ್ಲಂಘನೆಯನ್ನು ಮಾಡದವರೊಂದಿಗೆ ಮಾತ್ರವಿರುತ್ತಾನೆಂಬುದನ್ನು ನೀವು ತಿಳಿದಿರಬೇಕು." (ಅಲ್ ಬಕರ: 194)

"ಅಲ್ಲಾಹನ ಮಾರ್ಗದಿಂದ ಜನರನ್ನು ತಡೆಯುತ್ತಿದ್ದ, ಅದನ್ನು ಜಟಿಲಗೊಳಿಸಲು ಯತ್ನಿಸುತ್ತಿದ್ದ ಹಾಗೂ ಪರಲೋಕವನ್ನು ನಿಷೇಧಿಸುತ್ತಿದ್ದ ಅಕ್ರಮಿಗಳ ಮೇಲೆ ಅಲ್ಲಾಹನ ಶಾಪವಿದೆ." (ಅಲ್ ಅಅ್‌ರಾಫ್: 44–45)

"ಓ ಆದಮರ ಸಂತತಿಯೇ! ನಾವು ನಿಮ್ಮ ದೇಹದ ಲಜ್ಜಾಭಾಗಗಳನ್ನು ಮರೆಸಲಿಕ್ಕಾಗಿಯೂ ನಿಮ್ಮ ದೇಹದ ರಕ್ಷಣೆ ಹಾಗೂ ಅಲಂಕಾರದ ಸಾಧನವಾಗಿಯೂ ನಿಮ್ಮ ಮೇಲೆ ಉಡುಪನ್ನು ಇಳಿಸಿರುತ್ತೇವೆ. ಧರ್ಮನಿಷ್ಠೆಯು ಅತ್ಯುತ್ತಮ ಉಡುಪಾಗಿ

ರುತ್ತದೆ. ಇದು ಅಲ್ಲಾಹನ ಕುರುಹುಗಳಲ್ಲೊಂದಾಗಿರುತ್ತದೆ. ಜನರು ಇದರಿಂದ ಪಾಠ ಪಡೆಯಲೂ ಬಹುದು." (ಅಲ್ ಅಲ್‌ರಾಫ್: 26)

"ನೀವು ಪ್ರತ್ಯಕ್ಷ ಮತ್ತು ಪರೋಕ್ಷ ಪಾಪಕಾರ್ಯಗಳಿಂದ ದೂರವಿರಿ. ಪಾಪ ಗಳಿಸುವವರು ತಮ್ಮ ಗಳಿಕೆಯ ಪ್ರತಿಫಲ ಪಡೆದೇ ತೀರುವರು."

(ಅಲ್ ಅನ್‌ಆಮ್: 120)

"ಧರ್ಮನಿಷ್ಠರಿಗಾಗಿ ನಿಶ್ಚಯವಾಗಿಯೂ ಅತ್ಯುತ್ತಮ ನಿವಾಸವಿದೆ."

(ಸ್ವಾದ್: 49)

"ವಿದ್ರೋಹಿಗಳಿಗೆ ಅತ್ಯಂತ ನಿಕೃಷ್ಟ ನಿವಾಸವಿದೆ." (ಸ್ವಾದ್: 55)

"ದುಂದುವೆಚ್ಚ ಮಾಡಬೇಡಿರಿ. ದುಂದುಗಾರರು ಶೈತಾನನ ಸೋದರರಾಗಿರುತ್ತಾರೆ ಮತ್ತು ಶೈತಾನನು ತನ್ನ ಪ್ರಭುವಿಗೆ ಕೃತಘ್ನನು." (ಬನೀ ಇಸ್ರಾಯೀಲ್: 27)

## ಆಜ್ಞೆಗಳು

"ಒಬ್ಬ ಮಾನವನ ಕೊಲೆಯ ಬದಲಿಗೆ ಅಥವಾ ಭೂಮಿಯಲ್ಲಿ ಕ್ಷೋಭೆಯನ್ನುಂಟು ಮಾಡುವ ಕಾರಣಕ್ಕಾಗಿ ಹೊರತು ಯಾರಾದರೂ ಒಬ್ಬ ಮನುಷ್ಯನನ್ನು ವಧಿಸಿದರೆ ಅವನು ಸಕಲ ಮಾನವಕೋಟಿಯನ್ನೇ ವಧಿಸಿದಂತೆ ಮತ್ತು ಒಬ್ಬನು ಇನ್ನೊಬ್ಬನಿಗೆ ಜೀವದಾನ ಮಾಡಿದರೆ ಅವನು ಸಕಲ ಮಾನವಕೋಟಿಗೆ ಜೀವದಾನ ಮಾಡಿದಂತೆ." (ಅಲ್ ಮಾಇದ: 32)

"ಅಲ್ಲಾಹನು ಸನ್ಮಾನಿಸಿರುವ ಜೀವವನ್ನು ನ್ಯಾಯದಿಂದಲ್ಲದೆ ಹರಣ ಮಾಡಬೇಡಿರಿ. ಅಕ್ರಮವಾಗಿ ವಧಿಸಲ್ಪಟ್ಟವನ ವಾರೀಸುದಾರನಿಗೆ ಪ್ರತೀಕಾರ ಪಡೆಯುವ ಹಕ್ಕನ್ನು ನಾವು ನೀಡಿರುತ್ತೇವೆ. ಆದುದರಿಂದ ಅವನು ವಧೆಯಲ್ಲಿ ಹದಮೀರಬಾರದು. ನಿಶ್ಚಯವಾಗಿಯೂ ಅವನಿಗೆ ಸಹಾಯ ಮಾಡಲಾಗುವುದು."

(ಬನೀ ಇಸ್ರಾಯೀಲ್: 33)

"ಓ ಸತ್ಯವಿಶ್ವಾಸಿಗಳೇ! ಮದ್ಯ, ಜೂಜು, ಬಲಿಪೀಠಗಳು ಮತ್ತು ದಾಳ ಹಾಕುವುದು ಇವೆಲ್ಲ ಹೊಲಸು ಪೈಶಾಚಿಕ ಕೃತ್ಯಗಳಾಗಿವೆ. ಅವುಗಳನ್ನು ವರ್ಜಿಸಿರಿ. ನಿಮಗೆ ಯಶಸ್ಸು ಲಭಿಸುವುದೆಂದು ನಿರೀಕ್ಷಿಸಬಹುದು." (ಅಲ್ ಮಾಇದ: 90)

"ಅಲ್ಲಾಹ್ ಮತ್ತು ಅವನ ಸಂದೇಶವಾಹಕನ ಮಾತನ್ನು ಕೇಳಿರಿ ಮತ್ತು (ಪ್ರಸ್ತುತ ಕೆಡುಕುಗಳನ್ನು) ವರ್ಜಿಸಿರಿ. ಆದರೆ ನೀವು ಆಜ್ಞೋಲ್ಲಂಘನೆ ಮಾಡಿದರೆ ನಮ್ಮ ಸಂದೇಶವಾಹಕರಿಗೆ ಸುಸ್ಪಷ್ಟ ಆಜ್ಞೆಗಳನ್ನು ತಲಪಿಸುವ ಹೊಣೆಗಾರಿಕೆ ಮಾತ್ರವಿತ್ತೆಂಬುದನ್ನು ಅರಿತುಕೊಳ್ಳಿರಿ." (ಅಲ್ ಮಾಇದ: 92)

"ನೀವು ನಿಮ್ಮ ಸಂಪತ್ತನ್ನು ಪರಸ್ಪರ ಅನುಚಿತ ರೀತಿಯಿಂದ ಕಬಳಿಸಬಾರದು ಮತ್ತು ನಿಮಗೆ ಇತರರ ಸಂಪತ್ತಿನ ಒಂದಂಶವನ್ನು ಉದ್ದೇಶಪೂರ್ವಕವಾಗಿ ಅಕ್ರಮ ರೂಪದಿಂದ ಕಬಳಿಸುವ ಸಂದರ್ಭ ಸಿಗುವಂತೆ ಅವುಗಳನ್ನು ಅಧಿಕಾರಿಗಳ ಮುಂದೆ ಸಮರ್ಪಿಸಬಾರದು." (ಅಲ್ ಬಕರ: 188)

"ಅಶ್ಲೀಲ ವಿಷಯಗಳನ್ನು ಸಮೀಪಿಸಬೇಡಿರಿ. ಅದು ಪ್ರತ್ಯಕ್ಷವಿರಲಿ ಅಥವಾ ಪರೋಕ್ಷವಿರಲಿ." (ಅಲ್ ಅನ್‌ಆಮ್: 151)

"ಪ್ರತಿಯೊಬ್ಬ ಸುಳ್ಳಾರೋಪಿ ದುಷ್ಟನಿಗೆ ವಿನಾಶವಿದೆ." (ಅಲ್ ಜಾಸಿಯ: 7)

"ಮಿಥ್ಯದ ಬಣ್ಣ ಬಳಿದು ಸತ್ಯವನ್ನು ಸಂದೇಹಾಸ್ಪದವನ್ನಾಗಿ ಮಾಡಬೇಡಿರಿ ಮತ್ತು ತಿಳಿದೂ ತಿಳಿದೂ ಸತ್ಯವನ್ನು ಬಚ್ಚಿಡಲು ಪ್ರಯತ್ನಿಸಬೇಡಿರಿ." (ಅಲ್ ಬಕರ: 42)

"ಮನುಷ್ಯನು ಅವಾಚ್ಯ ಶಬ್ದಗಳನ್ನುಚ್ಚರಿಸುವುದನ್ನು ಅಲ್ಲಾಹನು ಮೆಚ್ಚುವುದಿಲ್ಲ. ಆದರೆ ಮರ್ದಿತನು ಇದಕ್ಕೆ ಹೊರತಾಗಿದ್ದಾನೆ. ಅಲ್ಲಾಹನು ಸರ್ವಶ್ರುತನೂ ಸರ್ವಜ್ಞನೂ ಆಗಿರುತ್ತಾನೆ." (ಅನ್ನಿಸಾ: 148)

"ಸತ್ಯವಿಶ್ವಾಸಿಗಳೇ, ಹೆಚ್ಚಿನ ಗುಮಾನಿಗಳಿಂದ ದೂರವಿರಿ. ನಿಶ್ಚಯವಾಗಿಯೂ ಕೆಲವು ಗುಮಾನಿಗಳು ಪಾಪವಾಗಿವೆ. ದೋಷಾನ್ವೇಷಣೆ ಮಾಡದಿರಿ. ನಿಮ್ಮಲ್ಲಿ ಯಾರೂ ಯಾರ ಬಗ್ಗೆಯೂ ಪರದೂಷಣೆ ಮಾಡಬಾರದು. ನಿಮ್ಮಲ್ಲಿ ಯಾರಾದರೂ ತನ್ನ ಮೃತ ಸಹೋದರನ ಮಾಂಸ ತಿನ್ನುವುದನ್ನು ಇಷ್ಟಪಡುವನೇ? ನೀವು ಸ್ವತಃ ಇದನ್ನು ಅಸಹ್ಯ ಪಡುತ್ತೀರಿ. ಅಲ್ಲಾಹನನ್ನು ಭಯಪಡಿರಿ. ಅಲ್ಲಾಹನು ಪಶ್ಚಾತ್ತಾಪ ಸ್ವೀಕರಿಸುವವನೂ ಕರುಣಾನಿಧಿಯೂ ಆಗಿರುತ್ತಾನೆ." (ಅಲ್ ಹುಜುರಾತ್: 12)

"ಖಂಡಿತವಾಗಿಯೂ ಸತ್ಯವಿಶ್ವಾಸಿಗಳು ವಿಜಯಿಗಳಾದರು. ಅವರು ತಮ್ಮ ನಮಾಝಿನಲ್ಲಿ ಭಯಭಕ್ತಿ ತೋರುತ್ತಾರೆ. ನಿರರ್ಥಕ ಕಾರ್ಯಗಳಿಂದ ದೂರವಿರುತ್ತಾರೆ." (ಅಲ್ ಮೂಮಿನೂನ್: 1–3)

"ಸತ್ಯವಿಶ್ವಾಸಿಗಳೇ, ಅಲ್ಲಾಹನನ್ನು ಭಯಪಡಿರಿ ಮತ್ತು ಸರಿಯಾದ ಮಾತನ್ನೇ ಹೇಳಿರಿ." (ಅಲ್ ಅಹ್‌ಝಾಬ್: 70)

"ದುಷ್ಕರ್ಮಗಳನ್ನೆಸಗಿದವರು, ನಾವು ಅವರನ್ನು ಸತ್ಯವಿಶ್ವಾಸವನ್ನಿರಿಸಿ ಸತ್ಕರ್ಮವೆಸಗಿದವರಿಗೆ ಸಮಾನರಾಗಿ ಮಾಡುವೆವೆಂದೂ ಅವರಿಬ್ಬರ ಜೀವನ ಮರಣಗಳು ಸಮಾನ ಸ್ವರೂಪದ್ದಾಗಿರುವುದೆಂದೂ ಭಾವಿಸಿಕೊಂಡಿರುವರೇ? ಇವರು ಮಾಡುವ ತೀರ್ಮಾನ ಬಹಳ ಕೆಟ್ಟದು. ಅಲ್ಲಾಹನು ಭೂಮಿ–ಆಕಾಶಗಳನ್ನು ಸತ್ಯಪೂರ್ಣವಾಗಿ ಸೃಷ್ಟಿಸಿರುತ್ತಾನೆ. ಪ್ರತಿಯೊಬ್ಬ ಜೀವಿಗೆ ಅದರ ದುಡಿಮೆಯ ಪ್ರತಿಫಲ ನೀಡಲಿಕ್ಕಾಗಿ,

ಖಂಡಿತವಾಗಿಯೂ ಜನರ ಮೇಲೆ ಅಕ್ರಮವೆಸಗಲಾಗದು.

ತನ್ನ ಸ್ವೇಚ್ಛೆಯನ್ನೇ ತನ್ನ ದೇವರಾಗಿ ಮಾಡಿಕೊಂಡವನ ಕುರಿತು ನೀವೆಂದಾದರೂ ವಿವೇಚಿಸಿದಿರಾ? ಅಲ್ಲಾಹನು ಜ್ಞಾನದ ಹೊರತಾಗಿಯೂ ಅವನನ್ನು ಪಥಭ್ರಷ್ಟತೆಗೆ ಎಸೆದುಬಿಟ್ಟನು. ಅವನ ಹೃದಯ ಹಾಗೂ ಕಿವಿಗಳಿಗೆ ಮುದ್ರೆಯನ್ನು ಒತ್ತಿಬಿಟ್ಟನು ಮತ್ತು ಅವನ ದೃಷ್ಟಿಗಳ ಮೇಲೆ ತೆರೆಯೆಳೆದು ಬಿಟ್ಟನು. ಅಲ್ಲಾಹನ ಬಳಿಕ ಅವನಿಗೆ ಸನ್ಮಾರ್ಗ ನೀಡಲು ಇನ್ನಾರಿದ್ದಾರೆ? ನೀವು ಪಾಠ ಕಲಿಯುವುದಿಲ್ಲವೇ?

ಜೀವನವೆಂದರೆ ನಮ್ಮ ಈ ಲೋಕದ ಜೀವನ ಮಾತ್ರ. ನಮ್ಮ ಸಾವು ಮತ್ತು ಬದುಕು ಇಲ್ಲೇ. ಕಾಲಚಕ್ರದ ಹೊರತು ಇನ್ನಾವುದೂ ನಮ್ಮನ್ನು ನಾಶಗೊಳಿಸುವುದಿಲ್ಲವೆಂದು ಇವರು ಹೇಳುತ್ತಾರೆ. ವಾಸ್ತವದಲ್ಲಿ ಇವರ ಬಳಿ ಈ ಕುರಿತು ಯಾವ ಜ್ಞಾನವೂ ಇಲ್ಲ. ಇವರು ಕೇವಲ ಊಹೆಯ ಆಧಾರದಲ್ಲಿ ಹೀಗೆ ಹೇಳುತ್ತಿದ್ದಾರೆ."

(ಅಲ್ ಜಾಸಿಯ: 21–24)

"ಅಲ್ಲಾಹನನ್ನು ಭಯಪಡಿರಿ ಮತ್ತು ನನ್ನನ್ನು ಅನುಸರಿಸಿರಿ. ಆ ಅತಿರೇಕಿಗಳನ್ನು ಅನುಸರಿಸಬೇಡಿರಿ. ಅವರು ಭೂಮಿಯಲ್ಲಿ ಗೊಂದಲವನ್ನುಂಟು ಮಾಡುತ್ತಾರೆ. ಯಾವ ಸುಧಾರಣಾ ಕಾರ್ಯವನ್ನೂ ಮಾಡುವುದಿಲ್ಲ." (ಅಶ್ಶುಅರಾ: 150–152)

"ಜನರೇ, ಶೈತಾನರು ಯಾರ ಮೇಲೆ ಇಳಿಯುತ್ತಾರೆಂದು ನಾನು ನಿಮಗೆ ಹೇಳಲೇ? ಅವರು ಪ್ರತಿಯೊಬ್ಬ ಸುಳ್ಳುಗಾರ ಪಾಪಿಯ ಮೇಲೆ ಇಳಿಯುತ್ತಾರೆ."

(ಅಶ್ಶುಅರಾ: 221–222)

"ಅಲ್ಲಾಹನ ಆದೇಶಗಳ ಅನುಸರಣೆಯನ್ನು ನಿರಾಕರಿಸುವವರಿಗೂ ಅವನ ಸಂದೇಶವಾಹಕರನ್ನು ಅನ್ಯಾಯವಾಗಿ ವಧಿಸುವವರಿಗೂ ಮಾನವರ ವರ್ಗದಲ್ಲಿ ನ್ಯಾಯ–ನೀತಿಗಳನ್ನು ನಿರ್ದೇಶಿಸಲುದ್ಯುಕ್ತರಾದವರ ಪ್ರಾಣಾಪಹಾರಗೈಯುವವರಿಗೂ ವೇದನಾತ್ಮಕ ಶಿಕ್ಷೆಯ ಶುಭವಾರ್ತೆ ನೀಡಿರಿ. ಇಹ–ಪರಗಳೆರಡರಲ್ಲೂ ಅವರ ಕರ್ಮ ಫಲಗಳು ನಾಶಗೊಂಡವು ಮತ್ತು ಅವರಿಗೆ ಸಹಾಯಕರು ಯಾರೂ ಇಲ್ಲ."

(ಆಲಿ ಇಮ್ರಾನ್: 21–22)

"ಯಾರಾದರೂ ಸತ್ಕರ್ಮ ಮಾಡಿದರೆ ಅದರ ಫಲ ಅವನಿಗೇ ಸಿಗುವುದು ಮತ್ತು ದುಷ್ಕರ್ಮವೆಸಗುವವನು ಅದರ ಪರಿಣಾಮವನ್ನು ತಾನೇ ಅನುಭವಿಸುವನು. ಎಲ್ಲರಿಗೂ ತಮ್ಮ ಪ್ರಭುವಿನ ಕಡೆಗೇ ಮರಳಬೇಕಾಗಿದೆ." (ಅಲ್ ಜಾಸಿಯ: 15)

"ಸಂದೇಶವಾಹಕರೇ, ಇವರೊಡನೆ ಹೇಳಿರಿ: ಅಲ್ಲಾಹನೇ ನಿಮಗೆ ಜೀವನ ಪ್ರದಾನ ಮಾಡುತ್ತಾನೆ. ಅನಂತರ ಅವನೇ ನಿಮಗೆ ಮರಣ ಕೊಡುತ್ತಾನೆ. ಆ ಬಳಿಕ ಪುನರುತ್ಥಾನ ದಿನ ಅವನೇ ನಿಮ್ಮನ್ನು ಒಟ್ಟುಗೂಡಿಸುವನು. ಅದು

ಬರುವುದರಲ್ಲಿ ಯಾವ ಸಂದೇಹವೂ ಇಲ್ಲ. ಆದರೆ ಹೆಚ್ಚಿನವರು ತಿಳಿಯುವುದಿಲ್ಲ."
(ಅಲ್ ಜಾಸಿಯ: 26)

"ರಹ್ಮಾನನ ಸ್ಮರಣೆಯ ಬಗ್ಗೆ ಅನಾಸ್ಥೆ ವಹಿಸುವವನ ಮೇಲೆ ನಾವೊಬ್ಬ ಶೈತಾನನನ್ನು ನೇಮಿಸಿ ಬಿಡುತ್ತೇವೆ ಮತ್ತು ಅವನು ಆತನ ಆಪ್ತ ಮಿತ್ರನಾಗಿ ಬಿಡುತ್ತಾನೆ. ಈ ಶೈತಾನರು ಇಂತಹವರನ್ನು ಸನ್ಮಾರ್ಗದಿಂದ ತಡೆಯುತ್ತಾರೆ ಮತ್ತು ನಾವು ಸನ್ಮಾರ್ಗದಲ್ಲೇ ಸಾಗುತ್ತಿದ್ದೇವೆಂದು ಅವರು ತಮ್ಮಷ್ಟಕ್ಕೆ ತಿಳಿದುಕೊಂಡಿರುತ್ತಾರೆ. ಕೊನೆಗೆ ಆ ವ್ಯಕ್ತಿ ನಮ್ಮ ಬಳಿಗೆ ಬಂದಾಗ ತನ್ನ ಶೈತಾನನೊಡನೆ, 'ಅಯ್ಯೋ ನನ್ನ ಮತ್ತು ನಿನ್ನ ಮಧ್ಯೆ ಪೂರ್ವ-ಪಶ್ಚಿಮಗಳ ಅಂತರವಿರುತ್ತಿದ್ದರೆ! ನೀನಂತು ಅತ್ಯಂತ ನಿಕೃಷ್ಟ ಸಂಗಾತಿಯಾಗಿ ಬಿಟ್ಟೆ' ಎಂದು ಹೇಳುವನು."
(ಅಝ್ಝುಖ್ರುಫ್: 36–38)

"ಇನ್ನು ಯಾರು ಅಲ್ಲಾಹನ ಮಾತನ್ನು ಕೇಳಿ ನಡೆಯುವರೋ ಮತ್ತು ಅವನ ಅಭಯವನ್ನರಸುವರೋ ಅವರನ್ನು ಅಲ್ಲಾಹ್ ತನ್ನ ಕೃಪೆ ಹಾಗೂ ತನ್ನ ಅನುಗ್ರಹಗಳ ಆಶ್ರಯದಲ್ಲಿ ತೆಗೆದುಕೊಳ್ಳುವನು ಮತ್ತು ತನ್ನ ಕಡೆಗೆ ಬರುವ ನೇರಮಾರ್ಗವನ್ನು ತೋರಿಸಿ ಕೊಡುವನು." (ಅನ್ನಿಸಾ: 175)

"ಸತ್ಕರ್ಮವೆಸಗಿರಿ, ನೀವು ಮಾಡುವುದನ್ನೆಲ್ಲಾ ನಾನು ನೋಡುತ್ತಿದ್ದೇನೆ."
(ಸಬಾ: 11)

"ನಿಮ್ಮನ್ನು ನಮಗೆ ನಿಕಟಗೊಳಿಸುವ ಸಾಧನ ನಿಮ್ಮ ಸಂಪತ್ತಾಗಲೀ ನಿಮ್ಮ ಸಂತಾನವಾಗಲೀ ಅಲ್ಲ. ಯಾರು ಸತ್ಯವಿಶ್ವಾಸ ಸ್ವೀಕರಿಸಿ ಸತ್ಕರ್ಮವೆಸಗುವರೋ ಅವರು ಇದಕ್ಕೆ ಹೊರತಾಗಿರುವರು." (ಸಬಾ: 37)

"ಅಲ್ಲಾಹನ ವರ್ಣವನ್ನು ಹೊಂದಿರಿ. ಅವನ ವರ್ಣಕ್ಕಿಂತ ಉತ್ತಮ ವರ್ಣ ಇನ್ನಾರದಿರಬಹುದು? ಮತ್ತು ನಾವು ಕೇವಲ ಆತನ ದಾಸ್ಯ-ಆರಾಧನೆ ಮಾಡುವವರು ಎಂದು ಹೇಳಿರಿ." (ಅಲ್ ಬಕರ: 138)

"ನಿಶ್ಚಯವಾಗಿಯೂ ಮುಸ್ಲಿಮರೂ ಸತ್ಯವಿಶ್ವಾಸಿಗಳೂ ಆಜ್ಞಾಪಾಲಕರೂ ಸತ್ಯ ಸಂಧರೂ ಸಹನಶೀಲರೂ ವಿನಮ್ರರೂ ದಾನಶೀಲರೂ ಉಪವಾಸವ್ರತವನ್ನು ಆಚರಿಸುವ ವರೂ ತಮ್ಮ ಗುಪ್ತಾಂಗಗಳ ರಕ್ಷಣೆ ಮಾಡಿಕೊಳ್ಳುವವರೂ ಅಲ್ಲಾಹನನ್ನು ಅತ್ಯಧಿಕವಾಗಿ ಸ್ಮರಿಸುವವರೂ ಆದ ಎಲ್ಲ ಪುರುಷರು ಮತ್ತು ಸ್ತ್ರೀಯರಿಗೆ ಅಲ್ಲಾಹನು ಕ್ಷಮೆ ಮತ್ತು ಅತಿದೊಡ್ಡ ಸತ್ಫಲವನ್ನು ಸಿದ್ಧಗೊಳಿಸಿಟ್ಟಿದ್ದಾನೆ." (ಅಲ್ ಅಹ್‌ಝಾಬ್: 35)

"ಮತ್ತು ನ್ಯಾಯವನ್ನು ಪಾಲಿಸಿರಿ. ಅಲ್ಲಾಹನು ನ್ಯಾಯ ಪಾಲಕರನ್ನು ಪ್ರೀತಿಸುತ್ತಾನೆ." (ಅಲ್ ಹುಜುರಾತ್: 9)

"ಸತ್ಯವಿಶ್ವಾಸಿಗಳೇ, ಅಲ್ಲಾಹನನ್ನು ಬಹಳವಾಗಿ ಸ್ಮರಿಸಿರಿ ಮತ್ತು ಬೆಳಗು ಬೈಗುಗಳಲ್ಲಿ ಅವನ ಗುಣಗಾನ ಮಾಡುತ್ತಲಿರಿ. ಅವನೇ ನಿಮ್ಮ ಮೇಲೆ ಕೃಪೆ ತೋರುವವನು ಮತ್ತು ಅವನು ನಿಮ್ಮನ್ನು ಅಂಧಕಾರಗಳಿಂದ ಪ್ರಕಾಶದ ಕಡೆಗೆ ತರುವಂತೆ ಅವನ ಧೇವಚರರು ನಿಮಗಾಗಿ ಕೃಪಾ ಪ್ರಾರ್ಥನೆ ಮಾಡುತ್ತಾರೆ. ಅವನು ಸತ್ಯವಿಶ್ವಾಸಿಗಳ ಮೇಲೆ ತುಂಬಾ ಕರುಣೆಯುಳ್ಳವನು. ಅವನನ್ನು ಅವರು ಭೇಟಿಯಾಗುವ ದಿನ ಅವರನ್ನು 'ಸಲಾಮ್'ನೊಂದಿಗೆ ಸ್ವಾಗತಿಸಲಾಗುವುದು ಮತ್ತು ಅಲ್ಲಾಹನು ಅವರಿಗಾಗಿ ಅತ್ಯಂತ ಗೌರವಪೂರ್ಣ ಸತ್ಫಲವನ್ನು ಸಿದ್ಧಗೊಳಿಸಿಟ್ಟಿದ್ದಾನೆ."

(ಅಲ್ ಅಹ್‌ಝಾಬ್: 41–44)

"ಇವರೊಡನೆ ಹೇಳಿರಿ– ನನ್ನ ಪ್ರಭು ನ್ಯಾಯಪರ ಆಜ್ಞೆಯನ್ನಿತ್ತಿದ್ದಾನೆ."

(ಅಲ್ ಅಅ್‌ರಾಫ್: 29)

"ಸಂಬಂಧಿಕನಿಗೆ ಅವನ ಹಕ್ಕನ್ನು, ದರಿದ್ರನಿಗೂ ಪ್ರಯಾಣಿಕನಿಗೂ ಅವನವನ ಹಕ್ಕನ್ನು ಕೊಡಿರಿ. ದುಂದುವೆಚ್ಚ ಮಾಡಬೇಡಿರಿ. ದುಂದುಗಾರರು ಶೈತಾನನ ಸೋದರರಾಗಿರುತ್ತಾರೆ ಮತ್ತು ಶೈತಾನನು ತನ್ನ ಪ್ರಭುವಿಗೆ ಕೃತಘ್ನನು."

(ಬನೀ ಇಸ್ರಾಯೀಲ್: 26–27)

"ನಿಮ್ಮ ಪ್ರಭು ಹೀಗೆ ವಿಧಿಸಿಬಿಟ್ಟಿದ್ದಾನೆ: ನೀವು ಕೇವಲ ಅವನೊಬ್ಬನ ಹೊರತು ಇನ್ನಾರ ದಾಸ್ಯ–ಆರಾಧನೆಯನ್ನೂ ಮಾಡಬಾರದು. ಮಾತಾಪಿತರೊಡನೆ ಸೌಜನ್ಯದಿಂದ ವರ್ತಿಸಿರಿ. ಅವರ ಪೈಕಿ ಒಬ್ಬರು ಅಥವಾ ಅವರಿಬ್ಬರೂ ವೃದ್ಧರಾಗಿ ನಿಮ್ಮ ಬಳಿಯಲ್ಲಿದ್ದರೆ, ಅವರ ಬಗ್ಗೆ ಚಕಾರವೆತ್ತಬೇಡಿರಿ ಮತ್ತು ಅವರನ್ನು ಜರೆಯಬೇಡಿರಿ. ಅವರೊಂದಿಗೆ ಗೌರವಪೂರ್ವಕವಾಗಿ ಮಾತನಾಡಿರಿ. ನಯವಿನಯ ಮತ್ತು ಕರುಣೆಯೊಂದಿಗೆ ಅವರ ಮುಂದೆ ಬಾಗಿಕೊಂಡಿರಿ ಮತ್ತು 'ಓ ನನ್ನ ಪ್ರಭೂ! ಇವರು ನನ್ನ ಚಿಕ್ಕಂದಿನಲ್ಲಿ ದಯಾ ವಾತ್ಸಲ್ಯಗಳಿಂದ ನನ್ನನ್ನು ಸಾಕಿದಂತೆಯೇ ನೀನು ಅವರ ಮೇಲೆ ಕೃಪೆ ತೋರು' ಎಂದು ಪ್ರಾರ್ಥಿಸಿರಿ. ನಿಮ್ಮ ಅಂತರಂಗದಲ್ಲಿ ಏನಿದೆ ಎಂಬುದನ್ನು ನಿಮ್ಮ ಪ್ರಭು ಚೆನ್ನಾಗಿ ಬಲ್ಲನು." (ಬನೀ ಇಸ್ರಾಯೀಲ್: 23–25)

"ನಿಮ್ಮ ಮಕ್ಕಳನ್ನು ಬಡತನದ ಭೀತಿಯಿಂದ ಕೊಲ್ಲಬೇಡಿರಿ. ನಾವು ಅವರಿಗೂ ಆಹಾರ ನೀಡುವೆವು ನಿಮಗೂ ನೀಡುವೆವು. ವಾಸ್ತವದಲ್ಲಿ ಅವರ ವಧೆಯು ಒಂದು ಘೋರ ಅಪರಾಧವಾಗಿದೆ. ವ್ಯಭಿಚಾರದ ಹತ್ತಿರವೂ ಸುಳಿಯಬೇಡಿರಿ. ಅದು ಅತೀ ಹೀನ ಕಾರ್ಯ ಮತ್ತು ಅತ್ಯಂತ ಕೆಟ್ಟ ಮಾರ್ಗ." (ಬನೀ ಇಸ್ರಾಯೀಲ್: 31–32)

"ಅನಾಥನ ಸೊತ್ತನ್ನು ಉತ್ತಮ ರೀತಿಯಿಂದಲ್ಲದೆ ಸಮೀಪಿಸಬಾರದು. (ಇದು) ಅವನು ಯೌವನಾವಸ್ಥೆಗೆ ತಲಪುವ ತನಕ. ವಚನವನ್ನು ಪಾಲಿಸಿರಿ. ನಿಶ್ಚಯವಾಗಿಯೂ ವಚನದ ಕುರಿತು ನಿಮ್ಮನ್ನು ಪ್ರಶ್ನಿಸಲಾಗುವುದು. ಅಳತೆ ಮಾಡಿ

ಕೊಡುವಾಗ ಪೂರ್ಣ ತುಂಬಿಸಿ ಕೊಡಿರಿ. ತೂಗುವಾಗ ಸರಿಯಾದ ತಕ್ಕಡಿಯಲ್ಲಿ ತೂಗಿರಿ. ಇದು ಒಳ್ಳೆಯ ಕ್ರಮ ಮತ್ತು ಪರಿಣಾಮದ ದೃಷ್ಟಿಯಿಂದಲೂ ಇದುವೇ ಉತ್ತಮ. ನಿಮಗೆ ಜ್ಞಾನವಿಲ್ಲದಂತಹ ವಸ್ತುಗಳನ್ನು ಬೆಂಬತ್ತಬೇಡಿರಿ. ನಿಶ್ಚಯವಾಗಿಯೂ ಶ್ರವಣ, ದೃಷ್ಟಿ ಮತ್ತು ಮನಸ್ಸು ಇವೆಲ್ಲವುಗಳ ವಿಚಾರಣೆ ನಡೆಯಲಿದೆ. ಭೂಮಿಯ ಮೇಲೆ ದರ್ಪದಿಂದ ನಡೆಯಬೇಡಿರಿ. ನೀವು ಭೂಮಿಯನ್ನು ಸೀಳಲಾರಿರಿ ಮತ್ತು ಪರ್ವತಗಳ ಶಿಖರಕ್ಕೂ ತಲುಪಲಾರಿರಿ." (ಬನೀ ಇಸ್ರಾಯೀಲ್: 34–37)

"ನಮಗಾಗಿ ಹೋರಾಡುವವರಿಗೆ ನಾವು ನಮ್ಮ ಮಾರ್ಗಗಳನ್ನು ತೋರಿಸಿ ಕೊಡುವೆವು ಮತ್ತು ನಿಶ್ಚಯವಾಗಿಯೂ ಅಲ್ಲಾಹ್ ಸಜ್ಜನರ ಜೊತೆಯಲ್ಲೇ ಇದ್ದಾನೆ." (ಅಲ್ ಅಂಕಬೂತ್: 69)

"ನೀವೆಲ್ಲರೂ ಒಟ್ಟಾಗಿ ಅಲ್ಲಾಹನ ಪಾಶವನ್ನು ಬಿಗಿ ಹಿಡಿಯಿರಿ." (ಆಲಿ ಇಮ್ರಾನ್: 103)

"ಓ ಸತ್ಯವಿಶ್ವಾಸಿಗಳೇ! ತನ್ನ ಸಂಪತ್ತನ್ನು ಆಡಂಬರಕ್ಕಾಗಿ ಖರ್ಚು ಮಾಡುವವನಂತೆ ಹಾಗೂ ಅಲ್ಲಾಹ್ ಮತ್ತು ಪರಲೋಕದಲ್ಲಿ ವಿಶ್ವಾಸವಿರಿಸದವನ ಹಾಗೆ ಉಪಕಾರ ಭಾರವಿರಿಸಿಯೂ ನೋಯಿಸಿಯೂ ನಿಮ್ಮ ದಾನ–ಧರ್ಮಗಳನ್ನು ನೀವು ನಿಷ್ಫಲಗೊಳಿಸಬೇಡಿರಿ. ಅವನ ಖರ್ಚಿನ ಉಪಮೆಯು ಮಣ್ಣಿನ ಮೇಲ್ಪದರವಿರುವ ಒಂದು ಬಂಡೆಯಿದ್ದು ಜೋರಾಗಿ ಮಳೆ ಸುರಿದಾಗ ಮಣ್ಣೆಲ್ಲಾ ಕೊಚ್ಚಿ ಹೋಗಿ ಕೇವಲ ಬಂಡೆಯು ಮಾತ್ರ ಉಳಿದಿರುವಂತಿದೆ. ಇಂತಹವರು ತಾವು ದಾನ ಮಾಡಿ ಗಳಿಸಿದೆವೆಂದೆಣಿಸಿರುವ ಪುಣ್ಯವೇನೂ ಅವರ ಕೈ ಸೇರದು. ಸತ್ಯನಿಷೇಧಿಗಳಿಗೆ ಮಾರ್ಗದರ್ಶನ ಮಾಡುವ ಪರಿಪಾಠವನ್ನು ಅಲ್ಲಾಹನು ಇಟ್ಟುಕೊಂಡಿರುವುದಿಲ್ಲ." (ಅಲ್ ಬಕರ: 264)

"ಯಥಾರ್ಥವಾಗಿಯೂ ಅಲ್ಲಾಹನು ಮಾನವರ ಮೇಲೆ ಮಹಾ ಕೃಪೆ ತೋರುವವನಾಗಿರುತ್ತಾನೆ. ಆದರೆ, ಅನೇಕರು ಕೃತಜ್ಞತೆ ಸಲ್ಲಿಸುವುದಿಲ್ಲ." (ಅಲ್ ಬಕರ: 243)

"ಪರಸ್ಪರ ವ್ಯವಹಾರಗಳಲ್ಲಿ ಔದಾರ್ಯವನ್ನು ಮರೆಯಬೇಡಿರಿ. ನಿಮ್ಮ ಕರ್ಮಗಳನ್ನು ಅಲ್ಲಾಹನು ವೀಕ್ಷಿಸುತ್ತಿದ್ದಾನೆ." (ಅಲ್ ಬಕರ: 237)

"ಅಹಂಕಾರಪಡಬೇಡ. ಅಹಂಕಾರ ಪಡುವವರನ್ನು ಅಲ್ಲಾಹನು ಮೆಚ್ಚುವುದಿಲ್ಲ." (ಅಲ್ ಕಸಸ್: 76)

"ದುರಹಂಕಾರ ಹೊಂದಿರುವ ಗರ್ವಿಷ್ಠನನ್ನೂ ಆತ್ಮಸ್ತುತಿಗೈಯುವವನನ್ನೂ ಅಲ್ಲಾಹನು ಮೆಚ್ಚುವುದಿಲ್ಲ." (ಅನ್ನಿಸಾ: 36)

"ನಿಮ್ಮ ಪ್ರಭುವನ್ನು ಭಯ ವಿನಯದೊಂದಿಗೆ ಮತ್ತು ರಹಸ್ಯವಾಗಿ ಪ್ರಾರ್ಥಿಸಿರಿ. ನಿಶ್ಚಯವಾಗಿಯೂ ಅವನು ಸೀಮೋಲ್ಲಂಘಕರನ್ನು ಮೆಚ್ಚುವುದಿಲ್ಲ. ಭೂಮಿಯಲ್ಲಿ ಸುಧಾರಣೆಯಾಗಿರುವಾಗ ಕ್ಷೋಭೆಯನ್ನುಂಟು ಮಾಡಬೇಡಿರಿ. ಭಯದೊಂದಿಗೂ ಆಶೆಯೊಂದಿಗೂ ಅಲ್ಲಾಹನನ್ನೇ ಕೂಗಿ ಪ್ರಾರ್ಥಿಸಿರಿ. ನಿಶ್ಚಯವಾಗಿಯೂ ಅಲ್ಲಾಹನ ಕೃಪೆಯು ಸಜ್ಜನರ ಸಮೀಪದಲ್ಲಿದೆ."

(ಅಲ್ ಅಅ್‌ರಾಫ್: 55–56)

"ಅಲ್ಲಾಹನು ನ್ಯಾಯ, ಪರೋಪಕಾರ ಹಾಗೂ ಆಪ್ತೇಷ್ಟರ ಬಗ್ಗೆ ಸೌಜನ್ಯದ ಆಜ್ಞೆ ನೀಡುತ್ತಾನೆ ಮತ್ತು ಅಶ್ಲೀಲ ಕಾರ್ಯ, ದುಷ್ಕೃತ್ಯ, ಅಕ್ರಮ, ಅತ್ಯಾಚಾರಗಳನ್ನು ನಿಷೇಧಿಸುತ್ತಾನೆ. ನೀವು ಜಾಗೃತರಾಗಲಿಕ್ಕಾಗಿ ಅವನು ನಿಮಗೆ ಉಪದೇಶ ನೀಡುತ್ತಾನೆ." (ಅನ್ನಹ್ಲ್: 90)

"ನಿಮ್ಮ ದೇವನಂತು ಏಕಮಾತ್ರ ದೇವನು. ಆದುದರಿಂದ ನೀವು ಅವನ ಆಜ್ಞಾಪಾಲಕರಾಗಿಯೇ ಇರಿ. ಪೈಗಂಬರರೇ, ವಿನಯಶೀಲರಿಗೆ ಶುಭವಾರ್ತೆ ನೀಡಿರಿ. ಅಲ್ಲಾಹನ ಪ್ರಸ್ತಾಪವನ್ನು ಕೇಳಿದೊಡನೆ ಅವರ ಹೃದಯಗಳು ಕಂಪಿಸತೊಡಗುತ್ತವೆ. ಅವರ ಮೇಲೆ ಯಾವ ಸಂಕಷ್ಟಗಳು ಬಂದರೂ ತಾಳ್ಮೆ ವಹಿಸುತ್ತಾರೆ. ನಮಾಝನ್ನು ಸಂಸ್ಥಾಪಿಸುತ್ತಾರೆ ಮತ್ತು ನಾವು ಅವರಿಗೆ ನೀಡಿದ ಜೀವನಾಧಾರದಿಂದ ವ್ಯಯಿಸುತ್ತಾರೆ." (ಅಲ್ ಹಜ್ಜ್: 34–35)

## ಇತಿಹಾಸದ ಪಾಠ

"ಆ ಅಕ್ರಮಿಗಳ ಗತಿಯೇನಾಯಿತೆಂಬುದನ್ನು ನೋಡಿರಿ." (ಅಲ್ ಕಸಸ್: 40)

"ತಮ್ಮ ಸಂಪತ್ಸೌಕರ್ಯಗಳ ಬಗ್ಗೆ ಅಹಂಭಾವ ಹೊಂದಿದ್ದ ಎಷ್ಟೋ ನಾಡುಗಳನ್ನು ನಾವು ನಾಶಗೊಳಿಸಿದ್ದೇವೆ. ಅದೋ ಅವರ ನಿವಾಸಗಳು ಪಾಳು ಬಿದ್ದಿರುವುದನ್ನು ನೋಡಿಕೊಳ್ಳಿರಿ. ಅವುಗಳಲ್ಲಿ ಅನಂತರ ಯಾರಾದರೂ ವಾಸಿಸಿದ್ದೇ ಅಪರೂಪ. ಕೊನೆಗೆ ನಾವೇ ಅದರ ವಾರೀಸುದಾರರಾದೆವು. ಅವರ ಕೇಂದ್ರದಲ್ಲಿ, ಅವರಿಗೆ ನಮ್ಮ ಸೂಕ್ತಗಳನ್ನು ಓದಿ ಹೇಳುವ ಸಂದೇಶವಾಹಕ ನೊಬ್ಬನನ್ನು ಕಳುಹಿಸುವ ವರೆಗೂ ನಿಮ್ಮ ಪ್ರಭು ನಾಡುಗಳನ್ನು ನಾಶಗೊಳಿಸುವವನಾಗಿರಲಿಲ್ಲ. ಆ ನಾಡುಗಳಲ್ಲಿರುವವರು ಅಕ್ರಮಿಗಳಾಗಿ ಬಿಡುವ ವರೆಗೂ ನಾವು ಅವುಗಳನ್ನು ನಾಶ ಗೊಳಿಸುವವರಾಗಿರಲಿಲ್ಲ.

ನಿಮಗೆ ಕೊಡಲಾಗಿರುವುದೆಲ್ಲವೂ ಕೇವಲ ಲೌಕಿಕ ಜೀವನದ ಸಾಧನ ಹಾಗೂ ಅದರ ಅಲಂಕಾರವಾಗಿದೆ ಮತ್ತು ಅಲ್ಲಾಹನ ಬಳಿಯಲ್ಲಿರುವುದೆಲ್ಲವೂ ಇದಕ್ಕಿಂತ ಉತ್ತಮ ಹಾಗೂ ಶಾಶ್ವತವಾಗಿ ಉಳಿಯುವವುಗಳಾಗಿವೆ. ನೀವು ಬುದ್ಧಿಯನ್ನುಪಯೋ

ಗಿಸುವುದಿಲ್ಲವೇ? ನಾವು ಒಬ್ಬನಿಗೆ ಉತ್ತಮ ವಾಗ್ದಾನ ಮಾಡಿದ್ದು, ಅದನ್ನವನು ಪಡೆಯಲಿರುವನು. ಇಂಥವನು, ನಾವು ಕೇವಲ ಲೌಕಿಕ ಜೀವನದ ಸಾಧನಗಳನ್ನು ನೀಡಿದ್ದು ಆ ಬಳಿಕ ಪರಲೋಕದಲ್ಲಿ ಶಿಕ್ಷೆಗಾಗಿ ಹಾಜರುಗೊಳಿಸಲ್ಪಡಲಿರುವ ವ್ಯಕ್ತಿಯಂತೆ ಆಗಬಲ್ಲನೇ?". (ಅಲ್ ಕಸಸ್: 58–61)

"ಅಲ್ಲಾಹ್ ನಿಮಗಿಂತ ಮುಂಚೆ ಗತಿಸಿಹೋದ ಸಜ್ಜನರು ಅನುಸರಿಸುತ್ತಿದ್ದ ವಿಧಾನಗಳನ್ನು ನಿಮಗೆ ತೋರಿಸಿ ಕೊಡಲಿಕ್ಕೂ ಅವುಗಳಂತೆ ನಿಮ್ಮನ್ನು ನಡೆಸಲಿಕ್ಕೂ ಇಚ್ಛಿಸುತ್ತಾನೆ. ಅವನು ತನ್ನ ಕೃಪೆಯೊಂದಿಗೆ ನಿಮ್ಮ ಕಡೆಗೆ ಲಕ್ಷ್ಯವಿಡಲು ಉದ್ದೇಶಿಸುತ್ತಾನೆ. ಅಲ್ಲಾಹನು ಸರ್ವಜ್ಞನೂ ಮಹಾ ಧೀಮಂತನೂ ಆಗಿರುತ್ತಾನೆ."
(ಅನ್ನಿಸಾ: 26)

"ಗತಿಸಿಹೋದ ಒಂದು ಸಮುದಾಯವದು. ಅವರು ಗಳಿಸಿದುದು ಅವರಿಗೆ ಮತ್ತು ನೀವು ಗಳಿಸಿದುದು ನಿಮಗೆ. ಅವರ ಕರ್ಮಗಳ ಕುರಿತು ನಿಮ್ಮೊಡನೆ ವಿಚಾರಣೆ ನಡೆಯಲಾರದು." (ಅಲ್ ಬಕರ: 134)

"ಇಬ್‌ರಾಹೀಮರನ್ನು ಅವರ ಪ್ರಭು ಕೆಲವು ವಿಷಯಗಳಲ್ಲಿ ಪರೀಕ್ಷಿಸಿದ ಸಂದರ್ಭವನ್ನು ಸ್ಮರಿಸಿರಿ. ಅವರು ಅವುಗಳಲ್ಲೆಲ್ಲಾ ಸಫಲರಾದರು. ಆಗ ಅಲ್ಲಾಹನು, 'ನಾನು ನಿಮ್ಮನ್ನು ಸರ್ವ ಜನರ ನಾಯಕನನ್ನಾಗಿ ಮಾಡುವವನಿದ್ದೇನೆ' ಎಂದನು. ಇಬ್‌ರಾಹೀಮರು, 'ನನ್ನ ಸಂತಾನಗಳಿಗೂ ಇದೇ ವಾಗ್ದಾನವೇ?' ಎಂದು ಭಿನ್ನವಿಸಿದರು. ಆಗ ಅಲ್ಲಾಹನು, 'ನನ್ನ ವಾಗ್ದಾನವು ಅಕ್ರಮಿಗಳಿಗೆ ಅನ್ವಯಿಸುವುದಿಲ್ಲ' ಎಂದು ಉತ್ತರಿಸಿದರು." (ಅಲ್ ಬಕರ: 124)

"ಇದಕ್ಕೆ ಮುಂಚೆ ನಾವು ಬನೀ ಇಸ್ರಾಈಲರಿಗೆ ಗ್ರಂಥ, 'ಹುಕ್ಮ್' ಮತ್ತು ಪ್ರವಾದಿತ್ವ ಪ್ರದಾನ ಮಾಡಿದ್ದೆವು. ನಾವು ಅವರಿಗೆ ಅತ್ಯುತ್ತಮ ಜೀವನ ಸಾಧನಗಳನ್ನು ಕರುಣಿಸಿದೆವು. ಅಖಿಲ ಜಗತ್ತಿನವರ ಮೇಲೆ ಅವರಿಗೆ ಶ್ರೇಷ್ಠತೆ ದಯಪಾಲಿಸಿದೆವು."
(ಅಲ್ ಜಾಸಿಯ: 16)

"ಎಲ್ಲವೂ ಅಲ್ಲಾಹನಿಚ್ಛಿಸಿದಂತೆಯೇ ಆಗುತ್ತದೆ. ಅಲ್ಲಾಹನ ಹೊರತು ಇನ್ಯಾವ ಶಕ್ತಿಯೂ ಇಲ್ಲ." (ಅಲ್ ಕಹ್ಫ್: 39)

"ನಮ್ಮ ಸಜ್ಜನ ದಾಸರು ಭೂಮಿಯ ವಾರೀಸುದಾರರಾಗುವರು."
(ಅಲ್ ಅಂಬಿಯಾ: 105)

ಮೂಸಾ ತಮ್ಮ ಜನಾಂಗದವರೊಡನೆ ಹೀಗೆಂದರು, "ಅಲ್ಲಾಹನೊಡನೆ ಸಹಾಯ ಯಾಚಿಸಿರಿ ಮತ್ತು ತಾಳ್ಮೆ ವಹಿಸಿರಿ. ಭೂಮಿ ಅಲ್ಲಾಹನದು. ಅವನು ತನ್ನ ದಾಸರಲ್ಲಿ ತನಗಿಷ್ಟ ಬಂದವರನ್ನು ಅದರ ಉತ್ತರಾಧಿಕಾರಿಗಳಾಗಿ ಮಾಡುತ್ತಾನೆ.

ಅಂತಿಮ ವಿಜಯವು ಅವನನ್ನು ಭಯಪಟ್ಟು ವರ್ತಿಸುವವರಿಗಾಗಿದೆ." ಅವರ ಜನಾಂಗದವರು ಹೇಳಿದರು, "ನೀವು ಬರುವುದಕ್ಕೆ ಮುಂಚೆಯೂ ನಾವು ಸತಾಯಿಸಲ್ಪಡುತ್ತಿದ್ದೆವು. ಈಗ ನೀವು ಬಂದ ಬಳಿಕವೂ ಸತಾಯಿಸಲ್ಪಡುತ್ತಿದ್ದೇವೆ." ಅವರು ಹೀಗೆ ಹೇಳಿದರು, "ನಿಮ್ಮ ಪ್ರಭು ನಿಮ್ಮ ಶತ್ರುವನ್ನು ನಾಶಗೊಳಿಸುವ ಹಾಗೂ ನಿಮ್ಮನ್ನು ಭೂಮಿಯಲ್ಲಿ ಪ್ರತಿನಿಧಿಗಳನ್ನಾಗಿ ಮಾಡುವ ಸಮಯ ಸನ್ನಿಹಿತವಾಗಿದೆ. ಆಮೇಲೆ ಅವನು ನೀವು ಹೇಗೆ ವರ್ತಿಸುತ್ತೀರೆಂದು ನೋಡುವನು."

(ಅಲ್ ಅಲ್‌ರಾಫ್: 128–129)

## ಇತರ ವಿಷಯಗಳು

"ಓ ಪೈಗಂಬರರೇ! ಹೇಳಿರಿ– ನನ್ನ ಪ್ರಭುವಿನ ವಚನಗಳನ್ನು ಬರೆಯಲು ಸಮುದ್ರವು ಮಸಿಯಾಗಿ ಮಾರ್ಪಟ್ಟರೂ ಅದು ಮುಗಿದು ಹೋಗುವುದು. ಆದರೆ ನನ್ನ ಪ್ರಭುವಿನ ವಚನಗಳು ಮುಗಿಯಲಾರವು. ಮಾತ್ರವಲ್ಲ ಮತ್ತೂ ಅಷ್ಟೇ ಮಸಿಯನ್ನು ನಾವು ತಂದರೂ ಅದೂ ಸಾಕಾಗದು." (ಅಲ್ ಕಹ್ಫ್: 109)

"(ಪೈಗಂಬರರೇ) ಅವನೇ ಈ ಗ್ರಂಥವನ್ನು ನಿಮ್ಮ ಮೇಲೆ ಅವತೀರ್ಣಗೊಳಿಸಿನನು. ಈ ಗ್ರಂಥದಲ್ಲಿ ಎರಡು ಬಗೆಯ ಸೂಕ್ತಗಳಿವೆ. ಒಂದು, ಗ್ರಂಥದ ಮೂಲಾನಾರವಾಗಿರುವ 'ಮುಹ್ಕಮಾತ್', ಇನ್ನೊಂದು 'ಮುತಶಾಬಿಹಾತ್'. ಹೃದಯಗಳಲ್ಲಿ ಕೊಂಕುಳ್ಳವರು ಕ್ಷೋಭೆ ಎಬ್ಬಿಸಲಿಕ್ಕಾಗಿ 'ಮುತಶಾಬಿಹಾತ್'ಗಳ ಬೆನ್ನು ಹತ್ತುತ್ತಾರೆ ಮತ್ತು ಅವುಗಳ ದುರ್ವ್ಯಾಖ್ಯಾನ ಮಾಡಲು ಪ್ರಯತ್ನಿಸುತ್ತಾರೆ. ವಸ್ತುತಃ ಅವುಗಳ ನಿಜಾರ್ಥವನ್ನು ಅಲ್ಲಾಹನ ಹೊರತು ಇನ್ನಾರೂ ಬಲ್ಲವರಿಲ್ಲ. ಇದಕ್ಕೆ ವ್ಯತಿರಿಕ್ತವಾಗಿ ಜ್ಞಾನದಲ್ಲಿ ಪರಿಪಕ್ವತೆ ಹೊಂದಿದವರು, 'ನಾವು ಇವುಗಳ ಬಗ್ಗೆ ವಿಶ್ವಾಸ ಹೊಂದಿದ್ದೇವೆ– ಇವೆಲ್ಲ ನಮ್ಮ ಪ್ರಭುವಿನ ವತಿಯಿಂದಲೇ ಆಗಿರುತ್ತದೆ' ಎನ್ನುತ್ತಾರೆ. ಯಾವುದರಿಂದಲೇ ಆದರೂ ಬುದ್ಧಿಜೀವಿಗಳು ಮಾತ್ರ ಸರಿಯಾದ ಪಾಠ ಪಡೆಯುತ್ತಾರೆ." (ಆಲಿ ಇಮ್ರಾನ್: 7)

ಇವರು ನಿಮ್ಮೊಡನೆ 'ರೂಹ್'ನ ಕುರಿತು ಪ್ರಶ್ನಿಸುತ್ತಾರೆ. ಹೇಳಿರಿ, "ಈ ರೂಹ್' ನನ್ನ ಪ್ರಭುವಿನ ಅಪ್ಪಣೆಯಿಂದ ಬರುತ್ತದೆ. ಆದರೆ ನೀವು ಜ್ಞಾನದ ಅಲ್ಪಾಂಶವನ್ನು ಮಾತ್ರ ಪಡೆದಿರುತ್ತೀರಿ." (ಬನೀ ಇಸ್ರಾಯೀಲ್: 85)

"ಮತ್ತು ಗಮನಿಸಿರಿ, ಯಾವ ವಿಷಯದ ಬಗೆಗೂ ನಾನು ನಾಳೆ ಈ ಕೆಲಸವನ್ನು ಮಾಡಿ ಬಿಡುವೆನು ಎನ್ನಬೇಡಿರಿ; ಅಲ್ಲಾಹನು ಇಚ್ಛಿಸುವ ಹೊರತು ಏನೇನನ್ನೂ ಮಾಡಲಾರಿರಿ). ಮರವೆಯಿಂದ ಇಂತಹ ಮಾತು ನಿಮ್ಮ ಬಾಯಿಯಿಂದ ಬಂದುಬಿಟ್ಟರೆ ಕೂಡಲೇ ನಿಮ್ಮ ಪ್ರಭುವನ್ನು ಸ್ಮರಿಸಿಕೊಳ್ಳಿರಿ ಮತ್ತು ನನ್ನ ಪ್ರಭು

ಈ ವಿಷಯದಲ್ಲಿ ಸತ್ಯಕ್ಕೆ ಸಮೀಪವಾದುದರ ಕಡೆಗೆ ನನಗೆ ಮಾರ್ಗದರ್ಶನ ಮಾಡುವನೆಂದು ನಾನು ನಿರೀಕ್ಷಿಸುತ್ತೇನೆ ಎನ್ನಿರಿ." (ಅಲ್ ಕಹ್ಫ್: 23-24)

"ನಾವು ಈ ಅಮಾನತ್ತನ್ನು ಆಕಾಶಗಳ, ಭೂಮಿಯ ಮತ್ತು ಪರ್ವತಗಳ ಮುಂದಿರಿಸಿದೆವು. ಆಗ ಅವು ಅದನ್ನು ಎತ್ತಿಕೊಳ್ಳಲು ಸಿದ್ಧವಾಗಲಿಲ್ಲ ಮತ್ತು ಅದರಿಂದ ಭೀತರಾದವು. ಆದರೆ, ಮಾನವನು ಅದನ್ನು ಎತ್ತಿಕೊಂಡನು. ನಿಶ್ಚಯವಾಗಿಯೂ ಅವನು ದೊಡ್ಡ ಅಕ್ರಮಿಯೂ ತಿಳಿಗೇಡಿಯೂ ಆಗಿರುತ್ತಾನೆ." (ಅಲ್ ಅಹ್‌ಝಾಬ್: 72)

"ನಾವು ಸುವ್ಯಕ್ತ ವಾಸ್ತವಿಕತೆಯನ್ನು ತಿಳಿಸುವಂತಹ ಸೂಕ್ತಗಳನ್ನು ಅವತೀರ್ಣಗೊಳಿಸಿದ್ದೇವೆ. ಮುಂದೆ ನೇರಮಾರ್ಗದ ಕಡೆಗೆ ಅಲ್ಲಾಹನೇ ತಾನಿಚ್ಛಿಸಿದವರಿಗೆ ಮಾರ್ಗದರ್ಶನ ಮಾಡುತ್ತಾನೆ. ನಾವು ಅಲ್ಲಾಹ್ ಮತ್ತು ಸಂದೇಶವಾಹಕರ ಮೇಲೆ ವಿಶ್ವಾಸವಿರಿಸಿದ್ದೇವೆಂದೂ ನಾವು ಅನುಸರಣೆಯನ್ನು ಸ್ವೀಕರಿಸಿದ್ದೇವೆಂದೂ ಅವರು ಹೇಳುತ್ತಾರೆ." (ಅನ್ನೂರ್: 46-47)

"ಮತ್ಸ್ಯದವರನ್ನು ನಾವು ಗೌರವಿಸಿದೆವು. ಅವರು ಕೋಪಗೊಂಡು ಹೊರಟು ಹೋಗಿದ್ದ ಸಂದರ್ಭವನ್ನು ಸ್ಮರಿಸಿರಿ. ಅವರನ್ನು ನಾವು ಹಿಡಿಯಲಾರೆವೆಂದು ಅವರು ಭಾವಿಸಿದ್ದರು. ಕೊನೆಗೆ ಅವರು ಅಂಧಕಾರದೊಳಗಿಂದ, 'ನಿನ್ನ ಹೊರತು ಅನ್ಯ ದೇವನಿಲ್ಲ. ನೀನು ಪರಮ ಪಾವನನು. ನಿಶ್ಚಯವಾಗಿಯೂ ನಾನು ಅಪರಾಧವೆಸಗಿದೆನು' (ಎಂದು) ಕೂಗಿ ಪ್ರಾರ್ಥಿಸಿದರು." (ಅಲ್ ಅಂಬಿಯಾ: 87)

"ನೀನು ಕರುಣಾಳುಗಳಲ್ಲಿ ಅತ್ಯಂತ ಕರುಣಾಳು ಆಗಿರುತ್ತಿ."
(ಅಲ್ ಅಂಬಿಯಾ: 83)

"ನಿಶ್ಚಯವಾಗಿಯೂ ಅಲ್ಲಾಹ್ ಸತ್ಯವಿಶ್ವಾಸಿಗಳ ಪರವಾಗಿ ರಕ್ಷಣೆ ಮಾಡುತ್ತಾನೆ. ಖಂಡಿತವಾಗಿಯೂ ಅಲ್ಲಾಹ್ ಯಾವುದೇ ವಿಶ್ವಾಸಘಾತುಕ ಕೃತಘ್ನನನ್ನು ಮೆಚ್ಚುವುದಿಲ್ಲ."
(ಅಲ್ ಹಜ್ಜ್: 38)

"ಓ ನನ್ನ ಪ್ರಭೂ! ನಿನ್ನನ್ನು ಪ್ರಾರ್ಥಿಸಿ ನಾನೆಂದೂ ನಿರಾಶನಾಗಲಿಲ್ಲ."
(ಮರ್ಯಮ್: 4)

"ಬೆಳಗು ಬೈಗುಗಳಲ್ಲಿ ಕೀರ್ತನೆ ಮಾಡಿರೆಂದು ಅವರಿಗೆ ಸಂಜ್ಞೆಯ ಮೂಲಕ ಆದೇಶಿಸಿದರು." (ಮರ್ಯಮ್: 11)

## ಆತ್ಮಶುದ್ಧಿ

"ನಾವು ಮಾನವನನ್ನು ಅತ್ಯುತ್ತಮ ಪ್ರಕೃತಿಯಲ್ಲಿ ಸೃಷ್ಟಿಸಿರುತ್ತೇವೆ. ತರುವಾಯ ನಾವು ಅವನನ್ನು ಪಲ್ಲಟಗೊಳಿಸಿ, ನೀಚರಲ್ಲಿ ಅತ್ಯಂತ ನೀಚನಾಗಿ ಮಾಡಿದೆವು

ಆದರೆ, ವಿಶ್ವಾಸವಿರಿಸಿಕೊಂಡ ಮತ್ತು ಸತ್ಕರ್ಮವೆಸಗುತ್ತಿದ್ದವರ ಹೊರತು. ಅವರಿಗೆ ಎಂದೂ ಮುಗಿಯದಂತಹ ಸತ್ಫಲವಿದೆ." (ಅತ್ತೀನ್: 4–5)

"(ಆದುದರಿಂದ) ಉಪದೇಶದಿಂದ ಪ್ರಯೋಜನವಾಗುವುದಿದ್ದರೆ ನೀವು ಉಪದೇಶ ನೀಡಿರಿ. ಭಯಭಕ್ತಿಯುಳ್ಳವನು ಉಪದೇಶವನ್ನು ಸ್ವೀಕರಿಸಿಕೊಳ್ಳುವನು ಮತ್ತು ಅದರಿಂದ ದೂರ ಉಳಿಯುವವನು ಅತ್ಯಂತ ಭಾಗ್ಯಹೀನನು. ಅವನು ಘೋರ ಅಗ್ನಿಯಲ್ಲಿ ಬೀಳುವನು. ಅನಂತರ ಅವನು ಅದರಲ್ಲಿ ಸಾಯಲಿಕ್ಕೂ ಇಲ್ಲ, ಬದುಕಲಿಕ್ಕೂ ಇಲ್ಲ.

ಪಾವಿತ್ರ್ಯವನ್ನು ಕೈಗೊಂಡವನು, ತನ್ನ ಪ್ರಭುವಿನ ನಾಮವನ್ನು ಸ್ಮರಿಸಿದವನು ಮತ್ತು ನಮಾಝ್ ಮಾಡಿದವನು ಯಶಸ್ವಿಯಾಗಿಬಿಟ್ಟನು. ಆದರೆ ನೀವು ಇಹ ಲೋಕ ಜೀವನಕ್ಕೆ ಆದ್ಯತೆ ಕೊಡುತ್ತೀರಿ. ವಸ್ತುತಃ ಪರಲೋಕವು ಹೆಚ್ಚು ಉತ್ತಮವೂ ಶಾಶ್ವತವೂ ಆಗಿದೆ. ಇದನ್ನೇ ಹಿಂದೆ ಬಂದಿದ್ದ ಗ್ರಂಥಗಳಲ್ಲಿ–ಇಬ್‌ರಾಹೀಮ್ ಮತ್ತು ಮೂಸಾರ ಗ್ರಂಥಗಳಲ್ಲಿ ಹೇಳಲಾಗಿತ್ತು." (ಅಲ್ ಅಅ್‌ಲಾ: 9–19)

"ಮಾನವ ಚಿತ್ತದ ಹಾಗೂ ಅದನ್ನು ಸುಗಮಗೊಳಿಸಿದವನಾಣೆ. ಆ ಬಳಿಕ ಅವನು ಅದರ ದುಷ್ಟತೆಯನ್ನೂ ಅದರ ಸಾತ್ವಿಕತೆಯನ್ನೂ ಅದಕ್ಕೆ ಪ್ರೇರೇಪಿಸಿದನು. ಖಂಡಿತವಾಗಿಯೂ ತನ್ನ ಆತ್ಮವನ್ನು ಸಂಸ್ಕರಿಸಿಕೊಂಡವನು ವಿಜಯಿಯಾದನು ಮತ್ತು ಅದನ್ನು ದಮನಿಸಿದವನು ಸೋಲುಂಡನು." (ಅಶ್ಶಮ್ಸ್: 7–10)

"ವಾಸ್ತವದಲ್ಲಿ ನೀವು ಶೀಘ್ರ ಪ್ರಾಪ್ತವಾಗುವ ವಸ್ತು(ಇಹಲೋಕ)ವನ್ನು ಪ್ರೀತಿಸುತ್ತೀರಿ ಮತ್ತು ಪರಲೋಕವನ್ನು ಬಿಟ್ಟುಬಿಡುತ್ತೀರಿ." (ಅಲ್ ಕಿಯಾಮ: 20–21)

"ಆದರೆ, ಅವನು ಸತ್ಯವೆಂದು ಅಂಗೀಕರಿಸಲೂ ಇಲ್ಲ. ನಮಾಝ್ ನಿರ್ವಹಿಸಲೂ ಇಲ್ಲ. ನಿಜವಾಗಿ ಅವನು ಸುಳ್ಳಾಗಿಸಿದನು ಮತ್ತು ವಿಮುಖನಾದನು." (ಅಲ್ ಕಿಯಾಮ: 31–32)

"ಮಾನವನ ಮೇಲೆ ಶಾಪವಿರಲಿ! ಎಂತಹ ಕಠೋರ ಸತ್ಯಧಿಕ್ಕಾರಿಯವನು." (ಅಬಸ: 17)

"ಖಂಡಿತ ಅಲ್ಲ, ಅಲ್ಲಾಹನು ಇವನಿಗೆ ಆಜ್ಞಾಪಿಸಿದ್ದ ಕರ್ತವ್ಯವನ್ನು ಇವನು ನೆರವೇರಿಸಲಿಲ್ಲ." (ಅಬಸ: 23)

"ನಾವು ಅವನಿಗೆ ಮಾರ್ಗದರ್ಶನ ಮಾಡಿದೆವು. ಅವನು ಕೃತಜ್ಞತೆ ಸಲ್ಲಿಸುವವನಾಗಲಿ ಅಥವಾ ಕೃತಘ್ನನಾಗಲಿ." (ಅದ್ದಹ್ರ್: 3)

"ಅಲ್ಲಾಹನ ಅನುಗ್ರಹದಿಂದ ನಿರಾಶರಾಗಬೇಡಿರಿ. ಅವನ ಅನುಗ್ರಹದಿಂದ ಸತ್ಯನಿಷೇಧಿಗಳು ಮಾತ್ರ ನಿರಾಶರಾಗುತ್ತಾರೆ." (ಯೂಸುಫ್: 87)

“(ಸಂದೇಶವಾಹಕರೇ, ನನ್ನ ಪರವಾಗಿ) ಹೇಳಿರಿ: ತಮ್ಮ ಮೇಲೆಯೇ ಅತಿರೇಕವೆಸಗಿಕೊಂಡಿರುವ ನನ್ನ ದಾಸರೇ, ಅಲ್ಲಾಹನ ಕರುಣೆಯ ಬಗ್ಗೆ ನಿರಾಶರಾಗಬೇಡಿರಿ. ನಿಶ್ಚಯವಾಗಿಯೂ ಅಲ್ಲಾಹ್ ಸಕಲ ಪಾಪಗಳನ್ನು ಕ್ಷಮಿಸಿಬಿಡುತ್ತಾನೆ. ಅವನಂತೂ ಕ್ಷಮಾಶೀಲನೂ ಕರುಣಾನಿಧಿಯೂ ಆಗಿರುತ್ತಾನೆ. ನಿಮ್ಮ ಪ್ರಭುವಿನೆಡೆಗೆ ಮರಳಿ ಬನ್ನಿರಿ ಮತ್ತು ಅವನ ಶರಣಾಗತ ದಾಸರಾಗಿಬಿಡಿರಿ. ನಿಮ್ಮ ಮೇಲೆ ಯಾತನೆ ಎರಗಿ ಬಿಡುವ ಹಾಗೂ ಮತ್ತೆಲ್ಲಿಂದಲೂ ನಿಮಗೆ ಸಹಾಯ ಸಿಗಲಾರದ ಸ್ಥಿತಿ ಬರುವುದಕ್ಕೆ ಮುಂಚೆ.” (ಅಝ್ಝುಮರ್: 53–54)

“ಓ ಪೈಗಂಬರರೇ! ನಾನು ಮಹಾ ಕ್ಷಮಾಶೀಲನೂ ಕರುಣಾನಿಧಿಯೂ ಆಗಿರುತ್ತೇನೆಂದು ನನ್ನ ದಾಸರಿಗೆ ತಿಳಿಸಿಬಿಡಿರಿ. ಇದರೊಂದಿಗೇ ನನ್ನ ಯಾತನೆಯೂ ವೇದನಾಯುಕ್ತವಾಗಿದೆ (ಎಂದೂ ತಿಳಿಸಿಬಿಡಿರಿ).” (ಅಲ್ ಹಿಜ್ರ್: 49–50)

“ಅವಿವೇಕದಿಂದ ಕೆಟ್ಟ ಕಾರ್ಯವೇನಾದರೂ ಎಸಗಿ ಅನಂತರ ಶೀಘ್ರವೇ 'ತೌಬಾ' ಮಾಡುವವರ (ಪಶ್ಚಾತ್ತಾಪ ಪಟ್ಟು ಮರಳುವವರ) ತೌಬಾ ಮಾತ್ರ ಅಲ್ಲಾಹನಿಂದ ಸ್ವೀಕರಿಸಲ್ಪಡುವುದೆಂಬುದನ್ನು ತಿಳಿದಿರಬೇಕು. ಅಲ್ಲಾಹನು ಇಂತಹವರ ಮೇಲೆ ಪುನಃ ತನ್ನ ಕೃಪಾಕಟಾಕ್ಷ ಬೀರುತ್ತಾನೆ. ಅಲ್ಲಾಹನು ಸರ್ವಜ್ಞನೂ ಯುಕ್ತಿಪೂರ್ಣನೂ ಆಗಿರುತ್ತಾನೆ. ಆದರೆ, ಪಾಪಕಾರ್ಯಗಳನ್ನು ಮಾಡುತ್ತಲೇ ಇದ್ದು ಕೊನೆಗೆ ಮರಣವು ಆಸನ್ನವಾದಾಗ, ಈಗ ನಾನು ತೌಬಾ ಮಾಡುವೆ (ಪಶ್ಚಾತ್ತಾಪ ಪಟ್ಟೆ) ಎನ್ನುವವನಿಗೆ ತೌಬಾ ಇಲ್ಲ. ಅದೇ ರೀತಿಯಲ್ಲಿ ಕೊನೆಯುಸಿರಿನ ತನಕವೂ ಸತ್ಯನಿಷೇಧಿ ಆಗಿರುವವರಿಗೂ ತೌಬಾ ಇಲ್ಲ. ಇಂತಹವರಿಗೆ ನಾವು ವೇದನಾಯುಕ್ತ ಶಿಕ್ಷೆಯನ್ನು ಸಿದ್ಧಗೊಳಿಸಿಟ್ಟಿರುವೆವು.” (ಅನ್ನಿಸಾ: 17–18)

“ಹೇಳಿರಿ– ಸಕಲ ವಸ್ತುಗಳ ಸೃಷ್ಟಿಕರ್ತನು ಅಲ್ಲಾಹನು ಮಾತ್ರ ಮತ್ತು ಅವನು ಏಕೈಕನೂ ಅಜೇಯನೂ ಆಗಿರುತ್ತಾನೆ.” (ಅರ್ರಅ್‌ದ್: 16)

“ಆಕಾಶಗಳಲ್ಲೂ ಭೂಮಿಯಲ್ಲೂ ಇರುವ ಪ್ರತಿಯೊಂದು ವಸ್ತುವೂ ಇಚ್ಛಾಪೂರ್ವಕವಾಗಿಯೋ ಅನಿಚ್ಛಾಪೂರ್ವಕವಾಗಿಯೋ ಸಾಷ್ಟಾಂಗ ಮಾಡುತ್ತಿರುವುದು ಅಲ್ಲಾಹನಿಗೇ ಆಗಿರುತ್ತದೆ ಮತ್ತು ಸಕಲ ವಸ್ತುಗಳ ನೆರಳುಗಳು ಬೆಳಗು–ಬೈಗುಗಳಲ್ಲಿ ಅವನ ಮುಂದೆ ಬಾಗುತ್ತವೆ.” (ಅರ್ರಅ್‌ದ್: 15

“ತಮ್ಮ ಪ್ರಭುವಿನ ಕಡೆಗೆ ಓಗೊಟ್ಟವರಿಗೆ ಉತ್ತಮ ಪ್ರತಿಫಲವಿದೆ.” (ಅರ್ರಅ್‌ದ್: 18

“ಇಂತಹವರೇ (ಈ ಪ್ರವಾದಿಯ ಆಹ್ವಾನವನ್ನು) ಸ್ವೀಕರಿಸಿದ್ದಾರೆ ಮತ್ತು ಅವರ ಹೃದಯಗಳಿಗೆ ಅಲ್ಲಾಹನ ಸ್ಮರಣೆಯಿಂದ ಶಾಂತಿಯೊದಗುತ್ತದೆ. ಕೇಳಿರಿ

ಮನಶ್ಶಾಂತಿಯೊದಗುವುದು ಅಲ್ಲಾಹನ ಸ್ಮರಣೆಯಿಂದಲೇ ಎಂಬುದು ಖಚಿತ. ಸತ್ಯಾಹ್ವಾನವನ್ನು ಸ್ವೀಕರಿಸಿ ಸತ್ಕರ್ಮವೆಸಗಿದವರು ಅದೃಷ್ಟಶಾಲಿಗಳು. ಅವರಿಗೆ ಅತ್ಯುತ್ತಮ ಅಂತಿಮ ನೆಲೆ ಇದೆ." (ಅರ್ರಅ್‌ದ್: 28-29)

"ಹೇಳಿರಿ- ಅವನೇ ನನ್ನ ಪಾಲಕ ಪ್ರಭು. ಅವನ ಹೊರತು ಆರಾಧ್ಯನಾರೂ ಇಲ್ಲ. ನಾನು ಅವನ ಮೇಲೆಯೇ ಭರವಸೆಯನ್ನಿರಿಸಿದೆ. ಅವನೇ ನನ್ನ ಆಶ್ರಯದಾತ." (ಅರ್ರಅ್‌ದ್: .30)

"ಹೇಳಿರಿ- ನನ್ನ ನಮಾಝ್, ನನ್ನ ಸರ್ವ ಉಪಾಸನಾವಿಧಿಗಳು, ನನ್ನ ಜೀವನ ಮತ್ತು ನನ್ನ ಮರಣ ಎಲ್ಲವೂ ಯಾವ ಸಹಭಾಗಿಯೂ ಇಲ್ಲದ ಸರ್ವಲೋಕಪಾಲಕ ನಿಗಾಗಿದೆ." (ಅಲ್ ಅನ್‌ಆಮ್: 162)

"ಅವರು ಹಾಗೆ ಮಾಡುತ್ತಿದ್ದರೆ ನಾವು ಅವರಿಗೆ ನಮ್ಮ ಕಡೆಯಿಂದ ಮಹಾ ಪ್ರತಿಫಲ ನೀಡುತ್ತಿದ್ದೆವು ಮತ್ತು ನಾವು ಅವರಿಗೆ ನೇರಮಾರ್ಗ ತೋರಿಸುತ್ತಿದ್ದೆವು. ಅಲ್ಲಾಹ್ ಮತ್ತು ಸಂದೇಶವಾಹಕರನ್ನು ಅನುಸರಿಸುವವರು. ಅಲ್ಲಾಹನಿಂದ ಸಕಲ ಸೌಭಾಗ್ಯಗಳನ್ನು ಹೊಂದಿದ ಪ್ರವಾದಿಗಳ, ಸತ್ಯಸಂಧರ, ಹುತಾತ್ಮರ ಮತ್ತು ಸಜ್ಜನರ ಸಹವಾಸದಲ್ಲಿರುವವರು. ಅದೆಂತಹ ಉತ್ತಮ ಸಂಗಾತಿಗಳವರು! ಇದು ಅಲ್ಲಾಹನ ಕಡೆಯಿಂದ ಒದಗುವ ನೈಜ ಅನುಗ್ರಹವಾಗಿರುತ್ತದೆ. ನಿಜಸ್ಥಿತಿಯನ್ನರಿಯಲು ಅಲ್ಲಾಹನ ದಿವ್ಯಜ್ಞಾನವೇ ಸಾಕು." (ಅನ್ನಿಸಾ: 67-70)

"ಅಲ್ಲಾಹನಿಗೆ ಶರಣು ಹೋಗಿ ಸುನೀತನಾಗಿ ಏಕನಿಷ್ಠೆಯಿಂದ ಇಬ್‌ರಾಹೀಮರ- ಅಲ್ಲಾಹನು ತನ್ನ ಮಿತ್ರನಾಗಿಸಿಕೊಂಡ ಆ ಇಬ್‌ರಾಹೀಮರ ಸಂಪ್ರದಾಯವನ್ನು ಅನುಸರಿಸುವವನಿಗಿಂತ ಉತ್ತಮವಾದ ಜೀವನ ಪದ್ಧತಿ ಇನ್ನಾರದ್ದಾಗಿರಲು ಸಾಧ್ಯ? ಭೂಮಿ-ಆಕಾಶಗಳೆಲ್ಲವೂ ಅಲ್ಲಾಹನದು. ಅಲ್ಲಾಹನು ಸಮಸ್ತ ವಸ್ತುಗಳನ್ನು ಆವರಿಸಿ ಕೊಂಡಿದ್ದಾನೆ." (ಅನ್ನಿಸಾ; 125-126)

"ಹೇಳಿರಿ: ನಾನು ಮುಂಜಾವಿನ ಪ್ರಭುವಿನ ಅಭಯ ಯಾಚಿಸುತ್ತೇನೆ. ಅವನು (ಅಲ್ಲಾಹನು) ಸೃಷ್ಟಿಸಿದ ಸಕಲ ವಸ್ತುಗಳ ಕೇಡಿನಿಂದ. ಇರುಳಿನ ಅಂಧಕಾರವು ಕವಿದಾಗ ಉಂಟಾಗುವ ಕೇಡಿನಿಂದ. ಗಂಟುಗಳ ಮೇಲೆ ಊದುವವರ(ಅಥವಾ ಹಾಗೆ ಊದುವ ಸ್ತ್ರೀಯರ) ಕೇಡಿನಿಂದ ಮತ್ತು ಮತ್ಸರಿಯು ಮತ್ಸರ ಪಡುವಾಗ ಅವನ ಕೇಡಿನಿಂದ (ಅಭಯ ಯಾಚಿಸುತ್ತೇನೆ)." (ಅಲ್ ಫಲಕ್: 1-5)

"ಹೇಳಿರಿ: ನಾನು ಮಾನವರ ಪ್ರಭು, ಮಾನವರ ಸಾಮ್ರಾಟನ, ಮಾನವರ ನೈಜ ಆರಾಧ್ಯನ ಅಭಯ ಯಾಚಿಸುತ್ತೇನೆ. ಪದೇ ಪದೇ ಬಂದು ದುಷ್ಪ್ರೇರಣೆ ನೀಡುವವನ ಕೇಡಿನಿಂದ. ಜನರ ಮನಸ್ಸುಗಳಲ್ಲಿ ದುಷ್ಪ್ರೇರಣೆ ಉಂಟುಮಾಡುವವನ

ಕೇಡಿನಿಂದ. ಅವನು ಜಿನ್ನ್‌ಗಳ ಪೈಕಿಯಾಗಿರಲಿ, ಮಾನವರ ಪೈಕಿಯಾಗಿರಲಿ."

(ಅನ್ನಾಸ್: 1–6)

"ಅಲ್ಲಾಹನ ವತಿಯಿಂದ ಒಂದು ಪ್ರಕಾಶ ಮತ್ತು ಒಂದು ಸುವ್ಯಕ್ತ ಗ್ರಂಥವು ನಿಮ್ಮ ಬಳಿಗೆ ಬಂದುಬಿಟ್ಟಿದೆ. ಅದರ ಮೂಲಕ ಅಲ್ಲಾಹನು ತನ್ನ ಸಂಪ್ರೀತಿಯನ್ನು ಅಪೇಕ್ಷಿಸುವವರಿಗೆ ರಕ್ಷಾಮಾರ್ಗವನ್ನು ತೋರಿಸಿ ತನ್ನ ಇಚ್ಛೆಯಿಂದ ಅವರನ್ನು ಅಂಧಕಾರಗಳಿಂದ ಹೊರ ತೆಗೆದು ಪ್ರಕಾಶದ ಕಡೆಗೆ ಒಯ್ಯುತ್ತಾನೆ ಮತ್ತು ಸನ್ಮಾರ್ಗದತ್ತ ಅವರಿಗೆ ಮಾರ್ಗದರ್ಶನ ಮಾಡುತ್ತಾನೆ."

(ಅಲ್ ಮಾಇದ: 15–16)

"ಸತ್ಯವಿಶ್ವಾಸಿಗಳೇ 'ರುಕೂಅ್' ಮಾಡಿರಿ (ಬಾಗಿರಿ) ಮತ್ತು 'ಸುಜೂದ್' ಮಾಡಿರಿ (ಸಾಷ್ಟಾಂಗವೆರಗಿರಿ) ಮತ್ತು ನಿಮ್ಮ ಪ್ರಭುವಿನ ದಾಸ್ಯ–ಆರಾಧನೆ ಮಾಡಿರಿ. ಸತ್ಕರ್ಮಗಳನ್ನೆಸಗಿರಿ. ಇದರಿಂದಲೇ ನಿಮಗೆ ಯಶಸ್ಸು ಸಿಗುವುದೆಂದು ನಿರೀಕ್ಷಿಸಬಹುದು."

(ಅಲ್ ಹಜ್ಜ್: 77)

❖ ❖ ❖ ❖